2. ಹೆಚ್ಚುವರಿ ವಿಭಾಗ : ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಹೆಚ್ಚಳದಿಂದಾಗಿ ಹೆಚ್ಚುವರಿ ವಿಭಾಗ ತೆರೆಯಲು ಅನುಧಾನ ರಹಿತ ಷರತ್ತಿನ ಮೇಲೆ ಅನುಮತಿ ನೀಡಲಾಗಿತ್ತು. ಆದರೆ ಈಗ ಈ ಹೆಚ್ಚುವರಿ ವಿಭಾಗದ ಅಗತ್ಯತೆಯನ್ನು ಮನಗಂಡು ಮತ್ತು ಅವರ ಸಮಸ್ಯೆಯನ್ನು ಅರಿತು ಸರ್ಕಾರ ಈ ನೌಕರರಿಗೆ ಅನುದಾನ ನೀಡಲು ತೀರ್ಮಾನಿಸಿದೆ. ಇದಕ್ಕಾಗಿ ಸರ್ಕಾರ ಸುಮಾರು ರೂ. 2.00 ಕೋಟಿ ಹೆಚ್ಚಾಗಿ ಖರ್ಚು ಮಾಡಬೇಕಾಗುತ್ತದೆ.

3. ಬೋಧಕೇತರ ಸಿಬ್ಬಂದಿ : ಅನುದಾನಿತ ಶಾಲಾ ಕಾಲೇಜುಗಳಲ್ಲಿ ಕೆಲಸ ಮಾಡುವ ಬೋಧಕೇತರ ಸಿಬ್ಬಂದಿಗೆ ಅನುದಾನ ನೀಡಲು ಬಹಳ ದಿನಗಳಿಂದ ಬೇಡಿಕೆ ಇದೆ. ಆರ್ಥಿಕ ದಿಗ್ಭಂದನ ವಿದ್ದುದರಿಂದ ಪ್ರೌಢಶಾಲೆಗೆ ಒಬ್ಬ ಎರಡನೇ ದರ್ಜೆ ಗುಮಾಸ್ತ, ಪದವೀ ಪೂರ್ವ ಕಾಲೇಜಿಗೆ ಒಬ್ಬ ಪ್ರಥಮ ದರ್ಜೆ ಗುಮಾಸ್ತನಿಗೆ ಹಾಗೂ ವಿಜ್ಞಾನ ವಿಭಾಗ ವಿರುವ ಕಡೆ ಒಬ್ಬ ಪ್ರಯೋಗಾಲಯ ಸಹಾಯಕನಿಗೆ ಅನುದಾನ ನೀಡಲು ಈ ಹಿಂದೆ ಸರ್ಕಾರ ಸಮ್ಮಿತಿಸಿತ್ತು. ಈಗ ಇವರ ಬೇಡಿಕೆಯಂತೆ 1.6.92ರ ಮೊದಲು ನೇಮಕಗೊಂಡ ಎಲ್ಲಾ ಅನುಮೋದಿತ ಬೋಧಕೇತರ ಸಿಬ್ಬಂದಿಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಇದಕ್ಕಾಗಿ ಸರ್ಕಾರಕ್ಕೆ ಸುಮಾರು ರೂ. 1.25 ಕೋಟಿ ಹೆಚ್ಚು ಹೊರೆ ಬೀಳಲಿದೆ.

ಈಗ ಬಹಳ ದಿವಸಗಳಿಂದ ಅವರು ಉಪವಾಸತ್ಯಾಗ್ರಹವನ್ನು ಮಾಡುತ್ತಿರುವುದು ಸಾರ್ವಜನಿಕರ ಮತ್ತು ಸರ್ಕಾರದ ಗಮನಕ್ಕೆ ಬಂದಿದೆ. ಅವರು ಈ ಉಪವಾಸವನ್ನು ನಿಲ್ಲಿಸಿ ಯಾರ್‍ಯಾರಿಗೆ ಏನೇನು ಜವಾಬ್ದಾರಿಯನ್ನು ನಾವು ವಹಿಸಿದ್ದೇವೆ ಅದನ್ನು ಪ್ರಾಮಾಣಿಕತೆಯಿಂದ ಕೆಲಸಮಾಡಲು ಕೂಡಲೇ ಅವರವರ ಸ್ಥಾನಗಳಿಗೆ ವಾಪಸು ಹೋಗಬೇಕೆಂದು ಈ ಸದನದ ಮುಖಾಂತರ ಅವರಲ್ಲಿ ಪ್ರಾರ್ಥಿಸುತ್ತೇನೆ.

(ಮಾನ್ಯ ರಾಜ್ಯಪಾಲರ ಭಾಷಣಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆ) (ಮುಂದುವರೆದ ಚರ್ಚೆ)

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಭಾಧ್ಯಕ್ಷರೆ, 1 ವರ್ಷ 3 ತಿಂಗಳ ನಂತರ ಅದು ಮಾನ್ಯ ರಾಜ್ಯಪಾಲರ ಭಾಷಣ ಇರಬಹುದು ಅಥವಾ ಈ ಸದನದಲ್ಲಿ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ಚರ್ಚೆಯ ಸಂಬಂಧದಲ್ಲಿರುವ ವಾತಾವರಣವನ್ನು ನೋಡಿದರೆ ಎಲ್ಲಾ ಹುರುಪು, ಉತ್ಸಾಹಗಳನ್ನು ಕಳೆದುಕೊಂಡಿರುವುದನ್ನು ನಾವು ನೋಡುತ್ತಿದ್ದೇವೆ. ಒಂದು ರೀತಿಯಲ್ಲಿ ಮಾನ್ಯ ರಾಜ್ಯಪಾಲರುಮಾಡಬೇಕಾದ ಒಂದು ರಿಚ್ಯುಯಲ್ ಎಂದು ತಿಳಿದುಕೊಂಡು ಭಾಷಣವನ್ನು ಇಲ್ಲಿ ಮಂಡಿಸಿ ಅದರ ವಿರುದ್ಧ ರಿಚ್ಯುಯಲಿಸ್ಟಿಕ್ ಪ್ರೊಟೆಸ್ಟ್‌ನ್ನೂ ಕೂಡ ನೋಡುತ್ತಿದ್ದೇವೆ. ನಮ್ಮಮುಂದಿಟ್ಟಿರುವ ಭಾಷಣವನ್ನು ನೋಡಿದರೆ ಇದು ಒಂದು ರೀತಿಯ ಮ್ಯಾನ್ಯುಫ್ಯಾಕಚರ್ಡ್ ಸ್ಪೀಚ್ ಎಂದು ನನಗಿಸುತ್ತದೆ. ಯಾವುದೇ ರೀತಿಯ ಇನವಾಲ್ವಮೆಂಟ್ ಇದರಲ್ಲಿಲ್ಲ. ಆದರೆ ಇರತಕ್ಕ ಒಂದೇ ಒಂದು ಇನ್‌ವಾಲ್ವ್‌ಮೆಂಟ್ ಎಂದರೆ ಮಾನ್ಯ ರಾಜ್ಯಪಾಲರು ಕನ್ನಡದಲ್ಲಿ" ನನ್ನ ಸರ್ಕಾರ. ಎಂದು 38 ಸಾರಿ ಹೇಳಿದ್ದಾರೆ. ಆದರೆ ಇಂಗ್ಲೀಷ್‌ನಲ್ಲಿ ಮೈ ಗೌರ್ನಮೆಂಟ್ ಎಂದು 36 ಸಾರಿ ಹೇಳಿದ್ದಾರೆ. 2 ಸಾರಿ ಏತಕ್ಕೆ ಕಡಿಮೆ ಹೇಳಿದ್ದಾರೋ ಗೊತ್ತಿಲ್ಲ.

ಮಾನ್ಯ ರಾಜ್ಯಪಾಲರ ಇನ್‌ವಾಲ್ವ್‌ಮೆಂಟ್ ಕೇವಲ ಇದೊಂದೇ ಸಾರಿ ಎಂದು ನನಗಿಸುತ್ತದೆ. ಪ್ರಾಯಶಃ ಆರ್ಡಿನೆನ್ಸನ್ನು ಕಳುಹಿಸುವ ರೀತಿಯಲ್ಲಿ ಈ ಭಾಷಣವನ್ನು ರಾಜ್ಯಪಾಲರಿಗೆ ಏನಾದರೂ ನೀವು ಕಳುಹಿಸಿದ್ದಿದ್ದರೆ ಅನೇಕ ಆರ್ಡಿನೆನ್ಸನ್ನು ವಾಪಸ್ಸು ಕಳುಹಿಸಿದ ರೀತಿಯಲ್ಲೇ ಈ ಭಾಷಣವನ್ನು ವಾಪಸ್ಸು ಕಳುಹಿಸಿಬಿಡುತ್ತಿದ್ದರು. ಆದರೆ ಆ ಸ್ವಾತಂತ್ರ್ಯ ಇಲ್ಲ. ಆದ್ದರಿಂದ ನೀವು ಯಾರೋ ಮ್ಯಾನುಫ್ಯಾಕ್ಚರ್ ಮಾಡಿದಂಥ ಭಾಷಣವನ್ನು ಅವರು ಓದಲೇಬೇಕಾದ ಪರಿಸ್ಥಿತಿಗೆ ತಂದಿಟ್ಟಿದ್ದೀರಿ. ಈ ಭಾಷಣದ ಬಗ್ಗೆ ಬಹಳ ಆಶ್ಚರ್ಯಕರವಾದ ಒಂದು ಅಂಶವೆಂದರೆ, ಇದೇ ಸಂದರ್ಭದಲ್ಲಿ ನನ್ನ ಸರ್ಕಾರವು ತನ್ನ ಅಧಿಕಾರಾವಧಿಯ "ಸ್ವಾಮಿ, ನಾನಾದರೂ ಕೇಳುತ್ತೇನೆ, ಯಾರೇ ಆಗಲಿ ನಮಗೆ ನಾವೇ ಅಭಿನಂದನೆಗಳನ್ನು ಸಲ್ಲಿಸಿಕೊಳ್ಳುತ್ತೇವೆಯೇ?" ನನಗೆ ಗೊತ್ತಿರುವಂತೆ, ನನಗೆ ನಾವೇ ಅಭಿನಂದನೆಗಳನ್ನು ಸಲ್ಲಿಸಿಕೊಳ್ಳಬಾರದು. ನನಗೆ ನಾನೇ ಶ್ರದ್ಧಾಂಜಲಿಯನ್ನೂ ಅರ್ಪಿಸಿಕೊಳ್ಳಬಾರದು. ಇದನ್ನು ಬೇರೆಯವರಿಗೆ ಬಿಡಬೇಕು. ಇಂಥ ಒಂದು ವಿಚಿತ್ರವಾದ ವಾಕ್ಯವನ್ನು ಇಲ್ಲಿ ನಾನು ನೋಡುತ್ತಿದ್ದೇನೆ.

ಆಮೇಲೆ ಒಂದು ಹೇಳುತ್ತಾರೆ. "ಒಂದು ವರ್ಷದ ಅವಧಿಯಲ್ಲಿ ರಚನಾತ್ಮಕವಾದ ಬದಲಾವಣೆಯನ್ನು ನಾವು ತಂದಿದ್ದೇವೆ ಎಂದು".

ಅಧ್ಯಕ್ಷರು : ನಾಟಕ ನೋಡಿದ್ದೀರೋ?

ಶ್ರೀ ಎಸ್. ಸುರೇಶ್ ಕುಮಾರ್ : ಇಲ್ಲ.

ಅಧ್ಯಕ್ಷರು : ರಾಜ ಬರುತ್ತಾನೆ, ರಾಜ ಕೇಳುತ್ತಾನೆ, ಏನು ಮಂತ್ರಿವರ್ಯರೇ, ನಮ್ಮ ರಾಜ್ಯದಲ್ಲಿ ಪ್ರಜೆಗಳು ಸುಖವಾಗಿದ್ದಾರೆಯೆ? ಹೌದು, ಮಹಾಸ್ವಾಮಿ ತಮ್ಮ ರಾಜ್ಯದಲ್ಲಿ ಎಲ್ಲಾ ಪ್ರಜೆಗಳು ಕುಶಲವಾಗಿದ್ದಾರೆ ಎಂದು ಹೇಳುತ್ತಾನೆ. ರಾಜನಿಗೆ ಗೊತ್ತು ರಾಜ ಪ್ರಮುಖರು ಇರುವುದು. ಆದುದರಿಂದ ಅವರದೇ ರಾಜ್ಯ, ಅವರು ರಾಜ್ಯವನ್ನು ಚೆನ್ನಾಗಿ ನಡೆಸಿರುವುದಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಈಗ ಅದೇ ರೀತಿ ನಡೆಯುತ್ತಿರುವುದು. ತಾವು ಏನು ಹೇಳಿದಿರಿ ಅದೇ ರೀತಿ ನಾಟಕ ರಾಜನ ಪಾತ್ರ ಎಲ್ಲಾ ನಡೆಯುತ್ತಿರುವುದು.

MR. SPEAKER : Please, don't interpret in the other way don't land me in trouble. ನೀವು ಆ ರಾಜನನ್ನು ಬರುವುದಕ್ಕೆ ಬಿಡುವುದಿಲ್ಲ. ಎಷ್ಟು ಗಲಾಟೆ ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ತಾವು ಸತ್ಯವನ್ನು ಹೇಳುತ್ತಿದ್ದೀರಿ, ಅದನ್ನು ನಾನು ಪ್ರಶಂಸೆ ಮಾಡಬೇಕೇ ಬೇಡವೆ?

MR. SPEAKER : I am not undermining the importance of his Excellency. ಅವರನ್ನು ಅಲ್ಲೆ ಕೂರಿಸಿ ನೀವು ಅಲ್ಲಿ ಕುಳಿತುಕೊಂಡು ನನ್ನನ್ನು ಇಲ್ಲಿ ಕೂರಿಸಿ ಕೊಡಬಾರದ ಕಷ್ಟ ಕೊಡುತ್ತಿದ್ದಿರಿ.

+ ಶ್ರೀ ಎಸ್. ಸುರೇಶ್ ಕುಮಾರ್ : ಈ ಒಂದು ವರ್ಷದ ಅವಧಿಯಲ್ಲಿ ರಚನಾತ್ಮಕ ಬದಲಾವಣೆ ಹಾಗೂ ಬಲವರ್ಧನೆಗೆ ಒತ್ತು ನೀಡಲಾಗಿದೆ ಎಂದು ಹೇಳಿದ್ದೀರಿ. ಏನು ಸ್ವಾಮಿ ಇದು? ಆ ರೀತಿ ಕ್ವಾಲಿಟೇಟೀವ್ ಬದಲಾವಣೆ ಏನು ತಂದಿದ್ದೀರಿ? ಇವತ್ತು ನಾನು ಕಳೆದ ಒಂದು ವರ್ಷ, 4 ತಿಂಗಳಲ್ಲಿ ಆ ಸಬ್ ಇನ್ಸ್‌ಪೆಕ್ಟರ್‌ಗಳನ್ನು ಸಬ್ ರಿಜಿಸ್ಟ್ರಾರ್ ಅನ್ನು, ಇಂಜಿನಿಯರ್‌ಗಳನ್ನು ನೀವು ನೋಡಿದರೆ ಅದೇ ರೀತಿ ನಿರ್ಲಕ್ಷ್ಯತನ ಅದೇ ರೀತಿ ಭಷ್ಟಾಚಾರ, ಅದೇ ಸಂವೇದನಾರಹಿತ ನಡವಳಿಕೆಯನ್ನು ನೋಡುತ್ತೇವೆ. ಮಧ್ಯಾಹ್ನ 3 ಗಂಟೆ ಮೇಲೆ ಕಛೇರಿಯಲ್ಲಿ ಯಾರಾದರೂ ಸಿಗುತ್ತಾರೆಯೇ ನೋಡೋಣ ಬನ್ನಿ. ಜನಸಾಮಾನ್ಯರು ದೂರದೂರದ ಊರಿನಿಂದ ಬರುತ್ತಾರಲ್ಲಾ ಅವರನ್ನು ಅಧಿಕಾರಿಗಳು ಯಾವ ರೀತಿ ನೋಡಿ ಕೊಳ್ಳುತ್ತಿದ್ದಾರೆಂಬುದನ್ನು ಗಮನಿಸಿದ್ದೀರೋ? ಅದರಲ್ಲೇನಾದರೂ ಬದಲಾವಣೆ ತಂದಿದ್ದರೆ ಈ ರಚನಾತ್ಮಕ ಬದಲಾವಣೆಯನ್ನು ತಾವು ಹೇಳಬಹುದಾಗಿತ್ತು. ಇನ್ನೊಂದು ಹೇಳುತ್ತೇನೆ, ನೀವು ಜಿಲ್ಲೆಜಿಲ್ಲೆಗಳಲ್ಲಿ ಜನತಾ ದರ್ಶನ ಕಾರ್ಯಕ್ರಮ ಎಂದು ಮಾಡುತ್ತೀರಿ. ಅದನ್ನು ಬಹಳಷ್ಟು ಜನರು ಹೇಳಿದ್ದಾರೆ. ಆದರೆ ನನಗೆ ಗೊತ್ತಿರುವ ಪ್ರಕಾರ ಜನತಾ ದರ್ಶನ ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದೇ ಹೇಳಿಕೆ ಇತ್ತರು ಉದ್ಯೋಗ, ನಿವೇಶನ, ಜನತಾ ಮನೆ, ವೃದ್ಧಾಪ್ಯ ವೇತನ, ಅಂಗವಿಕಲರಿಗೆ ನೆರವು ಕೋರಿಕೆ, ಜಮೀನು ಒತ್ತುವರಿ, ಗ್ರಾಮಲೆಕ್ಕಿಗರ ಉಪಟಳ, ಈ ರೀತಿ ಸಮಸ್ಯೆಗಳು ಅವರಿಗೆ ತುಂಬಾ ಬಂದಿದ್ದವು. ಆಗ ಮುಖ್ಯ-ಮಂತ್ರಿಗಳು ಒಂದು ಆದೇಶ ನೀಡಿದ್ದಾರೆ. ನಿರುದ್ಯೋಗ ಸಮಸ್ಯೆ ಒಂದನ್ನು ಬಿಟ್ಟು ಬೇರೆ ಎಲ್ಲಾ ಅರ್ಜಿಗಳಿಗೆ ಒಂದು ತಿಂಗಳೊಳಗೆ ಪರಿಹಾರ ಸೂಚಿಸುವಂತೆ ಅಧಿಕಾರಿಗಳಿಗೆ ಮಾನ್ಯ ದೇವೇಗೌಡರು ಗಡುವು ಕೊಟ್ಟಿದ್ದರು. ಒಂದು ತಿಂಗಳಾದ ನಂತರ ಏನಾಗಿದೆ ಎಂದು ಎಲ್ಲರಿಗೂ ಗೊತ್ತಿದೆ. ಪ್ರಾಯಶಃ ಜನತಾ ದರ್ಶನದಿಂದ ಕಾಮನ್-ಮ್ಯಾನ ಆಸ್ಪಿರೇಷನ್ ಜಾಸ್ತಿ ಮಾಡಿದಿರಿ. ಆದರೆ ಪರಿಹಾರ ಇವತ್ತು ಕೊಡಲಿಲ್ಲ. ಜನರಲ್ಲಿ ರಾಜಕಾರಣಿಗಳು ಎಂದರೆ ಇವತ್ತು ಯಾವುದೇ ರೀತಿಯ ಮರ್ಯಾದೆ ಉಳಿದಿಲ್ಲ. ಪೊಲಿಟಿಷಿಯನ ಬಗ್ಗೆ ಒಂದು ಡೆಫನಿಷನ್ ಇದೆ: ``A politician is a person who shakes your hands before elections and shakes your confidence after elections" ಅದನ್ನು ಇನ್ನಷ್ಟು ಜಾಸ್ತಿ ಮಾಡುವುದಕ್ಕೆ ಇವೆಲ್ಲಾ ಪ್ರಯತ್ನಗಳು ಆಗುತ್ತಿವೆ ಎಂದು ನನ್ನ ಅನಿಸಿಕೆ. ಆಮೇಲೆ ಪುಟ-3, 4ನೇ ಪ್ಯಾರಾದಲ್ಲಿ ಬಹಳ ಹೊಗಳಿಕೊಂಡಿದ್ದಾರೆ. ನಾವು ಜಿಲ್ಲಾ ಪಂಚಾಯಿತಿ ಚುನಾವಣೆ ಮಾಡಿದೆವು, ಪಂಚಾಯಿತಿ ಚುನಾವಣೆ ಮಾಡಿದೆವು ಎಂದು. ಪ್ರಶ್ನೆ ಇರುವುದು ಬೆಂಗಳೂರು ಸಿಟಿ ಕಾರ್ಪೋರೇಷನ್ ಚುನಾವಣೆ ಏತಕ್ಕೆ ಮಾಡಲಿಲ್ಲ, ಮಂಗಳೂರು ಸಿಟಿ ಕಾರ್ಪೋರೇಷನ್ ಚುನಾವಣೆ ಏತಕ್ಕೆ ಮಾಡಲಿಲ್ಲ ಎಂದು, ಬೆಂಗಳೂರು ಚುನಾವಣೆಗೆ ನೀವು ಕೊಟ್ಟ ಕಾರಣ ಅವತ್ತು ಕಾವೇರಿ ವಿವಾದ ನಡೆಯುತ್ತಿದೆ, ಗಲಾಟೆಯಾಗುತ್ತದೆ ಎಂದು. ಜನವರಿ 5ನೇ ತಾರೀಖು ಮೈಸೂರಿನಲ್ಲಿ ಮೈಸೂರು ಬಂದ್ ಆದನಂತರ 7ನೇ ತಾರೀಖು ನಿಮಗೆ ಚುನಾವಣೆ ಮಾಡುವುದಕ್ಕಾಗುತ್ತದೆ. ಮಂಡ್ಯದಲ್ಲಿ ಪ್ರತಿನಿತ್ಯ ರಸ್ತೆ ರೊಕೋ ಮಾಡುತ್ತಿದ್ದ ಕಡೆ ನೀವು ಅಲ್ಲಿ ಕಾರ್ಪೋರೇಷನ್ ಚುನಾವಣೆ ಮಾಡುವುದಕ್ಕಾಗುತ್ತದೆ. ಆದರೆ ಬೆಂಗಳೂರಿನಲ್ಲಿ ಏತಕ್ಕೆ ಮಾಡುವುದಕ್ಕಾಗುವುದಿಲ್ಲ? ಪ್ರಾಯಶಃ

ಬೆಂಗಳೂರಿನ ಒಂದು ಹಿಡಿತವನ್ನು ಈಗ ನೀವು ಏನು ನೇರವಾಗಿ ಇಟ್ಟುಕೊಂಡಿದ್ದೀರಾ ಅದನ್ನು ಕಳೆದುಕೊಳ್ಳುವುದಕ್ಕೆ ನಿಮಗೆ ಇಷ್ಟವಿಲ್ಲ. ಅದಕ್ಕೋಸ್ಕರ ಹೋಂ ಕಮಿಷನರಿಂದ, ಹೋಂ ಸೆಕ್ರೆಟರಿಯಿಂದ ಎಲೆಕ್ಷನ್ ಕಮಿಷನರಗೆ ಪತ್ರ ಬರೆಯಿಸಿ ವಾತಾವರಣ ಸರಿಯಿಲ್ಲ ಎಂದು ಸಬೂಬು ಕೊಟ್ಟು ರಂಜಾನ್ ಹಬ್ಬಕ್ಕೆ ನಾವು ಚುನಾವಣೆ ಮಾಡಿಬಿಡುತ್ತೇವೆಂದು ಹೇಳುವುದು. ನನಗೆ ಗೊತ್ತಿದೆ, ಎಲೆಕ್ಷನ್ ಕಮಿಷನರ್ ಅವರು ಈ ಸರ್ಕಾರಕ್ಕೆ ನೀವು ಏತಕ್ಕೆ ಇನ್ನೂ ತಾರೀಖು ಗೊತ್ತು ಮಾಡಿಲ್ಲವೆಂದು ಕಾಗದ ಬರೆದರೂ ಕೂಡ ಅದನ್ನು ನೀವು ಖುರ್ಚಿ ಅಡಿಯಲ್ಲಿ ಹಾಕಿಕೊಂಡು ಕುಳಿತಿದ್ದೀರಿ, ಇದುವರೆಗೆ ಉತ್ತರ ಕೊಟ್ಟಿಲ್ಲ. 77ನೇ ತಿದ್ದುಪಡಿ ಪ್ರಕಾರ ಯಾವ ಒಂದು ಅಧಿಕಾರವನ್ನು ಸಂವಿಧಾನಾತ್ಮಕವಾಗಿ ಜನರಿಗೆ ಕೊಡಬೇಕಾಗಿತ್ತು ಅದನ್ನು ಕೊಡದೆ, ಯಾವುದೇ ಒಂದು ಕಾರ್ಪೊರೇಷನ್ ಡಿಸಾಲ್ವ ಆದ ಅಥವಾ ಎಂಡ್ ಆದ 6 ತಿಂಗಳೊಳಗೆ ಚುನಾವಣೆ ಮಾಡಬೇಕಾಗಿತ್ತು ಅದನ್ನು ಮಾಡದೆ ಸಂವಿಧಾನಾತ್ಮಕವಾಗಿ ಬಂದಿರತಕ್ಕ ಹಕ್ಕಿಗೆ ಕೂಡ ದ್ರೋಹ ಬಗೆದಿದ್ದೀರಿ ಹಕ್ಕಿತ್ತು ಅದನ್ನು ನೀವು ತಿರಸ್ಕಾರದಿಂದ ನೋಡಿದ್ದೀರೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸರ್ಕಾರ ಹೆಚ್.ಯು.ಡಿ.ಗೆ ಪತ್ರ ಬರೆದಿದ್ದರೂ ಕೂಡ ಹೇಳುತ್ತಾರಂತೆ;

``The Government would send reply to the commission after the Cheif Minister and the Cabinet took a decision on the subject''.

ಯಾವಾಗ ಕ್ಯಾಬಿನೆಟ್ ಸೇರುವುದು, ಯಾವಾಗ ಡಿಸಿಷನ್ ತೆಗೆದುಕೊಳ್ಳುವುದು ? ಅಲ್ಲಿಯವರೆಗೆ ಬೆಂಗಳೂರು ನಗರದ ನಾಗರೀಕರಿಗೆ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವುದಕ್ಕೆ ಅವಕಾಶ ಎಲ್ಲಿದೆ? ಬೆಂಗಳೂರು ಸಿಟಿ ಕಾರ್ಪೊರೇಷನ್ ಆಳುವ ಪಕ್ಷದ ಎಕ್ಸ್‌ಟೆನ್‌ಷನ್ ಕೌಂಟರ್ ಆಗಿದೆ. ಎಲ್ಲಾ ರೀತಿಯಿಂದ ನಿಮ್ಮ ಕಛೇರಿ ಆಗಿದೆ ಈ ಬೆಂಗಳೂರು ಸಿಟಿ ಕಾರ್ಪೊರೇಷನ್. ಆಳುವ ಪಕ್ಷದ ಸತತ ಚಟುವಟಿಕೆಗಳನ್ನು ನಾವು ಇಲ್ಲಿ ನೋಡುತ್ತಿದ್ದೇವೆ. ನಗರಪಾಲಿಕೆಯ ಫಂಕ್ಷನ್‌ಗಳನ್ನು ನಿಮ್ಮ ಪಕ್ಷದ ಪ್ರಚಾರ ವೇದಿಕೆ ಮಾಡಿಕೊಳ್ಳುತ್ತೀರಿ. ನನಗೆ ಬಹಳ ಆಶ್ಚರ್ಯವಾಗುತ್ತದೆ. ಒಬ್ಬ ಕಾರ್ಪೊರೇಷನ್ ಡಿವಿಜನ್ ರೆವಿನ್ಯೂ ಇನ್ಸ್‌ಪೆಕ್ಟರನ್ನು, ಜೂನಿಯರ್ ಇಂಜಿನಿಯರನ್ನು ಪೋಸ್ಟ್ ಮಾಡುತ್ತೀರಿ. ಹೀಗೆ ಡೈರೆಕ್ಟಾಗಿ ನೀವು ಎಲ್ಲವನ್ನು ಕಂಟ್ರೋಲ್ ಮಾಡುತ್ತಿದ್ದೀರಿ . ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ, ಯಾವುದೇ ಬೆಂಗಳೂರು ನಗರದ ಸಮಸ್ಯೆಯನ್ನು ಹೇಳುವುದಕ್ಕೆ ಇವತ್ತು ವೇದಿಕೆ ಇಲ್ಲ. ಬೇರೆ ಜಿಲ್ಲೆಗಳಲ್ಲಿ ಅಭಿವೃದ್ಧಿ ಕಾರ್ಯಗಳ ಉಸ್ತುವಾರಿ ಸಭೆ ನಡೆಯುತ್ತದೆಯಂತೆ, ಬೆಂಗಳೂರಿನಲ್ಲಿ ನಡೆಯುವುದಿಲ್ಲ. ಈ ಸಂದರ್ಭದಲ್ಲಿ ಒಂದು ಆಶ್ಚರ್ಯ ಸಂಗತಿಯನ್ನು ಹೇಳುತ್ತೇನೆ. ಸುಮಾರು 15 ದಿನಗಳ ಹಿಂದೆ ನನಗೆ ಒಂದು ಪತ್ರ ಬಂತು, ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಒಂದು ಸಭೆ ಕರೆದಿದ್ದೇವೆ, ನೀವು ಬರಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರು ಒಂದು ಪತ್ರ ಬರೆದರು. ನಾನು 11 ಗಂಟೆಗೆಹೋದೆ. 11.30 ಆದರೂ ಸಚಿವರು ಬರಲಿಲ್ಲ, 12 ಕ್ಕೆ ಬಂದು ಮೆಸೇಜ್ ಬಂತು, ಅವರು ಸ್ವಲ್ಪ ತಡವಾಗಿ ಬರುತ್ತಾರಂತೆ, ನಾವು ಸಭೆ ಶುರು ಮಾಡೋಣ ಎಂದು, 1.30ಕ್ಕೆ ಸಭೆ ಮುಗಿಯಿತು. ಆ ಮೆಸೇಜಿನಲ್ಲಿ ಅವರು ಹೆಲ್ತ ಚೆಕ್‌ಅಫ್‌ಗೆ

ಹೋಗಿದ್ದಾರೆಂದು ತಿಳಿಯಿತು. ನಾನು ಅದನ್ನು ನಂಬಿಬಿಟ್ಟೆ, ಇರಬಹುದು ಹೆಲ್ತ ಚೆಕಅಪಗೆ ಹೋಗಿದ್ದಾರೆ ಎಂದು. ಆ ದಿನ ಸಂಜೆವಾಣಿ ಪತ್ರಿಕೆ ನೋಡುತ್ತೇನೆ, ಆವತ್ತು ಶ್ರೀಮಾನ್ ಹೆಗಡೆಯವರು ನಾಮಿನೇಷನ್ ಫೈಲ್ ಮಾಡುವಾಗ ಮಾನ್ಯ ಸಚಿವರು ಅಲ್ಲಿಗೆ ನಿಂತುಬಿಟ್ಟಿದ್ದಾರೆ. ಆ ದಿನ ಹೆಲ್ತ ಚೆಕಅಪ್ ಬೌರಿಂಗ್ ಆಸ್ಪತ್ರೆಯಲ್ಲಿ ಆಯಿತೋ ಅಥವಾ ಕಾರ್ಯದರ್ಶಿಗಳ ಕೊಠಡಿಯಲ್ಲಿ ಆಯಿತೋ ಗೊತ್ತಿಲ್ಲ. ನಾನು ಏತಕ್ಕೆ ಹೇಳಿದೆನೆಂದರೆ ನಾಗರೀಕ ಸಮಸ್ಯೆಗಳ ಬಗ್ಗೆ ಪರಿಹಾರ ಕೊಡುವ ಬಗ್ಗೆ ಈ ರೀತಿ ತಿರಸ್ಕಾರ ಮನೋಭಾವನೆಯನ್ನು ನಾವು ನೋಡುತ್ತಿದ್ದೇವೆ. ಕಳೆದ ಒಂದು ವರ್ಷ 4 ತಿಂಗಳ ಅವಧಿಯಲ್ಲಿ ಯಾವುದೇ ಸಮಸ್ಯೆ ಬಗ್ಗೆ ಮಾತನಾಡುವುದಕ್ಕೆ ಚರ್ಚೆ ಮಾಡುವುದಕ್ಕೆ ಯಾವುದೇ ವೇದಿಕೆ ಬೆಂಗಳೂರಿನಲ್ಲಿ ಆಗಲಿಲ್ಲ. ಬದಲಿಗೆ ಯಾರೋ ಒಬ್ಬ ಅಧಿಕಾರಿ ಕೆಲಸ ಮಾಡುತ್ತಿದ್ದವರನ್ನು, ಶ್ರೀ ರವೀಂದ್ರ ಎಂಬ ಒಬ್ಬ ಅಡ್ಮಿನಿಸ್ಟ್ರೇಟರನ್ನು ನೀವು ತೆಗೆದು ಬಿಸಾಕಿದಿರಿ. ಅದಕ್ಕೆ ಕೊಟ್ಟ ಕಾರಣವೇನು? ಅವರಿಗೆ ಬಿಡಿಎ. ಮತ್ತು ಕಾರ್ಪೋರೇಷನ್ ಎರಡನ್ನೂ ನೋಡುವುದಕ್ಕೆ ಆಗುವುದಿಲ್ಲ, ಅದಕ್ಕೋಸ್ಕರ ಫುಲ್ ಟೈಂ ಅಧಿಕಾರಿಯನ್ನು ಕೊಡುತ್ತೇವೆ ಎಂದು. ಇವತ್ತು ಕಾರ್ಪೋರೇಷನ್ನಿನ ಸ್ಥಿತಿ ಬಾಣಲೆಯಲ್ಲಿ ಬೆಂಕಿ ಬಿದ್ದ ಹಾಗೆ ಆಗಿದೆ. ಒಬ್ಬ ರೆವಿನ್ಯೂ ಕಮಿಷನರನ್ನು ಆಡ್ಮಿನಿಸ್ಟ್ರೇಟರ್ ಮಾಡಿ ಅವರು ಅಲ್ಲಿಯೂ ಇಲ್ಲ, ಇಲ್ಲಿಯೂ ಇಲ್ಲ ಅದೇ ಪರಿಸ್ಥಿತಿ ಮುಂದುವರಿಯುತ್ತಿದೆ. ಇತ್ತಕಡೆ ಚುನಾವಣೆ ಮಾಡುವುದಿಲ್ಲ, ಅತ್ತಕಡೆ ಜನರಿಗೆ ಬೇಕಾದ ಸರಿಯಾದ ಅಧಿಕಾರ ಚಲಾಯಿಸುವ ಅವಕಾಶ ಕೂಡ ನೀವು ಮಾಡುತ್ತಿಲ್ಲ. ನಾನು ಬೆಂಗಳೂರು ನಗರದ್ದು ಮಾತನಾಡುತ್ತಿರುವಾಗ ಅನೇಕ ಸಲ ನಾವು ನೋಡುತ್ತೇವೆ, ಬೆಂಗಳೂರು ನಗರದ ಪ್ರಮುಖ ಸಮಸ್ಯೆಗಳ ಬಗ್ಗೆ ಈ ಭಾಷಣದಲ್ಲಿ ಏನೂ ಹೇಳಿಲ್ಲ. ಹೋದಸಾರಿ ರೈಲ್ ಬಿಡುತ್ತೇವೆಂದು ಹೇಳಿದ್ದರು. ರಾಜ್ಯಪಾಲರ ಭಾಷಣದಲ್ಲಿ ಮಾನವ ರೈಲು, ಲೈಟ್ ರೈಲು ಬಿಡುತ್ತೇವೆ. ಅದಕ್ಕೋಸ್ಕರ ಬೆಂಗಳೂರು ನಾಗರೀಕರ ಮೇಲೆ ಸೆಸ್ ಕೂಡ ಹಾಕಿದಿರಿ, ಪೆಟ್ರೋಲ್ ಮೇಲೆ, ಪ್ಲಾನ್ ಸ್ಯಾಂಕ್ಷನ್ ಮಾಡುವಾಗ ಎಲ್ಲಾ ತೆರಿಗೆಹಾಕಿದಿರಿ. ನನಗೆ ಗೊತ್ತಿರುವ ಪ್ರಕಾರ 20 ಕೋಟಿ ರೂಪಾಯಿ ಎಲ್ಲಿಗೆ ಹೋಯಿತು. ಎಲ್ಲಿ ಖರ್ಚು ಮಾಡುತ್ತೀರಿ? ಯಾವ ಬಾಬಿನಲ್ಲಿ ಅದನ್ನು ಸೇರಿಸಿಕೊಂಡಿದ್ದೀರಿ? ಒಂದು ಲೀಟರ್ ಪೆಟ್ರೋಲ್ ಮೇಲೆ ಸೆಸ್ ಹಾಕಿದ್ದೀರಿ, ಬೇರೆ ಬೇರೆಯಾದರ ಮೇಲೆ ಸೆಸ್ ಹಾಕಿದ್ದೀರಿ. ಆದರೆ 1991ರಲ್ಲಿ ಅಭಿವೃದ್ಧಿ ಕಾರ್ಯಗಳ ಬಗ್ಗೆ, ಫ್ಲೈ ಓವರ್ ಬಗ್ಗೆ ಏನೂ ಹೇಳಿಲ್ಲ, ಸಬವೇ ಬಗ್ಗೆ ಏನೂ ಹೇಳಿಲ್ಲ. ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ 5 ಫ್ಲೈ ಓವರ್ ಮಾಡುತ್ತೇವೆ, 5 ಸುರಂಗ ಮಾಡುತ್ತೇವೆ ಎಂದು ಶಂಕುಸ್ಥಾಪನೆ ಮಾಡಿಸಿದರು. ಅದಕ್ಕೆ 1991 ರಲ್ಲಿ ಆರ್ಕಿಟೆಕ್ಟ್‌ಗೆ ಕೊಟ್ಟ ಫೀ 60 ಲಕ್ಷ ರೂಪಾಯಿಗಳು. 60 ಲಕ್ಷ ರೂಪಾಯಿಗಳನ್ನು ಡಿಸೈನ್ ಫೀ ಎಂದು ಕೊಟ್ಟರು. ಆದರೆ ಫ್ಲೈ ಓವರ್ ಇಲ್ಲ, ಸಬ್-ವೇ ಇಲ್ಲ. ಬೆಂಗಳೂರು ನಗರದಲ್ಲಿ ವಾಹನ ಓಡಿಸುವವರು ಪರಿಸ್ಥಿತಿ ಏನು ಎಂದು ಓಡಿಸುವವರಿಗೆ ಗೊತ್ತು. ಇನ್ನು ಅದೇ ಪರಿಸ್ಥಿತಿ ಇದೆ. ಯಾವುದೇ ರೀತಿಯಿಂದ ಬೆಂಗಳೂರು ನಗರಕ್ಕೆ ಅವಶ್ಯಕತೆ ಇರುವ ಸಂಗತಿಗಳ ಬಗ್ಗೆ ಗಮನ ಕೊಡುತ್ತಿಲ್ಲ. ಮೊನ್ನೆ ಒಂದು ಬಿಲ್ ಪಾಸ್ ಮಾಡಿದಿರಿ; ಕಟ್ಟಡ ಒಡೆಯುವುದಕ್ಕೆ ಆಗುವುದಿಲ್ಲವೆಂದು ಆ ಬಿಲ್ ಬೆಂಗಳೂರು ನಾಗರೀಕರನ್ನು ನಾನು ನೋಡಿರುವ ಪ್ರಕಾರ a very few

Bangaloreans they love this City. Most of the people present in Bangalore they have got lust for this city. ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಈ ನಗರ ನಮ್ಮದು ಎಂದು ನಾಗರೀಕರಿಗೆ ಅನ್ನಿಸುತ್ತಿಲ್ಲ. ಇಲ್ಲಿನ ಮಂಡಳಿಗಳು ಏನಿವೆ ಅವರಿಗೆ ಕೂಡ ನಾಗರೀಕರಲ್ಲಿ ಆ ಪ್ರಜ್ಞೆ ಹುಟ್ಟಿಸಬೇಕು, ಇದು ನಮ್ಮ ಊರು ಎಂಬ ಭಾವನೆ ಮಾಡುವಂತೆ ಮಾಡಬೇಕೆಂಬುದ ಇಲ್ಲ. ಅದರ ಬದಲಿಗೆ ಯಾರು ಯಾರು ಕಾನೂನು ಮುರಿದು ಜೀವನ ನಡೆಸುತ್ತರೆ ಅವರಿಗೆ ಪ್ರೋತ್ಸಾಹ ಕೊಡುವ ರೀತಿಯಲ್ಲಿ ನಮ್ಮ ಸಂಘಸಂಸ್ಥೆಗಳು ಇವತ್ತು ಕೆಲಸ ಮಾಡುತ್ತಿವೆ. ಯಾರೂ ಕೂಡ ತಪ್ಪು ಮಾಡಿದವನಿಗೆ ಇದು ಮಾಡಬೇಡ ಎಂದು ಹೇಳುವ ಅಧಿಕಾರ ಇಟ್ಟುಕೊಂಡಿಲ್ಲ. ನಾನು ಪ್ರೋತ್ಸಾಹ ಕೊಡುತ್ತೇವೆ, ನೀವು ಅಲ್ಲಿ ಲಾಬಿ ಮಾಡು, ನಿನಗೆ ಇನ್ನೊಂದು ಕಡೆ ಟಿಕೆಟ್ ಕೊಡಿಸುತ್ತೇನೆಂದು ಹೇಳಿ ಏನೋ ಕೊಡಬಹುದು. ಬೆಂಗಳೂರು ನಗರದಲ್ಲಿ ಬದುಕುವವರಿಗೆ ನಾವು ಸೈಟು ಕೊಡುತ್ತಿಲ್ಲ, ಸತ್ತವರಿಗೆ ಹೂಳುವುದಕ್ಕೆ ಸ್ಮಶಾನ ಇಲ್ಲ. ಎನ್.ಡಿ.ಎಫ್. ಹತ್ತಿರ ಬೆಣ್ಣೆನಹಳ್ಳಿ ಎಂದು ಇದೆ. ಅಲ್ಲಿ ರಸ್ತೆ ಮೇಲೆ ಹೆಣ ತಂದು ಇಟ್ಟು ಹೋಗುತ್ತಿದ್ದಾರೆ. ಸ್ಮಶಾನ ಎಂದು ಇದ್ದುದ್ದನ್ನು ಡಿಫೆನ್ಸ್‌ನವರು ಬೇಲಿ ಹಾಕಿಕೊಂಡು ಇದ್ದುಬಿಟ್ಟರು. ಜನರೆಲ್ಲಾ ಬಿಡಿಎ. ಕಮಿಷನರ್ ಹತ್ತಿರ ಹೋದರಂತೆ, ಬಿಡಿಎ, ಕಮೀಷನರ್ ಹೇಳಿದರು ಸ್ಮಶಾನ ಮಾಡುವ ಕೆಲಸ ಬಿಡಿಎ ,ಯದು ಅಲ್ಲ. ಕಾರ್ಪೋರೇಷನ್ ಮಾಡಬೇಕು ಎಂದು. ಈಗ ಪ್ಲಾನಿಂಗ್ ಅಥಾರಿಟಿ ಯಾರು ಬೆಂಗಳೂರಿನಲ್ಲಿ? ಇದನ್ನು ಕೇಳಬೇಕಾದರೆ ಯಾರ ಹತ್ತಿರ ಕೇಳಬೇಕು? ಬೆಂಗಳೂರು ನಗರ ಅಂದು ಅನಾಥನಾ? ನಾವು ಯಾರ ಹತ್ತಿರ ಹೋಗಿ ಇವೆಲ್ಲ ಪ್ರಶ್ನೆ ಕೇಳಬೇಕು? ಬೆಂಗಳೂರು ಕಳೆದ ಒಂದು ವರ್ಷದ ಹಿಂದೆ ಏನಿತ್ತು ಈ ಏನಾಯಿತೆಂದು ಯಾರ ಹತ್ತಿರ ಹೋಗಿ ಮಾತನಾಡಬೇಕು? ಈ ದೃಷ್ಟಿಯಿಂದ ಕಳೆ ರಾಜ್ಯಪಾಲರ ಭಾಷಣದಲ್ಲಿ ಬಹಳಷ್ಟು ತೋರಿಸಿದ್ದೀರಿ ಬೆಂಗಳೂರಿಗೆ ಅದುಮಾಡುತ್ತೇವೆ, ಇದು ಮಾಡುತ್ತೇವೆ ಅಂತ. ಆದರೆ ಇವತ್ತು ಅದರ ಲವಲೇಶವೂ ಕೂಡ ನಾವು ಕಾಣುತ್ತಿಲ್ಲ. ಒಂದು ರೀತಿಯಿಂದ ನಿಮ್ಮ ಸರ್ಕಾರ ಮತ್ತು ಇಲ್ಲಿ ವಿದ್ಯುಚ್ಛಕ್ತಿ ಸ್ಥಿತಿ ಎರಡೂ ಕೂಡ ಒಂದೇ ಎಂದರೆ ತಪ್ಪಾಗಲಾರದು. ಒಬ್ಬರು ಮೇಷ್ಟ್ರು ಮಂತ್ರಿಗಳ ಮಗನಿಗೆ ಪಾಠ ಹೇಳಿಕೊಡುವುದಕ್ಕೆ ಹೋಗುತ್ತಿದ್ದರಂತೆ. 500 ರೂಪಾಯಿ ಫೀಸ್ ಮೇಷ್ಟ್ರಿಗೆ. ಮೇಷ್ಟ್ರಿಗೂ ಕೂಡ ಸಮಾಧಾನ ಅಂತೆ ಏನೋ 500 ರೂಪಾಯಿ ತಿಂಗಳಿಗೆ ಬರುತ್ತದೆ ಅಂತ. ಮೂರು ತಿಂಗಳಾದ ಮೇಲೆ ಪಾಟ ಹೇಳಿಕೊಡುವುದಕ್ಕಾಗುವುದಿಲ್ಲ ಅಂತ ಅವರು ಮಿನಿಸ್ಟರಗೆ ಹೇಳಿದರು. .

ಮಿನಿಸ್ಟರ್‌ಗೆ ಕೋಪ ಬಂತು. ಯಾಕ್ರೀ, ಜಾಸ್ತಿ ಬೇಕೇನ್ರಿ ಫೀಸು ತೊಗೊಳ್ರಿ ಅಂದರು. ಇಲ್ಲಾ ಸಾರ್ ಫೀಸದಲ್ಲ, ನಾನು ಏನು ಹೇಳಿಕೊಟ್ಟರೂ ಕೂಡ ನಿಮ್ಮ ಮಗನಿಗೆ ಮೂರು ತಿಂಗಳಿಂದ ಎಲೆಕ್ಟ್ರಿಸಿಟಿ ಅಂದರೆ ಅವನು ಎಲೆಕ್ಟ್ರಿಸಿಟಿ ಅಂತ ಹೇಳುತ್ತಿಲ್ಲ ಬರೀ ಎಲೆಕ್ಟ್ರಿಸಿಟಿ ಅಂತ ಹೇಳುತ್ತಾ ಇದ್ದಾನೆ, ನಾನು ಹೇಳಿಕೊಟ್ಟು ಹೇಳಿಕೊಟ್ಟು ಬೇಜಾರಾಯಿತು. ಏನು ಹೇಳಿದರೂ ಕೂಡ ಅವನು ಎಲೆಕ್ಟ್ರಿಸಿಟಿ ಅಂತ ಹೇಳುತ್ತಿಲ್ಲ, ಎಲೆಕ್ಟ್ರಿಸಿಟಿ ಅಂತ ಹೇಳುತ್ತಿದ್ದಾನೆ ಅಂತ ಹೇಳಿದರು. ಮಿನಿಸ್ಟರ್ ಗೆ ನಗು ಬಂತು. ಅಯ್ಯೋ ಮೇಷ್ಟ್ರೇ, ಅವನ ಕೆಪಾಸಿಟೀನೇ ಅಷ್ಟು. ನೀವು ಏತಕ್ಕೆ ಯೋಚನೆ

ಮಾಡುತ್ತೀರಿ ಅಂದರು. ಅಂದರೆ ಪಿತ್ರಾರ್ಜಿತ ಆಸ್ತಿ. ಸರ್ಕಾರದ್ದೂ ಕೂಡ ಕೆಪಾಕಿಟಿ ಇಷ್ಟೇ ಏನೋ ಅಂತ ನನಗೆ ಅನ್ನಿಸುತ್ತಾ ಇದೆ. ನೀರು ಇಲ್ಲಿ ಎಲೆಕ್ಟ್ರಿಸಿಟಿ ಕೊಡುವುದಿಲ್ಲ. ನಾಗರೀಕರಿಗೆ ಬೇಕಾದ್ದು ನೋಡುವುದಿಲ್ಲ. ಈ ರೀತಿ ವಾರಕ್ಕೊಂದು ಹದಿನೈದು ದಿವಸಕ್ಕೊಂದು ಭಾಷಣಗಳು, ಭರವಸೆಗಳ ಮಹಾಪೂರ, ಜನಕ್ಕೆ ಮೂಗಿಗೆ ಜೇನುತುಪ್ಪ ಹಚ್ಚುವುದು, ಇದು ಅವ್ಯಾಹತವಾಗಿ ನಡೆದುಕೊಂಡು ಬರುತ್ತಿದೆ. ಇವತ್ತು ಕರೆಂಟ್ ಹೋದಾಗ ಕೆ.ಇ.ಬಿ. ಯವರಿಗೆ ಫೋನ್ ಮಾಡಿದರೆ ನಾವು ಬೆಳಿಗ್ಗೆ 5 ಗಂಟೆಗೆ ಕರೆಂಟ್ ತೆಗೆಯುತ್ತಾರೆ. ಏಕೆ ಅಂದರೆ ವರ್ಲ್ಡ್ ಕಫ್ ಟೆಸ್ಟ್‌ಗೆ ಕರೆಂಟ್ ಕೊಡಬೇಕು ಸ್ವಾಮಿ ಅಂತಾರೆ. ನಮ್ಮ ಆದ್ಯತೆ ವರ್ಲ್ಡ್‌ಕಫ್ ಕ್ರಿಕೆಟ್ ನೋಡುವುದಕ್ಕೆ ಕರೆಂಟ್ ಕೊಡಬೇಕು, ಆ ಶಾಲಾಮಕ್ಕಳು ಓದುವುದಕ್ಕೆ ಕರೆಂಟ್ ಕೊಡುವುದಿಲ್ಲ. ಪ್ರತಿಯೊಂದರಲ್ಲೂ ಕೂಡ ನಮ್ಮ ಪ್ರಿಯಾರಿಟಿ ಹೇಗೆ ಫಿಕ್ಸ ಆಗುತ್ತಾ ಇದೆ ಎನ್ನುವುದಕ್ಕೆ ಇದು ಜೀವಂತ ನಿದರ್ಶನ ಎಂದರೆ ತಪ್ಪಾಗಲಾರದು. ಇವತ್ತು ತಾವು ತಮ್ಮ ರಾಜ್ಯಪಾಲರ ಭಾಷಣದಲ್ಲಿ ಕೈಗಾರಿಕಾ ರಂಗದಲ್ಲಿ ಗಮನ ಬಹಳ ಹರಿಸಿಬಿಟ್ಟಿದ್ದೇವೆ ಅಂತ ಹೇಳಿಕೊಂಡಿದ್ದೀರಿ. ಇದು ಸಂಪೂರ್ಣ ಸತ್ಯಕ್ಕೆ ದೂರ ಎಂದು ನಾನು ಹೇಳುತ್ತೇನೆ. ಸಭಾಧ್ಯಕ್ಷರೆ, ಮೈಸೂರು ಲ್ಯಾಂಪ್ ವರ್ಕ್ಸ್ ಒಂದಿದೆ. ಮುಳುಗಿಹೋಗುತ್ತಿದ್ದ ಕಾರ್ಖಾನೆ. ಈಗ ಏನೋ ಸ್ವಲ್ಪ ತೇಲುವುದಕ್ಕೆ ಪ್ರಾರಂಭವಾಗಿದೆ.

ಇದ್ದಕ್ಕಿದ್ದಹಾಗೆ ಅದರ ಸಿ.ಎಂ.ಡಿ. ಯವರನ್ನು ಇವರು ಛೇಂಜ್ ಮಾಡಿದರು. ಕಾರ್ಮಿಕರೆಲ್ಲಾ ದೊಡ್ಡ ಹೋರಾಟ ಮಾಡಿ ಈ ಸರ್ಕಾರದ ಹಿರಿಯ ವ್ಯಕ್ತಿ ಹತ್ತಿರ, ಮುಖ್ಯಮಂತ್ರಿ ಹತ್ತಿರ ಬಂದರು. ಏನ್ರಿ ಬಂದಿದ್ದು ನೀವು? ಅವರು ಹೇಳಿದರು, ತಾವು ನಮ್ಮ ಸಿ.ಎಂ.ಡಿ.ಯವರನ್ನು ಟ್ರಾನ್ಸ್‌ಫರ್ ಮಾಡುತ್ತಿದ್ದೀರಿ, ಅದಿಫ್ ಚೌಧರಿಯವರನ್ನು, ದಯವಿಟ್ಟು ನೀವು ಟ್ರಾನ್ಸ್‌ಫರ್ ಮಾಡಬೇಡಿ ಎಂದು ಹೇಳಿದರು. ಏನ್ರೀ ಅವರನ್ನು ಟ್ರಾನ್ಸ್‌ಫರ್ ಮಾಡಿದರೆ ಏನ್ರಿ ಆಗುತ್ತದೆ? ಇಲ್ಲ ಸಾರ್, ಅವರು ಬಂದಮೇಲೆ ನಮ್ಮ ಫ್ಯಾಕ್ಟರಿಗೆ ಲಾಸ್ ಆಗುತ್ತಿದ್ದುದು ಕಡಿಮೆಯಾಯಿತು, ಈಗ ಏನೋ ಸ್ವಲ್ಪ ಲಾಭ ನೋಡುತ್ತಾ ಇದ್ದೇವೆ ಎಂದು ಹೇಳಿದರು. ಸಭಾಧ್ಯಕ್ಷರೆ, ಅದಕ್ಕೆ ಅವರು ಉತ್ತರ ಕೊಟ್ಟಿದ್ದು ಕೇಳಿ ನನಗೆ ಗಾಬರಿಯಾಯಿತು. ಅವರು ಹೇಳಿದರು "ನಾಳೆ ನಿಮ್ಮ ಅಡಿಫ್ ಚೌಧರಿ ಬೆಳಿಗ್ಗೆ ಮನೆಬಿಟ್ಟು ಫ್ಯಾಕ್ಟರಿಗೆ ಬರುವಾಗ ರಸ್ತೆಯಲ್ಲಿ ಆಕ್ಸಿಡೆಂಟಾಗಿ ಸತ್ತು ಹೋಗಿಬಿಟ್ಟರೆ ಏನು ಮಾಡುತ್ತೀರಿ ಅಂದರು". ಇದು ಪರಿಸ್ಥಿತಿ. ಯಾವರೀತಿಯ ಸಂವೇದನಾರಹಿತ ನಡವಳಿಕೆ ಎನ್ನುವುದಕ್ಕೆ ಅತ್ಯುತ್ತಮ ಉದಾಹರಣೆ. ಎನ್.ಜಿ.ಇ.ಎಫ್. ನೌಕರರು ಹೋದರು. ಎ.ಇ.ಜಿ. ಬಗ್ಗೆ ಏನು ಮಾಡುತ್ತೀರಿ ನೀವು ಅಂತ. ಅವರು ಎ.ಇ.ಜಿ. ಬಗ್ಗೆಯೂ ಹೇಳಲಿಲ್ಲ, ಏನ್.ಜಿ.ಒ. ಬಗ್ಗೆಯೂ ಹೇಳಲಿಲ್ಲ. ಬದಲಿಗೆ ನನಗೂ ಬಹಳ ಯೋಚನೆ ಆಗಿದೇರಿ, ನಿಮ್ಮ ಫ್ಯಾಕ್ಟರಿಯನ್ನು ಸುಡಬೇಕೋ ಹೂಳಬೇಕೋ ಎಂದು ಹೇಳಿದರು. ಇದು ನಾವು ತೋರಿಸುತ್ತಿರುವ ಒಂದು ಪ್ರತಿಕ್ರಿಯೆ. ಇನ್ನು ಖಾಸಗಿ ಕಾರ್ಖಾನೆಗಳಿಗಂತೂ ಅದರ ಗೋಳು ಯಾರಿಗೂ ಹೇಳುವುದಕ್ಕಾಗುವುದಿಲ್ಲ. ಜೆ.ಎಲ್. ಮಾರಿಸನ್ ಎಂಬ ಒಂದು ಕಂಪನಿ ಇದೆ. ಸರ್ಕಾರ ಇಲ್ಲೀಗಲ್ ಅಂತ ಲಾಕೌಟ್ ಡಿಕ್ಲೇರ್ ಮಾಡಿದೆ. ಅವನು ಬಂದು ಇವತ್ತು ಕ್ಲೋಷರ್ ಎಂದು ನೋಟೀಸ್ ಕೊಡುತ್ತಿದ್ದಾನೆ. ಸರ್ಕಾರ ಯಾವುದೇ ಕಾರ್ಮಿಕನಿಗೆ ಯಾವುದೇ ರೀತಿಯ ಸಹಾಯ ಮಾಡುವುದಕ್ಕೆ ಇವತ್ತು ಮುಂದೆ

ಬಂದಿಲ್ಲ. ಹೀಗಿದ್ದಮೇಲೆ ನೀವು ನಿಮ್ಮ ಕೈಗಾರಿಕಾ ರಂಗದಲ್ಲಿ ನಿಮ್ಮ ಪ್ರತಿಜ್ಞೆ ಏನು ಎಂದು ಹೇಳಿಕೊಳ್ಳುತ್ತೀರಿ? ಆರೋಗ್ಯದ ಬಗ್ಗೆ ಶಿಕ್ಷಣದ ಬಗ್ಗೆ ಹೇಳಿದ್ದೀರಿ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ, ಬೌರಿಂಗ್ ಆಸ್ಪತ್ರೆಯಲ್ಲಿ, ಜಯದೇವದಲ್ಲಿ ವಿ.ಐ.ಪಿ.ಯಾಗಿ ಹೋದರೆ ಬಹಳ ಒಳ್ಳೆಯದು. ಯಾರಿಗೂ ಗೊತ್ತಿಲ್ಲದೆ ಆರ್ಡಿನರಿ ಪೇಷೆಂಟ್ ಯಾರು ಹೋಗುತ್ತಾನೆ ಅವನ ಸ್ಥಿತಿ ಏನು ಅಂತ ಇವತ್ತು ನಾವು ನೋಡಬೇಕು. ಕಿತ್ತುಕೊಂಡು ತಿನ್ನುತ್ತಾರೆ. ಯಾರೋ ಹೇಳಿದರು ಕಿತ್ ಅಂಡ್ ಕಿನ್ ಅಂದರೆ ಕಿತ್ತುಕೊಂಡು ತಿನ್ನುವವರು ಅಂತ. ಆ ಹೊರ ಗೇಟಿನಿಂದ ಒಳಗೆ ಹೋಗುವುದಕ್ಕೆ ಖಾಯಿಲೆ ಏನಾದರೂ ಸಹಿಸಿಕೊಳ್ಳಬಹುದು, ಈ ಒಂದು ಅನ್ಯಾಯ ಏನಿದೆ ಅದನ್ನು ಸಹಿಸಿಕೊಳ್ಳುವುದಕ್ಕಾಗುವುದಿಲ್ಲ. ಇವತ್ತು ಮಾನ್ಯ ಆರೋಗ್ಯ ಸಚಿವರು ಇಲ್ಲಿಲ್ಲ. ಒಂದೇ ಒಂದು ಆಸ್ಪತ್ರೆಗಳಲ್ಲಿ ಬೋರ್ಡ ಆಫ್ ವಿಸಿಟರ್ಸ್ ಇಲ್ಲ. ಯಾವುದೇ ಬೋರ್ಡ್ ಆಫ್ ವಿಸಿಟರ್ಸ್ ಇಲ್ಲ. ಅದಾವರೂ ಮಾಡಿ ಸ್ವಲ್ಪ ಆಸ್ಪತ್ರೆಯನ್ನು ಇಂಪ್ರೂವ್ ಮಾಡಿರಿ ಅಂದರೆ ಆ ಕಡೆಯೂ ಗಮನ ಇಲ್ಲ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸರ್ಕಾರದಿಂದ ನಡೆಯುತ್ತಿರುವ 25 ಪ್ರಾಥಮಿಕ ಆರೋಗ್ಯ ಘಟಕ ಇವೆ. 60 ಜನ ವೈದ್ಯಾಧಿಕಾರಿಗಳಿದ್ದಾರೆ. ಒಂದು ಆಸ್ಪತ್ರೆಗೆ ಒಂದು ಪ್ರೈಮರಿ ಯೂನಿಟಗೆ.

ಶ್ರೀ ವಾಟಾಳ್ ನಾಗರಾಜ್ : ಕಾರ್ಪೋರೇಷನ್ ಆಸ್ಪತ್ರೆಯೋ ಸರ್ಕಾರಿ ಆಸ್ಪತ್ರೆಯೋ?

ಶ್ರೀ ಸುರೇಶ್ ಕುಮಾರ್ : ಕಾರ್ಪೋರೇಷನ್‌ದಲ್ಲ. ಗೌರ್ನಮೆಂಟ್ ಮಾಡುತ್ತಿರುವ ಘಟಕಗಳು. ಅನ್ಯ ಹುದ್ದೆಗಳು 200 ರಿಂದ 220 ಇವೆ. ಇರುವುದು 25 ಆಸ್ಪತ್ರೆ. ಒಟ್ಟು ಸ್ಟಾಫ್ ಈಗ 280-300 ಆಯಿತು. ಮಾಸಿಕ ವೇತನ ಇವರಿಗೆ ಕೊಡುತ್ತಿರುವುದು 10 ರಿಂದ 12 ಲಕ್ಷ ರೂಪಾಯಿ. ಪ್ರತಿ ಆಸ್ಪತ್ರೆಗೆ ಪೇಷೆಂಟ್ ಬರುತ್ತಾ ಇರುವುದು 10 ರಿಂದ 15 ಜನ. ಅಂದರೆ 250 ಜನ ಪೇಷೆಂಟ್ಸಗೆ ಪ್ರತಿ ತಿಂಗಳೂ 12 ಲಕ್ಷ ರೂಪಾಯಿ ನಾವು ವ್ಯಯ ಮಾಡುತ್ತಿದ್ದೇವೆ. ನಾನು ಹೇಳುವುದೇನೆಂದರೆ ಈ ಆಸ್ಪತ್ರೆಗಳನ್ನು ದಯವಿಟ್ಟು 25-30 ಹಾಸಿಗೆಯ ಆಸ್ಪತ್ರೆ ಮಾಡಿ ಕಾರ್ಪೋರೇಷನ್ನಿಗೆ ಹ್ಯಾಂಡ್ ಓವರ್ ಮಾಡಿ. ಆಗ ರೋಗಿಗಳಿಗೂ ಕೂಡ ಅನುಕೂಲವಾಗುತ್ತದೆ. ಸಭಾಧ್ಯಕ್ಷರೆ, ಎರಡೂ ಮೂರು ದಿವಸದ ಹಿಂದೆ ನಾನು ಟಿ.ವಿ.ಯಲ್ಲಿ ನೋಡಿದೆ. ಮದ್ರಾಸಿನಲ್ಲಿ 50 ಪರ್ಸೆಂಟ್, ಮದ್ರಾಸ್ ಸಿಟಿ ಏನೋ ಮಲೇರಿಯಾದಿಂದ ಪೀಡಿತ ಆಗಿದೆ ಎಂದು. ಕರ್ನಾಟಕದಲ್ಲಿ ಮಲೇರಿಯಾ ಎರಾಡಿಕೇಷನ್ ಪ್ರೋಗ್ರಾಂ ಏನಿದೆ ಅದು ಒಂದು ತಮಾಷೆಯಾಗಿದೆ. ಈ ಕಡೆ ಮಲೇರಿಯಾ ಎರಾಡಿಕೇಟ್ ಆಗುತ್ತಿಲ್ಲ. ಆ ಹಣ ವ್ಯಯ ಆಗುತ್ತಿದೆ. ಮಲೇರಿಯಾ ಎರಾಡಿಕೇಷನನಲ್ಲಿ ಎರಡು ಪೋಸ್ಟಗಳು ಮುಖ್ಯ. ಒಂದು, ಲ್ಯಾಬೋರೇಟರಿ ಟೆಕ್ನಿಷಿಯನ್. ಪೋಸ್ಟಗಳಿರುವುದು 1130. ಕೆಲಸ ಮಾಡುತ್ತಿರುವುದು 347 ಕರ್ನಾಟಕದಲ್ಲಿ. ಹಾಗೆಯೇ ಎಂಟಮಾಲಜಿಸ್ಟ ಇದ್ದಾನೆ. ಅವನು ಹೋಗಿ ನೋಡಬೇಕು. ಮಲೇರಿಯಾ ಬ್ರೀಡಿಂಗ್ ಇದೆಯಾ ಅಂತ. ಅದು ಸ್ಯಾಂಕ್ಷನ್ಡ ಪೋಸ್ಟ್ ಇರುವುದು 30. ಕೆಲಸ ಮಾಡುತ್ತಿರುವುದು 5 ಜನ. ಇದಕ್ಕೆ ಪೂರಕವಾಗಿರುವ ಬೇರೆಬೇರೆಯವರು ಯಾರೂ ಲಭ್ಯ ಇಲ್ಲ.

4.40 ಪಿ.ಎಂ.

ಟೋಟಲಿ ಡಿಡಿಟಿ ಏನೋ ಒಂದು ಸ್ಪ್ರೇ ಮಾಡುತ್ತಾರೆ. ಆ ಡಿಡಿಟಿಯನ್ನು ಸೊಳ್ಳೆಗಳು ಬೆಳಿಗ್ಗೆ ಟಿಫನ್ ಅದೇ ತಿನ್ನುತ್ತವೆ ಬೇಕಾದರೆ ಊಟವನ್ನು ಅದನ್ನೇ ಮಾಡುತ್ತವೆ. ಅಂದರೆ ಅಷ್ಟು ಇಮ್ಯೂನ್ ಆಗಿದೆ ಏನೂ ಕೂಡ ಎಫೆಕ್ಟ್ ಆಗುತ್ತಿಲ್ಲ. ಈ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರಿನಲ್ಲಿ ಯಶಸ್ವಿಯಾಗಿ ಒಂದು ಔಷಧಿಯನ್ನು ಉಪಯೋಗಿಸುತ್ತಿದ್ದಾರಂತೆ ಅದು ಐಕಾನ್ ಅಂತ. ಅವೊಂದು ಕೀಟನಾಶಕವನ್ನು ದಯವಿಟ್ಟು ತಾವು ಉಪಯೋಗಿಸುವುದಕ್ಕೆ ಆಗುತ್ತದೆಯೇ? ಕರ್ನಾಟಕದಲ್ಲಿ ಕೂಡ ಮಲೇರಿಯಾದ್ದು ಒಂದು ಬವಣೆ ಬರದಿರುವಹಾಗೆ ಮಾಡುವುದಕ್ಕೆ ಆಗುತ್ತದೆಯೇ? ಸ್ವಲ್ಪ ಇದರ ಬಗ್ಗೆ ಯೋಚನೆ ಮಾಡಬೇಕೆಂದು ನಾನು ಕೇಳುತ್ತೇನೆ.

ಶಿಕ್ಷಣದ ಬಗ್ಗೆ ಮಾತನಾಡುತ್ತಾ, ಮುಸ್ಲಿಂ ಸಮುದಾಯಕ್ಕೋಸ್ಕರ ನಾವು 5 ಶಾಲೆಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. "ಮುಸ್ಲಿಂ ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿ 5 ವಸತಿ ಶಾಲೆಗಳನ್ನು ನಮ್ಮಸರ್ಕಾರ ಮಂಜೂರು ಮಾಡಿದೆ ಎಂದು ಹೇಳಿದ್ದಾರೆ". ಏಕೆ ಸ್ವಾಮಿ ಇನ್ನೂ ಕೂಡ ಸೆಗ್ರೆಗೇಷನ್? Do you want five more get house? ಏಕೆ ಮತ್ತೆ ಸೆಗ್ರಗೇಟ್ ಮಾಡುತ್ತೀರಿ? ಅದರ ಬದಲಿಗೆ ಎಲ್ಲಾ ಬಡ ಮಕ್ಕಳಿಗೆ ಈ ವಸತಿ ಶಾಲೆಯನ್ನು ಏಕೆ ಮಾಡುವುದಿಲ್ಲ? Is it not another example of your appeasement policy? Why do you segregate them further? ಇದರಿಂದ ಏನು ಲಾಭ ಸಾಧಿಸುತ್ತೀರಿ? ಈಗಾಗಲೇ ಒಂದು ವಯಸ್ಸಿನಲ್ಲಿ ಆ ಭೇದವನ್ನು ನಾವು ಕಾಣುತ್ತಿದ್ದೇವೆ. ಮತ್ತೆ ಸರ್ಕಾರ ಯಾವುದೋ ಒಂದು ಓಟು ಬ್ಯಾಂಕಿಗೋಸ್ಕರ ಈ ರೀತಿಯ ಶಾಲೆಗಳನ್ನು ಏಕೆ ಮಾಡುತ್ತಿದ್ದೀರಿ? ಇದರಿಂದ ಏನು ಲಾಭ ಗಳಿಸುತ್ತೀರಿ? What will be the positive thing that you are going to achieve? ದಯವಿಟ್ಟು ನಾನು ಕೇಳುತ್ತೇನೆ, ಈ ರೀತಿ ಮತ್ತಷ್ಟು ಸೆಗ್ರಿಗೇಟ್ ಮಾಡಬೇಡಿ. ಬೇರೆ ಬೇರೆ ಅಂತ ಆ ಮಕ್ಕಳಿಗೆ ಏಕೆ ನೀವು ಈ ವ್ಯತ್ಯಾಸವನ್ನು ಬೆಳೆಸುತ್ತಾ ಇದ್ದೀರಿ? ಇದು ಒಂದು ಯಾರ ಬ್ರೈನಚೈಲ್ಡ್ ಗೊತ್ತಿಲ್ಲ. ಇದು ಏಕೆ ಬಂದಿದೆ? ದಯವಿಟ್ಟು ಅದನ್ನು ಮಾಡುವುದಕ್ಕೆ ಹೋಗಬೇಡಿಯೆಂದು ಈ ಸಂದರ್ಭದಲ್ಲಿ ನಾನು ಕೇಳುತ್ತೇನೆ. ಕೊನೆಯಲ್ಲಿ ಮಾತನಾಡುವುದು ಬಹಳ ಕಷ್ಟ ಸ್ವಾಮಿ. ಎಲ್ಲಾ ಮಾತನಾಡಿರುತ್ತಾರೆ. ನಾವು ಕೂಡ ಸ್ಟಡಿ ಮಾಡಿಕೊಂಡು ಬಂದು ಮಾತನಾಡಬೇಕು. ಕನ್ನಡ ಮತ್ತು ಸಂಸ್ಕೃತಿಯ ಬಗ್ಗೆ ದೇಶದಲ್ಲೇ ಅತ್ಯುತ್ತಮ ಕೇಂದ್ರ ಒಂದು ಇದೆ. ಅದು ರಂಗಾಯಣ ಎಂದು ಮೈಸೂರಿನಲ್ಲಿದೆ. 1989ರಲ್ಲಿ ಅದು ಪ್ರಾರಂಭವಾಯಿತು. ಇವತ್ತು ಅದು ಅವಸಾದನ ಅಂಚಿನಲ್ಲಿದೆ. ಯಾವುದೂ ಗ್ರಾಂಟ್ ಕೊಡಬೇಕಾಗಿತ್ತು ಅದನ್ನು ರೆಡ್ಯೂಸ್ ಮಾಡಿದ್ದಾರೆ. ಕೊಡತಕ್ಕ ಅನುದಾನವನ್ನು ಕಟ್ ಮಾಡಿದ್ದಾರೆ. ಇದರಿದಂ ಬೇಸತ್ತ ಬಿ.ವಿ. ಕಾರಂತರು ನಿರ್ದೇಶಕರ ಹುದ್ದೆಗೆ ಇವತ್ತು ರಾಜೀನಾಮೆಯನ್ನು ಕೊಟ್ಟು ಹೊರಟು ಹೋಗಿದ್ದಾರೆ. ದೇವನೂರು ಮಹದೇವ ಮತ್ತ ಗಿರೀಶಕರ್ನಾಡರವರ ನೇತೃತ್ವದಲ್ಲಿ ಪ್ರತಿಭಟನೆಯಾದ ಮೇಲೆ, ಅವರು ಹೇಳುತ್ತಾರೆ ಅಲ್ಲಿ ಯಾರ್ಯಾರು ಇದ್ದರು ವಿದ್ಯಾರ್ಥಿಗಳು ನೀವು ದಯವಿಟ್ಟು ಹಾಸ್ಟೆಲಿನಿಂದ ಬಿಟ್ಟು ಹೋಗಿಯೆಂದು ಅವರಿಗೆ ನೋಟೀಸನ್ನು

ಸಹ ಕೊಟ್ಟಿದ್ದಾರೆ. ಕನ್ನಡ ಮತ್ತು ಸಂಸ್ಕೃತಿಯ ಬಗ್ಗೆ ಈ ದೇಶದಲ್ಲಿ ಒಂದು ಹೆಮ್ಮೆಯ ಕೇಂದ್ರವೊಂದಿತ್ತು. ಅದಕ್ಕೆ ನೀವು ತೋರಿಸುತ್ತಿರುವ ಇನ್ನೊಂದು ಸಾಧನೆಯೆಂದರೆ ರಂಗಾಯಣವನ್ನು ಮುಚ್ಚುತ್ತಿರುವುದು. ತಾವು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬಡ ಜನರಿಗೆ ಸೈಟುಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಬೆಂಗಳೂರಿನಲ್ಲಿ ಎಲೆಕ್ಷನ್ ಓರಿಯಂಟೆಡ್ ಒಂದು ಸರ್ಕಸ್ ನಡೆಯಿತು. ಫ್ರೀ ಸೈಟು ಕೊಡುತ್ತೇವೆಂದು. ಆಡಳಿತ ಪಕ್ಷದವರು ಬೇಕಾದಷ್ಟು ಕೊಟ್ಟರು?, ಎಷ್ಟು ಅಪ್ಲಿಕೇಷನ್ ಫಾರಂಸ್ ಬಂತು ಅಂದರೆ ಇನ್ನೊಂದು ಅದಕ್ಕೆ ಬೆಂಗಳೂರು ಬೇಕಾಗುತ್ತದೆ. ಇನ್ನೊಂದು ಬೆಂಗಳೂರನ್ನು ಕಟ್ಟಿಸವಷ್ಟು ಅಪ್ಲಿಕೇಷನ್ಸ ಹಂಚಿದ್ದಾರೆ. ಆ ಬಡ ಜನರಿಗೆ ಏನೊಂದು ಆಸೆಯನ್ನು ತೋರಿಸಿದರಲ್ಲಾ ಆ ಆಸೆಯನ್ನು ಈಡೇರಿಸಿದಿರಾ? ಇಲ್ಲ, ಆಶ್ರಯ ಸ್ಕೀಮ್‌ನಲ್ಲಿ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದಿರಿ. ಮಾನ್ಯ ರಾಜಣ್ಣನವರ ಕ್ಷೇತ್ರದಲ್ಲಿ ಒಂದು ಜಯರಾಜನಗರ ಎಂದು ಇದೆ. ನನ್ನ ಕ್ಷೇತ್ರದಲ್ಲಿ ಒಂದು ಅರುಂಧತಿನಗರ ಎಂದಿದೆ. ಅಲ್ಲಿದ್ದ ಜನರನ್ನು ನಾವು ಮನೆಗಳನ್ನು ಕಟ್ಟಿಸುತ್ತೇವೆಂದು ಯಾವುದೋ ಒಂದು ಗ್ರೌಂಡ್ ಅಥವಾ ಪಾರ್ಕ್‌ನಲ್ಲಿ ಬಿಟ್ಟರಿ. ಇದುವರೆಗೆ ಅವರಿಗೆ ಅತ್ತಕಡೆ ಮನೆಯೂ ಇಲ್ಲ ಇತ್ತಕಡೆ ಇಲ್ಲಿ ಸರಿಯಾಗಿ ವಾಸ ಮಾಡುವಹಾಗೆ ಇಲ್ಲ. ಏಕೆ ಹೌಸಿಂಗ್ ಬೋರ್ಡ್ ಹೇಳುತ್ತದೆ, ನಮಗೆ ಕೊಟ್ಟ ಹಣವನ್ನು ನಾವು ಖಾಲಿಮಾಡಿಬಿಟ್ಟಿದ್ದೇವೆ. ನಮಗೆ ಇನ್ನೂ ಕೂಡ 9ಕೋಟಿ ರೂಪಾಯಿ ಬೇಕು ಎಂದು. ಕಾರ್ಪೋರೇಷನದವರು ಹೇಳುತ್ತಾರೆ ನಮಗೆ ದುಡ್ಡು ಕೊಡುವುದಕ್ಕಾಗುವುದಿಲ್ಲವೆಂದು. ನೀವು ಏಕೆ ಸುಮ್ಮನೆ ಚೆನ್ನಾಗಿದ್ದವರನ್ನು ನಿರಾಶ್ರಿತರನ್ನಾಗಿ ಮಾಡಿದ್ದೀರಿ ಆಶ್ರಯ ಯೋಜನೆಯಲ್ಲಿ? ಇವತ್ತಿಗೂ ಕೂಡ ಅವರಿಗೆ ಮನೆ ದೊರೆತಂತಾಗಿಲ್ಲ.

ಪಾನನಿರೋಧದ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಮಾನ್ಯ ವಾಟಾಳ್ ನಾಗರಾಜ್‌ರವರ ಭಾವನೆ ಏನಿದೆ ಅದಕ್ಕೆ ನಾನು ಸಂಪೂರ್ಣವಾಗಿ ನಾನು ಸಹಕಾರ ಕೊಡುತ್ತಾ, ನೀವು ಮಾತು ಎತ್ತಿದರೆ ರೆವಿನ್ಯೂ ಎಂದು ಮಾತನಾಡುತ್ತೀರಿ. 900 ಕೋಟಿ ಎಂದು ಹೇಳುತ್ತೀರಿ. 900 ಕೋಟಿ ರೂಪಾಯಿ ರೆವಿನ್ಯೂ ಎಲ್ಲಿಂದ ಬರುತ್ತದೆ ಸ್ವಾಮಿ? ಯಾರು ಕೊಡುವುದು 900 ಕೋಟಿ ರೂಪಾಯಿ? ಇವತ್ತು ಸಾರಾಯಿ ಲಿಕ್ಕರ್ ಶಾಪಗಳು ಯಾವ ಮಟ್ಟದಲ್ಲಿವೆ ಅಂದರೆ ಒಂದು ವಿವೇಕವರ್ಧಿನಿ ಶಾಲೆಯೆಂದು ಇದೆ. ಆ ಶಾಲೆಯ ಗೋಡೆಗೆ ಅಟ್ಯಾಚ್ ಆಗಿರುವುದು ಸಾರಾಯಿ ಅಂಗಡಿ. ಪ್ರತಿ ಸಾಯಂಕಾಲ ಆ ಶಾಲೆಯ ಗಂಡುಮಕ್ಕಳು ಹೆಣ್ಣು ಮಕ್ಕಳು ಶಾಲೆ ಮುಗಿಸಿಕೊಂಡು ಬರುವಾಗ ಕುಡಿದವರ ನಗ್ನ ನರ್ತನವನ್ನು ಅವರು ನೋಡಬೇಕು. ನಾನು ಅಬಕಾರಿ ಇಲಾಖೆಗೆ ಹೀಗಿದೆಯೆಂದು ಒಂದು ಪತ್ರ ಬರೆದೆ. ಅಬಕಾರಿ ಇಲಾಖೆಯವರು ಆ ಶಾಲೆಯವರನ್ನು ಸಂಪರ್ಕಿಸಿ ಶಾಲೆಯ ಗೇಟನ್ನು ಈ ಮೂಲೆಯಲ್ಲಿದ್ದುದನ್ನು ಆ ಮೂಲೆಗೆ ಹಾಕಿಸಿದ್ದಾರೆ. 200 ಮೀಟರ್ ಆಚೆ ಇದೆಯೆಂದು ಹೇಳಿ ಇವತ್ತು ಸಾರಾಯಿ ಅಂಗಡಿಯನ್ನು ಕಂಟಿನ್ಯು ಮಾಡಿದ್ದಾರೆ. ಆ ಅಬಕಾರಿ ಇಲಾಖೆಯ ಡೆಪ್ಯೂಟಿ ಕಮಿಷನರ್ ಹೇಳುತ್ತಾರೆ, ನೀವು ಹೀಗೆಲ್ಲಾ ಗಲಾಟೆ ಮಾಡಿದರೆ ಇರುವ ಶಾಪಗಳನ್ನು ನಾವು ಕಾಡಿಗೆ ಕಳುಹಿಸಬೇಕೇ ಎಂದು. ಅವುಗಳಿಂದಲೇ ನಮ್ಮ ಜೀವನ ನಡೆಯುವುದು ಎಂದು ಹೇಳುತ್ತಾರೆ. ಜೀವನ ಅಂದರೆ ಸರ್ಕಾರದ ಜೀವನನೋ ಅಥವಾ ಆ ಡೆಪ್ಯೂಟಿ ಕಮೀಷನರ್

ಜೀವನನೋ? ಬಹಳ ಒರಟಾಗಿ ಹೇಳಿದ ಆ ಮನುಷ್ಯ. ನಮ್ಮ ಜೀವನ ನಡೆಯಬೇಕು ಎಂದು ನೀವು ಏನು ಮಾಡುತ್ತಿದ್ದೀರಿ ಎಲ್ಲಾ ಬಡವರಿಗೆ ಕುಡಿಸಿ ಕುಡಿಸಿ ಸಾಯಿಸುತ್ತಿದ್ದೀರಿ. ಅವರ ಹೆಂಡತಿಯರಿಗೆ ವಿಧವಾ ಹಣವನ್ನು ಕೊಡುವುದಕ್ಕೆ ಅವನನ್ನು ನಾಶಮಾಡುವುದು, ಇತ್ತಕಡೆ ವಿಧವಾವೇತನ ಕೊಡುವುದು. ಇದರಿಂದ ಯಾವುದೇ ರೀತಿಯಲ್ಲಿ ಬಡ ಜನರಿಗೆ ಸಹಾಯ ಮಾಡಿದಂತಾಗುವುದಿಲ್ಲ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ಜ್ಞಾಪನಕ್ಕೆ ತರುತ್ತೇನೆ. ಮಹಾತ್ಮಗಾಂಧೀಜಿಯವರು 1927ನೇ ಇಸವಿಯಲ್ಲಿ ಯಂಗ್ ಇಂಡಿಯಾದಲ್ಲಿ ಹೇಳಿದ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ಅದು ಈ ರೀತಿ ಇದೆ. ``Gandhi must be recalled at the outset on what he meant by prohibition. "It betrays want of imagination and lack of sympathy with the people. if a Minister believes that as a prohibitionist he has nothing more to do but declare prohibition and prosecute those who will break his laws. There is a larger and more constructive side to prohibition. Any Minister who is sincerely anxious to make prohibition a success will have to develop the zeal and qualities of a reformer. He will have to convert every drink shop into a refreshment shop and concert room combined. Poor labourers will want some place where they can congregate and get wholesome, cheap, refreshing, non-intoxicating drinks and if they can have some good drink at the same time, it would prove as a tonic to them and draw them in "ಅಂದರೆ ಯಾವುದೋ ಒಂದು ವಚನಕ್ಕೆ ಸುಮ್ಮನೆ ಮುಚ್ಚಿಬಿಡುವುದಿಲ್ಲ. ಅದರಿಂದ ಏನೇನು ಆಗುತ್ತದೆಂದು ನೋಡಿಕೊಂಡು ಕೇವಲ ತಮಗೆ ಬರುವ ಲಾಭವನ್ನು ಗಮನದಲ್ಲಿಟ್ಟುಕೊಂಡು ಶಿಕ್ಷೆಯನ್ನು ಮಾಡಬೇಡಿ.

ಕೊನೆಗೆ ಈ ರಾಜ್ಯದಲ್ಲಿ ಬ್ಯುರೋಕ್ರಸಿ ಏನಿದೆ ಅಂದರೆ ನಮ್ಮ ಸರ್ಕಾರ ನೌಕರರು. ಅವರು ಹೇಗೆ ರಾಜಕೀಯ ವ್ಯಕ್ತಿಗಳಾಗಿದ್ದಾರೆಂಬುದನ್ನು ಹೇಳಿ ನನ್ನ ಮಾತು ಮುಗಿಸುತ್ತೇನೆ. ಕರ್ನಾಟಕ ರಾಜ್ಯದ ನೌಕರರ ಸಂಘ ಒಂದು ಇದೆ. The Karnataka State Government Employees Association. ಡಿಸ್ಟ್ರಿಕ್ಟ ರಿಜಿಸ್ಟ್ರಾರರವರು ಒಂದು ಎನಕ್ವೈರಿ ಮಾಡಿ ಒಂದು ರಿಪೋರ್ಟ ಸಬಮಿಟ್ ಮಾಡಿದ್ದಾರೆ. ಸಭಾಧ್ಯಕ್ಷರೇ, ಇವರು ಸರ್ಕಾರದ ಕೆಲಸ ಮಾಡುತ್ತಾರೋ, ಯಾವರೀತಿ ದುಂಡಾವರ್ತಿ ಮಾಡುತ್ತಾರೆನ್ನುವುದಕ್ಕೆ ಒಂದು ಸಾಕ್ಷಿ ಇದೆ. Rs. 1.2 Crores was received as one day contribution by the employees during the earth quake, Rs. 30 lakhs received from the Membership fee and Rs. 25 lakhs sanctioned by the previous Government for conducting KSEA Sammelan, In total Rs. 1.75 Crores is misappropriated. ಕಂಪ್ಲೀಟ್ ಮಿಸ್ ಅಪ್ರೋಪ್ರಿಯೇಟ್ ಮಾಡಿದ್ದಾರೆ. ಇಷ್ಟೇ ಅಲ್ಲದೆ ಬಹಳ ಮುಖ್ಯವಾದ ವಿಷಯ ಏನೆಂದರೆ ಅಲ್ಲಿನ ಒಬ್ಬ ಪದಾಧಿಕಾರಿ

ಇದ್ದಾರೆ ಅವರು ಹೆಸರು ಸಿಪ್ಪೇಗೌಡ ಅಂತ. ಅವರೊಂದು ಪತ್ರವನ್ನು ಬರೆಯುತ್ತಾರೆ The Association has indulged into political activities. A letter written by the Secretary Sri Sippe Gowda to Sri Jitendra Prasad, the then political Advisor to Hon'ble Prime Minister reads inter alia, " I wish to bring to your kind notice that the Employees Association consists over ten lakh Government employees as its Members and that makes forty lakh voters including their family members. The Government employees and affiliated Employees Association employees are working in Taluks, Districts and Villages. They can influence the public and other voters in favour of the Congress Party if Sri M.T. Krishnappa contests from the Congress party". ಇಷ್ಟೆಲ್ಲಾ ಆದಮೇಲೆ.. The letter of Sri Sippegowda is against the provisions of the Representation of people's Act and also the Karnataka Civil Services Conduct Rules. ಇದೆಲ್ಲಾ ಹೇಳಿ ರಿಜಿಸ್ಟಾರರವರು ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದಾರೆ. "In view of the above I am of the considered opinion that immedite appointment of an Administrator is necessary to set right the affairs of the Association". ಇದು ರಿಪೋರ್ಟ ಕೊಟ್ಟು ಸುಮಾರು ದಿವಸವಾಯಿತು. ನೀವು ಕ್ರಮ ತೆಗೆದುಕೊಂಡಿಲ್ಲ ಏಕೆ? ಹೋದಸಲ ಕಾಂಗ್ರೆಸಗೆ ಮಾಡಿದ್ದರು. ಈ ಸಲ ನಮ್ಮ ಜನತಾದಳದವರಿಗೆ ಮಾಡುತ್ತಾರೆ ಎಂದೇ?

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಹೀಗೆ ವೈಲ್ಡ್ ಚಾರ್ಜಸ್ ಮಾಡುವುದು ಬೇಡ. ಆಕ್ಷನ್ ತೆಗೆದುಕೊಳ್ಳುವುದಿಲ್ಲ ಎಂದರೆ ಏನು? ಅವನು ಹೇಳಿದ ತಕ್ಷಣ ಅಡ್ಮಿನಿಸ್ಟ್ರೇಟರನ್ನು ಹಾಕಿದರೆ ಬೆಳಿಗ್ಗೆ ಹೋಗಿ ಹೈಕೋರ್ಟಿನ ಸ್ಟೇ ಆರ್ಡರ್ ತೆಗೆದುಕೊಂಡುಬರುತ್ತಾರೆ. ನಮಗೂ ಅಧಿಕಾರ ನಡೆಸುವುದಕ್ಕೆ ಗೊತ್ತಿದೆ. ನಾವು ಏನು ಮಾಡಬೇಕೋ ಅದನ್ನು ಮಾಡುತ್ತಾ ಇದ್ದೇವೆ. ವೈಲ್ಡ ಚಾರ್ಜಸ್ ಮಾಡಬೇಡಿ.

ಶ್ರೀ ಎಸ್ ಸುರೇಶ್ ಕುಮಾರ್ : ವೈಲ್ಡ್ ಚಾರ್ಜಸ್ ಅಲ್ಲ..

ಶ್ರೀ ಆರ್.ಎಲ್. ಜಾಲಪ್ಪ : ಇನ್ನೇನು ಮತ್ತೆ? ಜನತಾದಳಕ್ಕೆ ಮಾಡಲಿ ಅಂತ ನಾವು ಇಟ್ಟುಕೊಂಡು ಕುಳಿತಿದ್ದೇವೆಯೋ? We have served a letter on the concerned persons asking his comments. ಅದು ಬಂದಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸುರೇಶಕುಮಾರ್ : ದಯವಿಟ್ಟು ಏನು ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ ಈ ಸಂಘ.

(ಉಪಾಧ್ಯಕ್ಷರು ಶ್ರೀ ಎಂ. ಎಸ್. ಪಾಟೀಲ್)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಆರ್.ಎಲ್. ಜಾಲಪ್ಪ : ನಮಗೇನೂ ಗೊತ್ತಾಗುವುದಿಲ್ಲವೇನು?

ಶ್ರೀ ಎಸ್. ಸುರೇಶಕುಮಾರ್ : ಈ ಸಂಘ ಏನು ರಾಜಕೀಯವನ್ನು ಮಾಡುವುದಕ್ಕೆ ಹೊರಟಿದೆ, ಈ ಚಟುವಟಿಕೆಯನ್ನು ನಿಲ್ಲಿಸುವುದಕ್ಕೆ ದಯವಿಟ್ಟು ಕ್ರಮವನ್ನು ತೆಗೆದುಕೊಳ್ಳಬೇಕು. ಒಬ್ಬ ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡಿ.

SRI R.L. JALAPPA : We have already written to the concerned person asking him to give his comments on this report. let it come.

ಶ್ರೀ ಎಸ್. ಸುರೇಶಕುಮಾರ್ : ಆಮೇಲೆ, ಮಾನ್ಯ ಉಪಾಧ್ಯಕ್ಷರೇ, ಈ ಸರ್ಕಾರದ ಒಬ್ಬರು ಸಚಿವರು ಯಾವರೀತಿ ತಮ್ಮ ಆಫೀಸನ್ನು ಮಿಸ್‌ಯೂಸ್ ಮಾಡಿಕೊಳ್ಳುತ್ತಿದ್ದಾರೆ ಎಂಬುದಕ್ಕೆ ಒಂದು ತಾಜಾ ಉದಾಹರಣೆ ಇವತ್ತು ಬಂದಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಲ್ಲಿ ಸಿಪ್ಪೇಗೌಡರು ಅಧ್ಯಕ್ಷರು ಇದ್ದಾರಲ್ಲಾ?

ಶ್ರೀ ಎಸ್. ಸುರೇಶಕುಮಾರ್ : ಅದರ ಮೇಲೂ ಇದೆ. ಅವರು ಯಾವರೀತಿ ಜಿತೇಂದ್ರ ಪ್ರಸಾದಗೆ ಲೆಟರ್ ಬರೆದಿದ್ದರು..

ಶ್ರೀ ಕೆ.ಎನ್. ನಾಗೇಗೌಡ : ಸುಪ್ರೀಂ ಕೋರ್ಟಿನವರು ತೀರ್ಮಾನ ಮಾಡಿದ್ದಾರೆ. ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡುವುದಕ್ಕೆ ಸರ್ಕಾರರಕ್ಕೆ ಏನು ಅಧಿಕಾರ ಇದೆ? ಚಾರ್ಜಸ್ ಇದ್ದರೆ? it has to be recognised by the Supreme Court, and not by any other court.

ಶ್ರೀ ಎಸ್. ಸುರೇಶಕುಮಾರ್ : ಈ ಸರ್ಕಾರದಲ್ಲಿ..

ಶ್ರೀ ಆರ್. ಎಲ್. ಜಾಲಪ್ಪ : ಮಿಸ್ ಅಪ್ರೊಪ್ರಿಯೇಷನ್ ಆಗಿದೆ ಎಂದು ಬಂದಿರುವುದು ಮೇಲೆ ನಾವು ಡಿಸ್ಟ್ರಿಕ್ಟ ರಿಜಿಸ್ಟ್ರಾರ್ ಅವರನ್ನು ಕಳುಹಿಸಿದ್ದೇವೆ. ಅವನು ಥಿಯರಿ ಬರೆದಹಾಗೆ ಬರೆದಿದ್ದಾನೆ. ಸ್ಪೆಸಿಫಿಕ್ ಚಾರ್ಜಸ್ ಏನು ಮಾಡಿದ್ದರೋ, ಅದಕ್ಕೆ ಸರಿಯಾದ ಉತ್ತರ ಬರಲಿಲ್ಲ ಅಲ್ಲಿಂದ. ಆದ್ದರಿಂದ ನಾವು ಏನು ರಿಪೋರ್ಟ ಬಂದಿತ್ತು, ಅದರ ಕಾಫಿಯನ್ನು ಸಂಬಂಧಪಟ್ಟ ವ್ಯಕ್ತಿಗೆ ಕಳುಹಿಸಿ ನಿಮ್ಮ ಕಾಮೆಂಟ್ಸ ಕೊಡಿ ಎಂದು ಕೇಳಿದ್ದೇವೆ. ಬಂದಮೇಲೆ ಸರ್ಕಾರ ಯೋಚನೆ ಮಾಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಅದಕ್ಕೆ ನಮ್ಮ ಮಾನ್ಯ ಸದಸ್ಯರು ಜನತಾದಳದವರು ಸಪೋರ್ಟ್ ಮಾಡಲಿ ಆಕ್ಷನ್ ತೆಗೆದುಕೊಂಡಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಸುರೇಶಕುಮಾರ್ : ಸಿಪ್ಪೇಗೌಡರೂ ಕೂಡ ನಾಗೇಗೌಡರ ಜೊತೆಗೆ

ಬಂದುಬಿಟ್ಟಿರೇನೋ ಅಂದುಕೊಂಡೆ. ಸಿಪ್ಪೇಗೌಡರ ಮೇಲೆ ಏನೂ ಚಾರ್ಜಸ್ ಇಲ್ಲ ಎಂದೂ ಹೇಳಿದಿರಲ್ಲಾ...

ಶ್ರೀ ಕೆ.ಎನ್. ನಾಗೇಗೌಡ : ಸಿಪ್ಪೇಗೌಡರು, ಕೃಷ್ಣಪ್ಪ ಇದ್ದರೂ ನನಗೆ ಸ್ನೇಹಿತರೇ ಇಬ್ಬರೂ ನನಗೆ ಆಪ್ತರೇ. ನಾನು ಹೇಳುವುದು charge are different, Association is different ರೆಕಗ್ನಷನ್ ಆಗಿರತಕ್ಕಂಥಾದ್ದು ಬೇರೆ. ಚಾರ್ಜಸ್ ಇದ್ದರೆ ಸರ್ಕಾರ ನೋಟೀಸ್ ಕೊಟ್ಟಿದೆ, ಉತ್ತರ ತೆಗೆದುಕೊಳ್ಳುತ್ತದೆ.

ಶ್ರೀ ಎಸ್. ಸುರೇಶ್‌ಕುಮಾರ್ : ಈ ರಿಪೋರ್ಟ್‌ನಿಂದಲೇ ಏನು ಅಂಶ ಇದೆಯೆಂದು ನಾನು ಓದಿದ್ದೇನೆ. ಮಾನ್ಯ ಸಭಾಧ್ಯಕ್ಷರೇ, ಈ ಸರ್ಕಾರದ ಒಬ್ಬ ಸಚಿವರು 1985ನೇ ಇಸವಿಯಲ್ಲಿ ಮೆಡಿಕಲ್ ಕೋರ್ಸನ್ನು ಓದುತ್ತಿದ್ದರು. ಎಂ.ಎಲ್.ಎ. ಆದರು, ಓದನ್ನು ಬಿಟ್ಟರು. ಈಗ ಪರೀಕ್ಷೆಯಲ್ಲಿ ಬರೆಯುವುದಕ್ಕೆ ದಾವಣಗೆರೆಗೆ ಹೋಗಿದ್ದಾರೆ. ಎಕ್ಸಾಮಿನೇಷನ್ ಸೂಪರವೈಸರ್ಸ್ ಅಥವಾ ಇನ್ನು ಯಾರು ಅಧಿಕಾರಿಗಳು ಇದ್ದಾರೆ, ಅವರೆಲ್ಲಾ ಅವರ ಮಿನಿಸ್ಟ್ರಿಯಲ್ಲಿ ಬರುವಂಥ ಸಬಆರ್ಡಿನೇಟ್ಸ್, ಈ ರೀತಿ ಇರುವಾಗ ಇಂತಹ ಪರಿಸ್ಥಿತಿಯನ್ನು ನಾನು ಎಲ್ಲೂ ಕೂಡ ಕೇಳಿಲ್ಲ! ಅರಿತಿಲ್ಲ. ಒಬ್ಬರು ಹೆಲ್ತ ಮಿನಿಸ್ಟರ್ ಯಾರಿದ್ದಾರೆ, ಅವರು ಹೋಗಿ ಎಂ.ಬಿ.ಬಿ.ಎಸ್. ಪರೀಕ್ಷೆಗೆ ಬರೆಯುವುದು ಅದು ಯಾವರೀತಿ ಸೂಕ್ತ? Will it not amount to influencing the invigilators and supervisors?

SRI R.L. JALAPPA : That is a wild allegation. ಇದೇ ಸದನದಲ್ಲಿ ಯಾರಿಗೋ ಮಾರ್ಕ್ಸ ಜಾಸ್ತಿ ಕೊಟ್ಟರು ಹಾಗೆಂದು ಹೇಳಿ ದೊಡ್ಡ ಗಲಾಟೆಯಾಗಿದೆ. ಇವತ್ತು ಏನೋ ಮಿನಿಸ್ಟರ್ ಅವರು ಪರೀಕ್ಷೆಗೆ ಕುಳಿತುಕೊಂಡಿದ್ದಾರೆ ಎಂದು ಹೇಳಿ ಅವರು ಬರೆಯದೇಇರುವುದಕ್ಕೆಲ್ಲಾ ಮಾರ್ಕ್ಸ ಕೊಟ್ಟುಬಿಟ್ಟರೆ ನಾಳೆದಿವಸ ಅದು ಯಥಾಪ್ರಕಾರ ಬರುತ್ತದೆ. ಅದು ಎಲ್ಲರಿಗೂ ಭಯ ಇದೆ. ಅದು ಅಷ್ಟು ಸುಲಭ ಅಲ್ಲ. ಅದೆಲ್ಲಾ ಯೋಚನೆ ಮಾಡಿಯೇ ಅವರು ಪರೀಕ್ಷೆಗೆ ಹೋಗಿರುವುದು. ನಾಳೆ ದಿವಸ ಏನಾದರೂ ಹೆಚ್ಚುಕಡಿಮೆಯಾದರೆ ವಿಧಾನಸಭೆಗೂ ಬರುತ್ತದೆ, ದೇಶದೊಳಗೆಲ್ಲ ಇದೇ ಸುದ್ಧಿಯಾಗುತ್ತದೆ. ಇದೆಲ್ಲಾ ಯೋಚನೆ ಮಾಡಿಯೇ ಅವರು ಕರೆಕ್ಟ ಆಗಿ ಎಕ್ಸಾಮಿನೇಷನಗೆ, ಬರೆಯುವುದಕ್ಕೆ ಹೋಗಿದ್ದಾರೆ. ಅವರು ಹೋಗಿದ್ದಾರೆ ಎಂದು ಹೇಳಿ ಮಾರ್ಕ್ಸನ್ನು ಸಿಕ್ಕಾಪಟ್ಟೆ ಹಾಕುವುದಕ್ಕೆ ಆಗುವುದಿಲ್ಲ. 25 ಬಂದಿರುವುದಕ್ಕೆ 75 ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್ ಸುರೇಶಕುಮಾರ್ : ಹಿಂದೆಲ್ಲಾ ಬಹಳಷ್ಟು ಜನ ಪೋಸ್ಟಲ್ ಕರೆಸ್ಪಾಂಡೆನ್ಸ ಮಾಡಿರುವ ಉದಾಹರಣೆ ಇದೆ. ಇಲ್ಲಿ ಸಮಸ್ಯೆ ಇರುವುದು ಯಾವ ಸಚಿವರು ಯಾವ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದಾರೆ, ಅದಕ್ಕೆ ಸಂಬಂಧ ಪಟ್ಟಿರತಕ್ಕಂಥಾದ್ದು ಎಂ.ಬಿ.ಬಿ.ಎಸ್. ಪರೀಕ್ಷೆ. ಸೂಪರವೈಸರ್ಸ ಯಾರು? ಅವರು ಸರ್ಕಾರದ ಸೇವೆಯಲ್ಲಿರುವವರು..

ಶ್ರೀ ಆರ್. ಎಲ್. ಜಾಲಪ್ಪ : ಅವರು ಹೋಗಿರುವುದು ದಾವಣಗೆರೆಯ ಪ್ರೈವೇಟ್ ಕಾಲೇಜು. ಗವರ್ನಮೆಂಟ್ ಕಾಲೇಜ್ ಅಲ್ಲ.

ಶ್ರೀ ಎಸ್. ಸುರೇಶಕುಮಾರ್ : ಮಾನ್ಯ ಸಭಾಧ್ಯಕ್ಷರೇ, ನಿಮ್ಮ ಒಳ್ಳೆಯ ಅವಕಾಶ ಇತ್ತು, ನಾವು ಅವರಿಗಿಂತ ಭಿನ್ನ ಎಂದು ತೋರಿಸಲಿಕ್ಕೆ. ಆದರೆ ಎಲ್ಲದರಲ್ಲೂ ಕೂಡ ನೀವು ವಿಫಲರಾಗಿದ್ದೀರಿ ಹಿಂದೆ ನೀವೇನು ಕಾಂಗ್ರೆಸ್ಸಿನವರನ್ನು ಬಯ್ಯುತ್ತಿದ್ದೀರಿ. ಅವರಿಗಿಂತ ನಾವು ಭಿನ್ನ ಅಂತ. ನನ್ನ ಪ್ರಕಾರ ಅವರಿಗೂ ನಿಮಗೂ ಏನೂ ವ್ಯತ್ಯಾಸ ಕಾಣುತ್ತಾ ಇಲ್ಲ. ಹಿಂದೆ ಒಂದು ಟೂತಪೇಸ್ಟ ಬರುತ್ತಾ ಇತ್ತು. 'ಬಿನಾಕಾ' ಅಂತ. ಆಮೇಲೆ ಅದು 'ಸಿಬಾಕಾ ' ಆಯಿತು. ಹೆಸರು ಮಾತ್ರ ಬದಲಾವಣೆ. ಆ ಕಂಟೆಂಟ್ ಎಲ್ಲಾ ಅದೇ ಅವರು 'ಬಿನಾಕಾ' ಆದರೆ ನೀವು 'ಸಿಬಾಕಾ' ಆಗಿದ್ದೀರಿ. ಜನಸಾಮಾನ್ಯರಿಗೆ ನಿಜವಾದ ರಚನಾತ್ಮಕ ಬದಲಾವಣೆ ತರುವುದರಲ್ಲಿ, ಅವರಿಗೆ ನೆಮ್ಮದಿ ಉಂಟು ಮಾಡುವುದರಲ್ಲಿ, ನಿಮ್ಮ ಆಡಳಿತದಲ್ಲಿ ಏನಾದರೂಒಂದು ಒಂದು ಅಂಶವನ್ನು ಕಾಣಿಸುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ ಎಂದು ಹೇಳಿ ಏನು ರಾಜ್ಯಪಾಲರ ಹತ್ತಿರ ಬಹಳ ಬಲವಂತವಾಗಿ ಒಂದು ಭಾಷಣವನ್ನು ಓದಿಸಿ ಒಂದು ರಿಚ್ಯುಚಲ್ ಮಾಡಿದ್ದೀರಿ, ಆ ರಿಚ್ಯುಯಲಗೂ ಕೂಡ ನನ್ನ ವಿರೋಧವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಬೇರೆ ಮಾನ್ಯ ಸದಸ್ಯರುಗಳು ಮಾತನಾಡುವುದಕ್ಕೆ ಮುಂಚೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ರಾಜ್ಯಕ್ಕೆ ಮಾನ್ಯ ಪ್ರಧಾನಮಂತ್ರಿಗಳು ಬಂದಿದ್ದಾರೆ. ನಾವು ಇಲ್ಲಿ ಸದನವನ್ನು ನಡೆಸುತ್ತಿದ್ದೇವೆ ಅವರದ್ದು ಏನು ಕಾರ್ಯಕ್ರಮ ಇದೆಯೆಂದು ನಮಗೆ ಯಾರಿಗೂ ಗೊತ್ತಿಲ್ಲ. ಪ್ರಧಾನಮಂತ್ರಿಗಳು ರಾಜ್ಯಕ್ಕೆ ಬಂದಾಗ ಅದು ಒಂದು ವಿಶೇಷವಾಗುತ್ತದೆ. ಅದರಲ್ಲೂ ಕೋಡಿಮಠಕ್ಕೆ ಹೋಗಿದ್ದಾರೆ. ನಾವು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಆದ್ದರಿಂದ ಅವರ ಕಾರ್ಯಕ್ರಮಗಳು ಏನು? ಏನು ಉದ್ದೇಶ ಅಥವಾ ಚುನಾವಣೆಯೇನಾದರೂ ಘೋಷಣೆ ಆಗುತ್ತಿದೆಯೇ? ಅಥವಾ ಅವರು ಕೋಡಿಮಠಕ್ಕೆ ಬಂದು ಚುನಾವಣೆಯ ತಾರೀಖು ಏನಾದರೂ ನಿರ್ಧಾರವಾಗುತ್ತಿದೆಯಾ? ನಮಗೇನೂ ವಿಚಾರಗಳು ಗೊತ್ತಾಗುತ್ತಿಲ್ಲ. ಒಂದು ತರಹ ನಾವೆಲ್ಲರೂ ಕತ್ತಲೆಯಲ್ಲಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ಅವರು ಬಂದಿರುವುದು ಬೆಳಗಾಮನಲ್ಲಿ ಕೆ.ಎಲ್.ಇ. ಸೊಸೈಟಿಯವರು ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟಿದ್ದಾರೆ, ಸುಮಾರು 75-80 ಕೋಟಿ ರೂಪಾಯಿ ಖರ್ಚುಮಾಡಿ..

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುತ್ತೇನೆ..

ಶ್ರೀ ಆರ್.ಎಲ್. ಜಾಲಪ್ಪ : ಆಯಿತು ಬಿಡಿ. 'ಆ' ಎಂದ ಕೂಡಲೇ ಯಾವ ಸಂಗೀತ ಹಾಡುತ್ತೀರಿ ಎಂಬುದು ಗೊತ್ತಾಗಿಬಿಡುತ್ತದೆ? ಅವರು ಹಾಸ್ಪಿಟಲ್ 'ಉದ್ಘಾಟನೆಗೆ ಇಲ್ಲಿಗೆ ದಯಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ನಾನು ಬಹಳ ಪ್ರಾಮಾಣಿಕವಾಗಿ ತಮ್ಮನ್ನು ಕೇಳುತ್ತಿದ್ದೇನೆ. ಇದು ಏನಾಗಿದೆಯೆಂದು ಯಾರಾದರೂ ಒಬ್ಬರು ಸದನದಲ್ಲಿ ಹೇಳಿಕೆ ಕೊಡುವುದು ಬೇಡವೇ? ಪ್ರಧಾನಿಮಂತ್ರಿಗಳು ನಮ್ಮ ರಾಜ್ಯಕ್ಕೆ ಬಂದಿದ್ದಾರೆ. ಅವರೇನು ಕೈಗಾರಿಕೆ ಉದ್ಘಾಟನೆಗೆ ಬಂದಿದ್ದಾರೋ, ರಸ್ತೆ ಉದ್ಘಾಟನೆಗೆ ಬಂದಿದ್ದಾರೋ, ಅಥವಾ ಸೇತುವೆ ಉದ್ಘಾಟನೆಗೆ ಬಂದಿದ್ದಾರಾ? ಯಾವ ಕಾರ್ಯಕ್ರಮ ಅವರದ್ದು ಇದೆ, ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಅವರ ಜೊತೆಗೆ ಹೋಗಿದ್ದಾರೆ. ನಮ್ಮ ಸದನದ ಸದಸ್ಯರುಗಳಿಗೆ ಪ್ರಧಾನಮಂತ್ರಿಗಳು ರಾಜ್ಯಕ್ಕೆ ಏತಕ್ಕೆ ಬಂದಿದ್ದಾರೆ ಎನ್ನತಕ್ಕಂಥಾದ್ದು, ಯಾವ ಕಾರಣಕೋಸ್ಕರ ರಾಜ್ಯಕ್ಕೆ ಬಂದಿದ್ದಾರೆ, ಏಕೆಂದರೆ ಒಂದು ಕಡೆ ಡೆಲ್ಲಿಯಲ್ಲಿ ಒಂದು ದೊಡ್ಡ ಹವಾಲ ಹಗರಣ ಇದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರು ಕೋಡಿಮಠಕ್ಕೆ ಹೋಗಲಿ. ಇವತ್ತು ಬೆಳಿಗ್ಗೆ ಸುಪ್ರೀಂ ಕೋರ್ಟಿನ ಜಡ್ಜಮೆಂಟ್ ಆಗಿದೆ. ಏನಾಗುತ್ತದೆ ಏನೋ ಎಂದು ಕೇಳುವುದಕ್ಕೆ ಹೋಗಿದ್ದಾರೆ. ಭಯ ಅವರಿಗೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಪ್ರಧಾನಿಗಳ ಬಗ್ಗೆ ನಾವು ಅಷ್ಟೊಂದು ಲಘುವಾಗಿ ಮಾತನಾಡುವುದು ಬೇಡ. ಏತಕ್ಕೆ ಬಂದಿದ್ದಾರೋ, ಏನು ಕಥೆಯೋ ನಮಗೆ ಗೊತ್ತಿಲ್ಲ. ಶಾಸ್ತ್ರ ಕೇಳುವುದಕ್ಕೆ ಬಂದಿದ್ದಾರೋ, ಆಶೀರ್ವಾದ ತೆಗೆದುಕೊಳ್ಳುವುದಕ್ಕೆ ಬಂದದ್ದಾರೋ, ನಮಗೇನೂ ಗೊತ್ತಿಲ್ಲ. ನಾವು ಏತಕ್ಕೆ ಇಲ್ಲಿ ಸುಮ್ಮನೆ ಲಘುವಾಗಿ ಮಾತನಾಡಬೇಕು? ಅದು ಅನಾವಶ್ಯಕ.

ಒಬ್ಬ ಮಾನ್ಯ ಸದಸ್ಯರು : ಏನು ಸ್ವಾಮಿ, ಇದು ಈ ತರಹ ಉತ್ತರ ಕೊಟ್ಟರೆ ಹೇಗೆ? ನಾನು ತಮ್ಮ ಮನ ಒಲಿಸುತ್ತಿದ್ದೇನೆ. ಕಾಂಗ್ರೆಸ್ ಸದಸ್ಯರು ಒಬ್ಬರೂ ಇಲ್ಲ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ನಾವು ಅವರನ್ನು ಸ್ವಾಗತ ಮಾಡುತ್ತೇವೆ, ಕರ್ನಾಟಕದ ಜನ ಪ್ರಧಾನಮಂತ್ರಿಗಳನ್ನು ವಿಶೇಷವಾಗಿ ಸ್ವಾಗತ ಮಾಡುತ್ತಾರೆ. ಅವರಿಗೆ ಅಭಿನಂದನೆ ಸಲ್ಲಿಸುತ್ತೇವೆ. ಆದರೆ ಈ ಸದನ ನಡೆಯುವಾಗ ಈ ಸದನಕ್ಕೆ ಒಂದು ಪ್ರಾಮುಖ್ಯತೆ ಇದೆ. ಸದನದ ಮುಂದೆ ಪ್ರಧಾನಮಂತ್ರಿಗಳು ಬಂದಿದ್ದಾರೆ, ಈ ರೀತಿ ಅವರ ಕಾರ್ಯಕ್ರಮಗಳು ಇವೆ, ಎಂದು ಹೇಳದೆ ಸರ್ಕಾರ ಹಾರಿಕೆಯ ಹೇಳಿಕೆಯನ್ನು ಕೊಟ್ಟರೆ ಹೇಗೆ? ಈಗ ಮಾನ್ಯ ಗೃಹಸಚಿವರು ಬಂದಿದ್ದಾರೆ. ಅವರ ಗಮನಕ್ಕೆ ಒಂದು ವಿಚಾರವನ್ನು ತರಬೇಕೆಂದು ಮಾಡಿದ್ದೇವೆ. ಪ್ರಧಾನಮಂತ್ರಿಗಳು ಕರ್ನಾಟಕ ರಾಜ್ಯಕ್ಕೆ ಬಂದಿದ್ದಾರೆ. ಆ ಸಂದರ್ಭದಲ್ಲಿ ಸದನ ನಡೆಯುತ್ತಾ ಇದೆ. ಅವರು ಬಂದಿರುವ ಬಗ್ಗೆ ನಾವು ಅತ್ಯಂತ ಅಭಿನಂದನೆಯನ್ನು ಸಲ್ಲಿಸುತ್ತೇವೆ. ಅವರ ಬಗ್ಗೆ ನಾವು ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದೇವೆ. ಈ ರಾಜ್ಯಕ್ಕೆ ಯಾವ ಕಾರಣಕೋಸ್ಕರ ಬಂದಿದ್ದಾರೆ, ಸರ್ಕಾರಿ ಕಾರ್ಯಕ್ರಮಗಳು ಏನಿವೆ, ಅದು ಸರ್ಕಾರ ನಡೆಯುವಾಗ ನಮ್ಮ ಗಮನಕ್ಕೂ ಸ್ವಲ್ಪ ಬರಲಿ. ಇದು ನಮ್ಮ ಉದ್ದೇಶವೇ ಹೊರತು ಇದೇನೂ ಕಾನೂನಲ್ಲ, ಒತ್ತಾಯವಲ್ಲ. ಶಾಂತಿ, ಸಂರಕ್ಷಣೆಯ ಜವಾಬ್ದಾರಿಯನ್ನು ಹೊತ್ತವರು ತಾವು ಗೃಹಸಚಿವರು. ಏನೇನು ಕಾರ್ಯಕ್ರಮಗಳು ನಡೆದಿವೆ ಎಂಬುದನ್ನು ತಾವು ಹೇಳಬೇಕು. ಈಗಾಗಲೇ ಕೋಡಿಮಠಕ್ಕೆ ಹೋಗಿ ಬಂದಿದ್ದಾರೆ ಎಂದು ಒಂದು

ಪ್ರಶ್ನೆ ಬಂದಿದೆ. ನಮಗೆ ಯಾವವಿಚಾರವೂ ಗೊತ್ತಿಲ್ಲ. ನಾವು ಒಂದು ರೀತಿಯಲ್ಲಿ ಕತ್ತಲೆಯಲ್ಲಿದ್ದೇವೆ. ಆದ್ದರಿಂದ ಪ್ರಧಾನಮಂತ್ರಿಗಳು ಬಂದಿದ್ದಾರೆ ಎಂದರೆ ಅದೊಂದು ವಿಶೇಷವಾದಂಥ ಸಂದರ್ಭ. ಈ ದೇಶದ ಪ್ರಧಾನಮಂತ್ರಿಗಳು ನಮ್ಮ ರಾಜ್ಯಕ್ಕೆ ಬಂದಿರುವಂಥಾದ್ದು ನಾವು ಸ್ವಾಗತ ಮಾಡುವಂಥಾದ್ದು. ಈ ಸದನದ ಮೂಲಕ, ಮತ್ತು ರಾಜ್ಯದ ಮೂಲಕ ನಾನು ಸ್ವಾಗತ ಮಾಡುತ್ತೇನೆ. ಅಂದರೆ, ಸದನದ ಮೂಲಕ ಸ್ವಾಗತ ಮಾಡಬೇಕಾದರೆ ನೀವು ಯಾರು ಎಂದು ಕೇಳಬಹುದು. ಆದರೂ, ವೈಯಕ್ತಿಕವಾಗಿ ನಾನು ಅವರನ್ನು ಸ್ವಾಗತ ಮಾಡುತ್ತೇನೆ. ಆದ್ದರಿಂದ ಗೃಹಸಚಿವರು ಈ ಬಗ್ಗೆ ಸದನದಲ್ಲಿ ಒಂದು ಹೇಳಿಕೆ ಕೊಡತಕ್ಕಂತಾದ್ದುದು ಒಳ್ಳೆಯದೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ಹೇಳಿಕೆ ಕೊಡತಕ್ಕಂತಾದ್ದು, ವಿಶೇಷವಾಗಿ ಹೇಳುವಂತಾದ್ದೇನೂ ಇಲ್ಲ. ಆದರೆ, ಗೌರವಾನ್ವಿತ ಪ್ರಧಾನಿಗಳು ನಮ್ಮ ರಾಜ್ಯಕ್ಕೆ ಭೇಟಿ ಕೊಟ್ಟಿದ್ದಾರೆ. ಈ ರಾಜ್ಯದ ಜನತೆ ಮತ್ತು ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಚಿವ ಸಂಪುಟದ ಸಹೋದ್ಯೋಗಿಗಳು, ವಿಧಾನ ಪರಿಷತ್ತಿನ ಅಧ್ಯಕ್ಷರು, ವಿರೋಧಪಕ್ಷಗಳ ನಾಯಕರುಗಳು, ಎಲ್ಲರೂ ಸಹ ನಿನ್ನೆ ರಾತ್ರಿ ಹೋಗಿ ಸ್ವಾಗತ ಮಾಡಿದ್ದಾರೆ. ಈ ದೇಶದಲ್ಲಿ ಬೇಕಾದಷ್ಟು ಅನ್ಯಧರ್ಮಗಳ ನಂಬಿಕೆ ಇರತಕ್ಕಂಥ ಸ್ಥಳಗಳು, ಮಠಗಳು, ಮಾನ್ಯಗಳು ಇವೆಲ್ಲಾ ಸಿಗುತ್ತಾ ಇವೆ. ಅದೇ ರೀತಿಯಾಗಿ ಮಾನ್ಯ ಪ್ರಧಾನಮಂತ್ರಿಗಳು ಕೋಡಿಮಠಕ್ಕೆ ಭೇಟಿ ಕೊಟ್ಟುಬಂದಿದ್ದಾರೆ. ಚಿಕ್ಕೋಡಿಯಲ್ಲಿ ಒಂದು ನ್ಯಾಯಾಲಯದ ಕಾರ್ಯಕ್ರಮ ಇದೆ. ಅನಂತರ, ಬೆಳಗಾವಿಯಲ್ಲಿ ಒಂದು ಖಾಸಗಿ ಮೆಡಿಕಲ್ ಕಾಲೇಜಿನ ಕಾರ್ಯಕ್ರಮ ಇದೆ. ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಗೋವಾ ಮೂಲಕ ದೆಹಲಿಗೆ ಹೋಗತಕ್ಕ ಕಾರ್ಯಕ್ರಮವಿದೆ. ಸರ್ಕಾರದ ಪರವಾಗಿ ಗೌರವಾನ್ವಿತ ಮುಖ್ಯಮಂತ್ರಿಗಳು, ಗೌರವಾನ್ವಿತ ಪ್ರಧಾನಿಗಳ ಜೊತೆಯಲ್ಲಿದ್ದಾರೆ. ಇಷ್ಟು ಈ ಸದನಕ್ಕೆ ತಿಳಿಸುತ್ತಿದ್ದೇನೆ.

(ಅಧ್ಯಕ್ಷರು ಶ್ರೀ ರಮೇಶಕುಮಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಸನ್ಮಾನ್ಯ ಅಧ್ಯಕ್ಷರೇ, ನಾನು, ನಮ್ಮ ಇಲಾಖೆಯ ಕೆಲಸದ ಮೇಲೆ ಪಕ್ಕದ ಜಿಲ್ಲೆಗೆ ಹೋಗಬೇಕಾಗಿರುವುದರಿಂದಾಗಿ, ನಮ್ಮ ಧಾರ್ಮಿಕ ಕಟ್ಟಡಗಳಿಗೆ ಸಂಬಂಧಪಟ್ಟಹಾಗೆ, ಮಸೂದೆಯನ್ನು ಈ ಸದನದಲ್ಲಿ ನಾನು ಮಂಡಿಸಿದ್ದೇನೆ. ಗೌರವಾನ್ವಿತ ಕಾನೂನು ಇಲಾಖೆಯ ಸಚಿವರು ಅದನ್ನು ಇಲ್ಲಿ ಚರ್ಚೆಗೆ ತರುತ್ತಾರೆ. ದಯಮಾಡಿ, ಗೌರವಾನ್ವಿತ ಸದಸ್ಯರು, ತಾವು ಒಪ್ಪಿಗೆ ಕೊಟ್ಟು, ಒಂದು ಕಾನೂನನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಇವತ್ತಿನ ಅಜೆಂಡಾದಲ್ಲಿ ಇದೆ. ಆದ್ದರಿಂದ ಇದನ್ನು ಪಾಸ್ ಮಾಡಿಕೊಡಬೇಕೆಂದು ಹೇಳಿ, ನನಗೆ ಹೋಗುವುದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ತಾವು ಹೋಗಿ ಬನ್ನಿ.

+ ಶ್ರೀ ಯು. ಚಿತ್ತರಂಜನ್ (ಭಟ್ಕಳ) : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ವಂದನಾನಿರ್ಣಯದ ಕುರಿತು ನನ್ನ ವಿರೋಧವನ್ನು ವ್ಯಕ್ತಪಡಿಸಲಿಕ್ಕೆ ತಮ್ಮ ಮುಂದೆ ಎದ್ದುನಿಂತಿದ್ದೇನೆ. ಈಗಾಗಲೇ ಅನೇಕ ಸದಸ್ಯರು ಹೇಳಿದಹಾಗೆ, ಸರ್ಕಾರದವರು ತಯಾರಿಸಿದ ಒಂದು ಭಾಷಣವನ್ನು ಘನವೆತ್ತ ರಾಜ್ಯಪಾಲರು. ಜಂಟಿ ಅಧಿವೇಶನವನ್ನು ಉದ್ದೇಶಿಸಿ, ಮಾತನಾಡುವುದು ಒಂದು ಸಂಪ್ರದಾಯ. ಇದರ ಬಗ್ಗೆ ನಾನು ಚರ್ಚೆಮಾಡಲಿಕ್ಕೆ ಹೋಗುತ್ತಾ ಇಲ್ಲ. ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನಪಡುತ್ತೇನೆ. ರಾಜ್ಯಪಾಲರ ಈ ಭಾಷಣದ ಸಂಪೂರ್ಣ ಜವಾಬ್ದಾರಿ ಸರ್ಕಾರದ್ದೇ ಆಗಿದೆ ಎನ್ನುವಂತಾದ್ದು ನಮಗೆಲ್ಲಾ ತಿಳಿದೇ ಇದೆ. ಅನೇಕ ಆಪಾದನೆಗಳನ್ನು ಸರ್ಕಾರದ ಮೇಲೆ ಮಾಡಲಿಕ್ಕೆ ಬಹುಶಃ ಈ ವಿಧಾನ ಸಭೆ ಸರಿಯಾದಂಥ ವೇದಿಕೆ ಅಲ್ಲ. ನಮಗೆ ಬೇಕಾದಂಥ ಸಾರ್ವಜನಿಕ ವೇದಿಕೆಗಳು ಸಾಕಷ್ಟು ಇವೆ. ರಚನಾತ್ಮಕವಾದಂಥ ಸಲಹೆಗಳನ್ನು ಕೊಡುವುದರ ಬಗ್ಗೆ ವಿಶೇಷವಾದ ಗಮನವನ್ನು ಕೊಡಬೇಕೆಂದು ಹೇಳಿ, ನನ್ನ ಅನಿಸಿಕೆ. ನಾವು ಇಲ್ಲಿ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಬಹುದು. ಪ್ರಸ್ತಾಪದ ವಿವರಗಳಿಗೆ ನಾನು ಹೋಗುವುದಕ್ಕೆ ಇಚ್ಛೆಪಡುವುದಿಲ್ಲ. ಇವತ್ತು ಮುಖ್ಯಮಂತ್ರಿಗಳ ಜನತಾ ದರ್ಶನದ ಸಂದರ್ಭದಲ್ಲಿ ಹೆಲಿಕ್ಯಾಪ್ಟರಿನಲ್ಲಿ ಹಾರಾಟ ಮಾಡಿದರು. ಅದರ ಜೊತೆಗೆ, ಅವರ ಪಕ್ಷದ ಪದಾಧಿಕಾರಿಗಳು ಹಾರಾಟ ಮಾಡಿದ್ದು, ಅದರ ಬಗ್ಗೆ ನಾನು ಹೇಳಲಿಕ್ಕೆ ಹೋಗುತ್ತಾ ಇಲ್ಲ. ವಿದ್ಯುತ್ ವೈಫಲ್ಯ ಪ್ರಕೃತಿಯಿಂದ ಆದಂಥ ಅಲ್ಲ. ಇದು ಇನಎಫಿಷಿಯಂಟ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಆದಂಥ ವಿದ್ಯುತ್ ವೈಫಲ್ಯ ಎನ್ನುವಂಥ ಆಪಾದನೆಯನ್ನು ಕೂಡ ಪುಷ್ಟೀಕರಿಸಲಿಕ್ಕೆ ನಾನು ಪ್ರಯತ್ನ ಮಾಡುತ್ತಾ ಇಲ್ಲ. ಅದೇರೀತಿ, ಭೂಸುಧಾರಣೆಗಳ ಏನು ತಿದ್ದುಪಡಿ ಬಂತು, ಅದರಲ್ಲಿ ಆದಂಥ ಲೋಪದೋಷಗಳಿಂದ ಇವತ್ತು, ಲಕ್ಷಾಂತರ ಜನ ಬಡವರಿಗೆ, ಅನೇಕ ಕೇಸುಗಳ ಇತ್ಯರ್ಥವಾಗದೆ, ಅದರಲ್ಲಿ ಕಾನೂನಿನ ತಿದ್ದುಪಡಿ ಆಗುವುದರ ಬಗ್ಗೆ ವಿಶೇಷವಾದಂಥ ಲಕ್ಷ್ಯವನ್ನು ಕೊಡದಂಥದ ನಮ್ಮ ರೆವಿನ್ಯೂ ಇಲಾಖೆ, ಅದರ ಬದಲಿಗೆ, ಯಾವುದೋ ಸಾಹುಕಾರರಿಗೆ ಲಾಭ ಮಾಡುವಂಥಾದ್ದರ ಬಗ್ಗೆ, ಪ್ರಯತ್ನ ಮಾಡಿದೆ ಎನ್ನುವಂತಹ ಆಪಾದನೆಯನ್ನು ಕೂಡ ಮಾಡಲಿಕ್ಕೆ ನಾನು ಪ್ರಯತ್ನಪಡುತ್ತೇನೆ. ನಮ್ಮ ಉನ್ನತ ಶಿಕ್ಷಣ ಮಂತ್ರಿಗಳ ಖಾತೆಯಿಂದ, ಉನ್ನತ ಶಿಕ್ಷಣದ ಬಗ್ಗೆ ವಿಶೇಷ ಗಮನವನ್ನು ಹರಿಸುವುದರ ಬದಲಿಗೆ ಖಾಸಗಿ, ವಿದ್ಯಾಸಂಸ್ಥೆಗಳು, ಮೆಡಿಕಲ್, ಇಂಜಿನಿಯರಿಂಗ್ ಸೀಟುಗಳ ಹಗರಣದಲ್ಲಿ ಕೋಟ್ಯಾಂತರ ರೂಪಾಯಿಗಳ ಲಾಭವನ್ನು ಮಾಡಿದ್ದು, ಇದರಲ್ಲಿಯೂ ಸರ್ಕಾರ ವಿಫಲವಾಗಿದೆ ಎನ್ನುವಂಥ ದೂರನ್ನು ಕೊಡುವುದಕ್ಕೆ ಇಚ್ಛೆಪಡುತ್ತಾ ಇಲ್ಲ. ಕ್ರಾಂತಿಕಾರಿಯಾದಂಥ ಪಂಚಾಯತ್ ರಾಜ್ ಮಸೂದೆ, ಏನು ಬಂತು, ಇದು ಹೊಸದಾಗಿ ಬಂತು, ಇದರಲ್ಲಿ ಸಾಕಷ್ಟು ಲೋಪದೋಷಗಳು ಇವೆ. ಎಲ್ಲಿಯವರೆಗೆ ಎಂದರೆ, ಮೊನ್ನೆ ಕೂಡ ಅದರ ಬಗ್ಗೆ ವಿವರ ಆಯಿತು. ಹರಿಜನ ಗಿರಿಜನರಿಗೆ ಒಂದು ರಿಸರ್ವೇಷನ್ ಏನು ಕೊಟ್ಟಿದೆ, ಅದನ್ನು ಅನುಷ್ಠಾನಕ್ಕೆ ತರದಿದ್ದಂತಹ ಪರಿಸ್ಥಿತಿ ಕೂಡ ನಿರ್ಮಾಣವಾದಾಗ, ಎಂತಹ ಲೋಪದೋಷಗಳನ್ನು ತಿದ್ದುವುದರ ಬಗ್ಗೆ ಕೂಡ, ಎಕ್ಸಪರ್ಟ್ ಕಮಿಟಿಯ ವರದಿ ಇನ್ನೂ ಬಂದಿಲ್ಲ, ಇದರಿಂದ ಸಾಕಷ್ಟು ತೊಂದರೆಯಾಗುತ್ತಾ ಇದೆ ಎನ್ನುವಂತಹ ವಿಚಾರವನ್ನು ಕೂಡ ವಿಶೇಷವಾಗಿ ಪ್ರಸ್ತಾಪ ಮಾಡಲಿಕ್ಕೆ ನನಗೆ ಸಮಯ ಕೂಡ ಇಲ್ಲ. ಇದಲ್ಲದೆ

ಮಾನ್ಯ ಹಣಕಾಸಿನ ಮಂತ್ರಿಗಳು ಇವತ್ತೇನು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ. 10,800 ಕೋಟಿ ರೂಪಾಯಿಗಳ ಬಜೆಟನ್ನು ಮಂಡಿಸಿದಂಥ ಸಂದರ್ಭದಲ್ಲಿ, ಯೋಜನಾ ವೆಚ್ಚವಾದಂಥ ಸುಮಾರು 3,700 ಕೋಟಿ ರೂಪಾಯಿಗಳಲ್ಲಿ ಎಷ್ಟು ಖರ್ಚಾಯಿತು, ಎನ್ನುವುದರ ಬಗ್ಗೆ ಮತ್ತು ಎಷ್ಟು ಖರ್ಚು ಮಾಡಲಿಕ್ಕಾಗಿದೆ ಎನ್ನುವುದರ ಬಗ್ಗೆ ಕೂಡ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವಿಲ್ಲ ಎನ್ನುವುದರ ಬಗ್ಗೆ ತಮ್ಮ ಗಮನವನ್ನು ಸೆಳೆಯಲಿಕ್ಕೆ ಇಚ್ಛಿಪಡುತ್ತೇನೆ. ಒಂದು ಲಕ್ಷ ಉದ್ಯೋಗವನ್ನು ಕೊಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲ ಹೇಳಿದ್ದು, ಈಗ ಎಷ್ಟುಲಕ್ಷ, ಎಷ್ಟು ಸಾವಿರ ಉದ್ಯೋಗ ನಿರ್ಮಾಣ ಮಾಡುವುದರ ಬಗ್ಗೆ ಪ್ರಾಮಾಣಿಕ ಪ್ರಯತ್ನ ಈ ಸರ್ಕಾರದಿಂದ ಆಗಿದೆ ಎನ್ನುವುದರ ಬಗ್ಗೆ ನನಗೆ ಪ್ರಸ್ತಾಪ ಮಾಡಲಿಕ್ಕೆ ಇತ್ತು. ಅದೇರೀತಿ ಇವತ್ತು ಮಾನ್ಯ ಗೃಹಮಂತ್ರಿಗಳು ಈಗತಾನೆ ಇಲ್ಲಿಂದ ನಿರ್ಗಮಿಸಿದ್ದಾರೆ. ಅದರ ಇಲಾಖೆಯ ಐ.ಜೆ.ಪಿ. ಯವರೇ ಒಂದು ವರ್ಷದ ಕೊಲೆ ದರೋಡೆಗಳ ಅಂಕಿಸಂಖ್ಯೆಗಳನ್ನು ಕೊಟ್ಟು, ಕಳೆದ ವರ್ಷ ಹೆಚ್ಚಾಗಿದೆ ಎನ್ನುವಂಥ ವಿವರಣೆಗಳನ್ನು ನೀಡಿದಾಗ್ಯೂ ಕೂಡ ಈ ಇಲಾಖೆಗೆ ಒಂದು ಕಾಯಕಲ್ಪವನ್ನು ಕಲ್ಪಿಸಬೇಕು, ತೀರಾ ಅನಾಥ ಬಡವರ ಮೇಲೆ ಹಾಕುವಂಥ ಸಾವಿರಾರು, ಲಕ್ಷಾಂತರ ಸುಳ್ಳು ಕೇಸುಗಳನ್ನು ನಿಲ್ಲಿಸುವುದರ ಬಗ್ಗೆ ಏನು ಕ್ರಮವನ್ನು ಕೈಗೊಳ್ಳುತ್ತಾರೆ ಎನ್ನುವ ಬಗ್ಗೆ ಕೊಂಚ ಕೂಡ ಸಲಹೆ ಈ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ನಗರಾಭಿವೃದ್ಧಿ ಮಂತ್ರಿಗಳಿಂದ, ನಗರದಲ್ಲಿ ನೀರನ್ನು, ಕುಡಿಯುವ ನೀರನ್ನು ಕೊಡುವುದರ ಬಗ್ಗೆ ಸಾಮಾನ್ಯ ರಸ್ತೆಗಳ ವ್ಯವಸ್ಥೆ ಬಗ್ಗೆ, ಏನು ಮಾಡುತ್ತಾರೆ ಎನ್ನುವುದರ ಬಗ್ಗೆ ಪ್ರಹಸನದ ರೀತಿಯಾದ ರಾಜ್ಯಪಾಲರ ಭಾಷಣ ತಯಾರಾಗಿದೆಯೇ ಹೊರತು, ಪ್ರಾಮಾಣಿಕವಾದ ಪ್ರಯತ್ನ ಅದರಲ್ಲಿ ಕಾಣುತ್ತಾ ಇಲ್ಲ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಕಡೆಯಿಂದ ಇವತ್ತು ಕೋರ್ಟಗಳಲ್ಲಿ ಬೇಕಾಗಿವೆ. ಸುಮಾರು 60 ಕೋರ್ಟುಗಳನ್ನು ಕೊಡಬಹುದೆಂದು ಹೈಕೋರ್ಟು ಹೇಳಿದರೂ ಕೂಡ, ಇವತ್ತು 30 ಕೋರ್ಟಗಳನ್ನು ಕೊಡುವಂಥ ಸ್ಥಿತಿಯಲ್ಲಿ ಸರ್ಕಾರ ಇಲ್ಲ, ಎನ್ನುವಂಥಾದ್ದು. ಇದರಿಂದ ಪ್ರಾಮಾಣಿಕವಾಗಿ ಜನರಿಗೆ, ಏನು ಸಿಗಬೇಕು ಅದನ್ನು ಕೊಡುವಂಥ ಪರಿಸ್ಥಿತಿಯಲ್ಲಿ ಇವತ್ತು ಸರ್ಕಾರ ಇಲ್ಲ ಎನ್ನುವುದರ ಬಗ್ಗೆ ಕೂಡ ಇದರಲ್ಲಿ ಪ್ರಸ್ತಾಪ ಇಲ್ಲ. ಗಣಿ ಇಲಾಖೆಯ ವತಿಯಿಂದ, ಇವತ್ತು ಗ್ರಾನೈಟ್ ಹಗರಣದಿಂದ, ಸ್ವತಃ ವಿಧಾನ ಸಭೆಯ ಸದಸ್ಯರಿಗೆ, ಅಂಗೈಯಲ್ಲಿ ನೋಡಿದಷ್ಟು ಸ್ಪಷ್ಟವಾಗಿ ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಲೂಟಿಯಾಗಿದೆ ಎಂದು ವಿಧಾನ ಸಭೆಯ, ವಿಧಾನಪರಿಷತ್ತಿನ ಸದಸ್ಯರು, ಇಲ್ಲಿ ಅರಣ್ಯರೋಧನ ಮಾಡಿದರೂ ಕೂಡ, ಅದರ ಬಗ್ಗೆ ಸರಿಯಾದಂಥ ಕ್ರಮ ಆಗಲಿಲ್ಲವೆನ್ನುವುದರ ಬಗ್ಗೆ, ಇದರಲ್ಲಿ ಏನು ಪ್ರಸ್ತಾಪ ಇಲ್ಲ.

ಇವತ್ತು ಸಮುದ್ರಕೊರೆತ ವಿಭಾಗ, ಸಮುದ್ರ ಕೊರೆತ ಅಂದರೆ, ಸರ್ಕಾರದ ಹಣ ಕೂಡ ಕೊರೆದು ಹೋಗುತ್ತಿದೆಯೇ ಹೊರತು ಸಮುದ್ರ ಕೊರೆತವನ್ನು ನಿಲ್ಲಿಸುವುದರಲ್ಲಿ ಯಾವುದೇ ರೀತಿಯಾದ ಪ್ರಾಮಾಣಿಕ ಪ್ರಯತ್ನ ಇಲ್ಲ. ಸಣ್ಣ ನೀರಾವರಿಗಳನ್ನು ಒದಗಿಸುವುದರ ಬಗ್ಗೆ, ಅನೇಕ ಮಂತ್ರಿಗಳು, ಆಳುವ ಪಕ್ಷದ ಸದಸ್ಯರು, ಇದರಲ್ಲಿ ಕೋಟ್ಯಾಂತರ ರೂಪಾಯಿ ಹಗರಣ ಆಗುತ್ತಾ ಇದೆ. ಆ ಪೀಸ್ ಕಾಂಟ್ರಾಕ್ಟ್ ಕೊಡುವುದನ್ನು ನಿಲ್ಲಿಸುತ್ತೇವೆಂದು ಬರೀ ಭಾಷಣ ಮಾಡಿದರೇ

ಹೊರತು, ಪುನಃ ಆ ಪೀಸ್ ಕಾಂಟ್ರಾಕ್ಟ್ ಕೊಡುವ ಕೆಲಸವನ್ನು ಎಲ್ಲಾ ಕಡೆಗಳಲ್ಲಿ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಸಕ್ಕರೆಗೆ ಒಂದು ವಿಶೇಷ ಮಂತ್ರಿ ಖಾತೆಯನ್ನು ತೆರೆದರೂ ಕೂಡ, ಇವತ್ತು ಏನಾದರೂ ಪುಡಿಕಾಸು ಮಾಡುತ್ತಾರೆಂದರೆ ಏನೂ ಆಗಲಿಲ್ಲ. ರೈತರು ಬೆಳೆದಂಥ ಕಬ್ಬನ್ನು ಬೆಂಕಿಗೆ ಹಾಕಲಿಕ್ಕೆ ನಿಮ್ಮನ್ನು ಕರೆಯುವಂಥ ಒಂದು ಪರಿಸ್ಥಿತಿಗ ಬಂದಿದ್ದಾರೆ. ಸಕ್ಕರೆ ಇವತ್ತು ವಿಶೇಷವಾದಂಥ ಖಾತೆಯನ್ನು ಕೊಟ್ಟರೂ ಕೂಡ, ಇದರ ಬಗ್ಗೆ ಏನು ಮಾಡಬೇಕು, ಯಾವರೀತಿ ಯಾಗಿ ಮಾಡಬೇಕು ಅಥವಾ ಹೆಚ್ಚು ಬೆಳೆದರೆ, ಅದನ್ನು ಕಡಿಮೆ ಮಾಡಲಿಕ್ಕೆ ಏನು ಮಾಡಬೇಕು, ಅಥವಾ ಅವರಿಗೆ ಪರ್ಯಾಯವಾಗಿ ಬೇರೆ ಯಾವುದಾದರೂ ಬೆಳೆಯನ್ನು ಬೆಳೆಯತಕ್ಕ ವ್ಯವಸ್ಥೆ ಮಾಡುವಂಥ ಪ್ರಾಮಾಣಿಕ ಪ್ರಯತ್ನ ಈ ಸರ್ಕಾರದಿಂದ ಆಗದೇ, ರೈತ ಕಂಗಾಲಾಗಿದ್ದಾನೆ ಎನ್ನುವಂಥಾದ್ದನ್ನು ಕೂಡ ತಮ್ಮ ಮುಂದೆ ಹೇಳಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ಕೃಷ್ಣಾ ನೀರಾವರಿ ಯೋಜನೆ ಇರಬಹುದು, ಕಾವೇರಿ ಯೋಜನೆ ಇರಬಹುದು, ಅನೇಕ ಯೋಜನೆಗಳು ಇವೆ. ಕೃಷ್ಣಾ ಯೋಜನೆಯಲ್ಲಿ ಒಂಮ ಸಾವಿರ ಕೋಟಿ ಎನ್ನುವಂಥ ಶಬ್ದಕ್ಕೆ ನಮ್ಮ ವಿಧಾನ ಸಭೆಯಲ್ಲಿ ಅರ್ಥವೇ ಇಲ್ಲವೆನ್ನುವಂಥ ಮಾತನ್ನು ತಮ್ಮ ಮುಂದೆ ಹೇಳಲಿಕ್ಕೆ ನನಗೆ ಬಹಳ ದುಃಖವಾಗುತ್ತದೆ. ಅದೇ ರೀತಿ ಆರೋಗ್ಯ ಇಲಾಖೆಯಿಂದ ಕೂಡ ಏನು ಕಳೆದಬಾರಿ ರಾಜ್ಯಪಾಲರ ಭಾಷಣದಿಂದ ಒಂದು ಉಲ್ಲೇಖ ಆಯಿತು, ಅದರಲ್ಲಿ ಏನೂ ಕೂಡ ಇಂಪ್ಲಿಮೆಂಟ್ ಆಗಲಿಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗುತ್ತದೆ. ಇವೆಲ್ಲಾ ದೂರನ್ನು ತಾವು ಬಹುಶಃ ಅವಕಾಶ ಕೊಟ್ಟರೆ, ಸನ್ಮಾನ್ಯ ವಾಟಾಳ್ ನಾಗರಾಜರ ಮಾರ್ಗದರ್ಶನದಲ್ಲಿ, ತಾಸುಗಟ್ಟಲೆ ಹೇಳಬಹುದು. ನಾಳೆ ಬೆಳಿಗ್ಗೆಯವರೆಗೆ ನಾವು ಇಲ್ಲಿ ಕುಳಿತುಕೊಳ್ಳಲು ಇಚ್ಛೆಇದ್ದರೆ ಹೇಳಬಹುದು.

5.10 ಪಿ.ಎಂ

ಆದರೆ ಇವತ್ತು ಮುಖ್ಯವಾಗಿ ತಮ್ಮ ಮುಖಾಂತರ ಈ ಸರ್ಕಾರಕ್ಕೆ ಮತ್ತು ತಮ್ಮೆಲ್ಲಾ ಸದಸ್ಯರಿಗೆ ನಾನು ತಿಳಿಸುವುದಕ್ಕೆ ಇಚ್ಛೆ ಪಡುವುದು ಏನೆಂದರೆ ಈ ರಾಜ್ಯಪಾಲರ ಭಾಷಣಕ್ಕೆ ಏನಾದರೂ ಘನತೆ ಗೌರವ ಇದೆಯೇ ಅಥವಾ ಈ ಪವಿತ್ರವಾದ ವಿಧಾನಸಭೆಯಲ್ಲಿ ನಾವೇನು ಆಡಿದಂತಹ ಮಾತುಗಳು ಜನತೆಗೆ ಕೊಟ್ಟಂತಹ ಆಶ್ವಾಸನೆಗಳು ಅದನ್ನು ಈಡೇರಿಸಬೇಕು ಎನ್ನುವಂತಹ ಒಂದು ಪ್ರಾಮಾಣಿಕ ಕಳಕಳಿ ನಮ್ಮ ಮುಂದೆ ಇದೆಯೇ? ನಾಲ್ಕೂವರೆ ಕೋಟಿ ಜನ ಆರಿಸಿ ಕಳುಹಿಸಿದಂತಹ ಜನರಿಗೆ ನಾವು ಇವತ್ತು ಸುಳ್ಳು ಆಶ್ವಾಸನೆಗಳನ್ನು ಸುಳ್ಳು ಅಂಕಿಅಂಶಗಳನ್ನು ಕೊಟ್ಟು ಶಭಾಶಗಿರಿ ಪಡೆಯುವುದು ಇಷ್ಟು ಮಾತ್ರ ಆಗುತ್ತಿದೆ. ಇದರ ಬಗ್ಗೆ ನಾವು ಸ್ವಲ್ಪ ಚಿಂತನೆ ಮಾಡುವಂತಹ ಅವಶ್ಯಕತೆ ಇಲ್ಲವೇ? ಈ ಬಜೆಟ್‌ನ ಪಾವಿತ್ರತೆ ಏನು? ಇಷ್ಟು ಆಗಿದೆ ಇದರಿಂದ ಏನಾದರೂ ಕೆಲಸ ಆಗಿದೆಯೇ ಎನ್ನುವ ಬಗ್ಗೆ ನಮಗೆ ಏನಾದರೂ ಲಕ್ಷ್ಯ ಇದೆಯೇ? ಕೃಷ್ಣಾ ಯೋಜನೆಗೆ ಒಂದು ಸಾವಿರ ಕೋಟಿ ಇರಬಹುದು, ಆರೋಗ್ಯ ಯೋಜನೆಗಳಿಗೆ ಒಂದು ನೂರು ಕೋಟಿ ರೂಪಾಯಿಗಳು ಇರಬಹುದು ಒಂದು ಲಕ್ಷ ಜನರಿಗೆ ಉದ್ಯೋಗ ಕೊಡುವಂತಹ ವಿಚಾರ ಇರಬಹುದು, ಅನೇಕ ಉದಾಹರಣೆಗಳನ್ನು ನಾವು ಇದರಲ್ಲಿ ಉಲ್ಲೇಖ ಮಾಡಬಹುದು. ಆದರೆ ಇದು ಯಾವುದೂ

ಈಡೇರದೆ ಇದ್ದಂತಹ ಸಂದರ್ಭದಲ್ಲಿ ಇದು ಏನಾದರೂ ಆಶ್ವಾಸನೆಗಳ ಸಮಿತಿಗೆ ಹೋಗುತ್ತದೆಯೇ? ಇವತ್ತು ನಾವು 87ನೇ ಇಸವಿಯದ್ದು 77ನೇ ಇಸವಿಯದ್ದು ವಿಚಾರಣೆ ಮಾಡುತ್ತಾ ಕುಳಿತುಕೊಂಡಿದ್ದೇನೆ. ಇದರಿಂದ ಏನು ಪ್ರಯೋಜನ? ಆದರೆ ನಾವು ಪ್ರಾಮಾಣಿಕವಾಗಿ ಇದರ ಬಗ್ಗೆ ಈ ಸದನಕ್ಕೆ ನಾವು ಬಂದವರು ಹೇಳಿದಂತಹ ವಿಚಾರವನ್ನು ಶ್ರೀ ಸಾಮಾನ್ಯನಿಗೆ ತಲುಪಿಸತಕ್ಕಂಥ ಪ್ರಯತ್ನ ಆಗಿದೆಯೇ? ಕಳೆದ ಭಾರಿಯೂ ಕೂಡ ನಾವು ಇದೇ ವಿಷಯವನ್ನು ಪ್ರಸ್ತಾಪ ಮಾಡಿದೆವು. ಇಲ್ಲಿ ಯಾರು ಮುಖ್ಯಮಂತ್ರಿಗಳಾಗಿದ್ದಾರೆ ಆ ಕಡೆ ಯಾರು ಕುಳಿತಿದ್ದಾರೆ ಈ ಕಡೆ ಯಾರು ಕುಳಿತಿದ್ದಾರೆ ಎನ್ನುವಂತಹ ವಿಷಯ ಪ್ರಾಮುಖ್ಯ ಅಲ್ಲ. ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಶ್ರೀಸಾಮಾನ್ಯನಿಗೆ ಆರೋಗ್ಯ ಶಿಕ್ಷಣ ಇದರ ಕನಿಷ್ಟ ಸೌಲಭ್ಯಗಳು ಸಿಕ್ಕುತ್ತದೆಯೇ ಎನ್ನುವುದನ್ನು ಅತ್ಯಂತ ಪ್ರಾಮುಖ್ಯವಾದುದು, ಹಿಂದಿನವರು ಮಾಡಿದರು ನಾವು ಮಾಡುತ್ತಿದ್ದೇವೆ, ನೀವು ಅದೇ ತಪ್ಪು ಮಾಡಿದಿರಿ ನಾವು ಅದೇ ತಪ್ಪು ಮಾಡುತ್ತಿದ್ದೇವೆ ಎಂದು ಹೇಳುವಂತಹ ಮಾತುಗಳು ಏನು ಎಕ್ಸಚೇಂಜ್ ಆಗುತ್ತದೆ ಅದರಿಂದ ಸರ್ಕಾರ ಇವತ್ತು ನಡೆಯಲಿಕ್ಕೆ ಸಾಧ್ಯವಿಲ್ಲ. ಇವತ್ತು ಅನೇಕ ಮಂತ್ರಿಗಳು ಆಳುವ ಪಕ್ಷದ ಸದಸ್ಯರೂ ಕೂಡ ಹೇಳಿದರು ಕೋಟಿಗಟ್ಟಲೆ ಹಣ ಸೋರಿ ಹೋಯಿತು ಒಂದು ಇದರ ಬಗ್ಗೆ ನಮ್ಮ ಪ್ರಾಮಾಣಿಕ ಪ್ರಯತ್ನ ಏನು ನಡೆದಿದೆ? ಶಾಸನ ಸಭೆ ಅಂದರೆ ಸರಿಯಾದಂತಹ ಶಾಸನವನ್ನು ರಚನೆ ಮಾಡಿ ಇದನ್ನು ತಡೆಗಟ್ಟುವಂತಹ ಕೆಲಸ ಮಾಡಬೇಕೆಂದು ನಾನು ಪದೇ ಪದೇ ಹೇಳುತ್ತಿದ್ದೇನೆ. ಅಧಿಕಾರಿಗಳ ಸಲುವಾಗಿ ಈ ಸರ್ಕಾರ ಇದೆಯೇ ಅಥವಾ ಅವರನ್ನು ಸಾಕುವುದಕ್ಕೆ ಈ ಸರ್ಕಾರ ಇದೆಯೇ ಅಥವಾ ನಾಲ್ಕುಕೋಟಿ ಜನರಿಗೆ ಈ ಸರ್ಕಾರ ಇದೆಯೇ ಎನ್ನುವಂತಹ ಅನುಮಾನವನ್ನು ಹುಟ್ಟಿಸುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಏನಿದ್ದರೂ ಕೂಡ ಅದು ಮಂತ್ರಿಗಳು ಅಪೇಕ್ಷಿಪಟ್ಟರೂ ಕೂಡ 60 ಸಾವಿರ ನೌಕರರು ಇರುವಂತಹ ಒಂದು ಸಂಸ್ಥೆಯಲ್ಲಿ 70 ಸಾವಿರ ಕೇಸಗಳು, ಕಳೆದ ವರ್ಷದ ಲಾಸ್ 105 ಕೋಟಿರೂಪಾಯಿಗಳು ಆದರೆ ಈ ವರ್ಷ ಆ ಲಾಸ್ ಇನ್ನೂ ಸ್ವಲ್ಪ ಹೆಚ್ಚು. ಕಳೆದ ವರ್ಷ 17 ಪರ್ಸೆಂಟ್ ಇದ್ದ ಟ್ಯಾಕ್ಸ್‌ನ್ನು 13 ಪರ್ಸೆಂಟಿಗೆ ಇಳಿಸಿದರೂ ಕೂಡ ಮತ್ತೂ ನಷ್ಟದಲ್ಲಿ ಹೋಗುತ್ತಿದೆ. ಇದನ್ನು ಸರಿಮಾಡಲಿಕ್ಕೆ ಬೇಕಾದಂತಹ ಒಂದು ವ್ಯವಸ್ಥೆ ನಮ್ಮ ಹತ್ತಿರ ಇಲ್ಲವೇ? ಇದರ ಬಗ್ಗೆ ನಾವು ಪ್ರಾಮಾಣಿಕವಾಗಿ ಚಿಂತನೆ ಮಾಡಲಿಕ್ಕೆ ಎಕ್ಸ್‌ಪರ್ಟ್ ಕಮಿಟಿಗಳನ್ನು ಮಾಡಿ ಅದನ್ನು ಇಂಪ್ಲಿಮೆಂಟ್ ಮಾಡುವ ಬಗ್ಗೆ ಶಾಸನ ಸಭೆ ಇರುವುದೇ ಅದಕ್ಕೆ. ತಪ್ಪು ಮಾಡಿದ್ದನ್ನು ತಿದ್ದಿಕೊಂಡು ಶ್ರೀಸಾಮಾನ್ಯನಿಗೆ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡೋಣ. ಇದರ ಜೊತೆಗೆ ನಾನು ಇನ್ನೊಂದು ಮಾತನ್ನು ಹೇಳವುದಾದರೆ ಅನೇಕ ಶಾಸನ ಸಭಾ ಸದಸ್ಯರು ವಿಷಯ ಸಮಿತಿಗಳಲ್ಲಿ ಇದ್ದಾರೆ. ಆರೋಗ್ಯ ಸಮಿತಿಯಲ್ಲಿ ಕೆಲವರು ಇದ್ದಾರೆ. ವಿದ್ಯುತ್ ಸಮಿತಿಯಲ್ಲಿ ಕೆಲವರು ಇದ್ದಾರೆ. ಇನ್ನೂ ಬೇರೆ ಬೇರೆ ಸಮಿತಿಗಳಲ್ಲಿ ಸದಸ್ಯರು ಇದ್ದಾರೆ. ಸಾಕಷ್ಟು ಜನ ಶಾಸನ ಸಭಾ ಸದಸ್ಯರು ಪ್ರಾಮಾಣಿಕವಾಗಿ ಕೆಲಸ ಮಾಡಿ ಇವತ್ತು ಏನು ಸುಧಾರಣೆ ಆಗಬೇಕು ಎನ್ನುವ ಬಗ್ಗೆ ಸರ್ಕಾರದಿಂದ ಮಾಹಿತಿಗಳನ್ನು ತರಿಸಿಕೊಂಡು ಪ್ರಾಮಾಣಿಕವಾದ ಕೆಲಸವನ್ನು ಮಾಡಿದ್ದಾರೆ ಎಂದು ಹೇಳಲು ನಾನು ಇಚ್ಛೆಪಡುತ್ತೇನೆ. ಕೆಲವೊಂದು ತಪ್ಪುಗಳು ಇರಬಹುದು ಕೆಲವು ಸಮಿತಿಗಳು ಸಾಕಷ್ಟು

ರೀತಿಯಲ್ಲಿ ಕೆಲಸ ಮಾಡದೇ ಇರಬಹುದು, ಅದರ ಪಾವಿತ್ರತೆ ಏನು? ಮಿನಿ ಲೆಜಿಸಲೇಚರ್. ಆದ್ದರಿಂದ ವಿಷಯವನ್ನು ಆಳವಾಗಿ ಅಧ್ಯಯನ ಮಾಡಿ ಇವತ್ತು ಆ ಸಮಿತಿ ಸರ್ಕಾರಕ್ಕೆ ಅನೇಕ ಶಿಫಾರಸ್ಸುಗಳನ್ನು ಮಾಡುತ್ತೇವೆ. ಅದನ್ನು ಬಹುಶಃ ಈ ಬಜೆಟ್ ಅನ್ನು ತಯಾರಿಸುವಂತಹ ಸಂದರ್ಭದಲ್ಲಿ ಗಣನೆಗೆ ತೆಗೆದುಕೊಂಡು ಈ ವರ್ಷ ಏನಾಗಬೇಕು ಮುಂದಿನ ವರ್ಷ, ಏನಾಗಬೇಕು ಎನ್ನುವುದರ ಬಗ್ಗೆ ಬಜೆಟ್‌ಗೆ ಸಂಬಂಧಪಟ್ಟ ಹಾಗೆ ಅದು ಏನೋ ರಿಚ್ಯುಯಲ್ ಆಗಿ ಕೆಳಗಿನಿಂದ ಒಂದು ರಿಪೋರ್ಟ್‌ಬರುತ್ತದೆ ಮೇಲಿಂದ ಒಂದು ರಿಪೋರ್ಟ್ ಬರುತ್ತದೆ ಆ ಕಾಮ ಇಲ್ಲಿ ಹಾಕುತ್ತಾನೆ ಆ ಫುಲ್‌ಸ್ಕಾಪ್ ಅಲ್ಲಿ ಹಾಕುತ್ತಾನೆ ನಾಲ್ಕಾಣೆ ಇದ್ದಲ್ಲಿ ನಾಲ್ಕೂವರೆ ಅಣೆ ಮಾಡುತ್ತಾನೆ ಈ ರೀತಿ 10 ರೂಪಾಯಿ ಇದ್ದಲ್ಲಿ 11 ರೂಪಾಯಿ ಮಾಡುತ್ತಾರೆ ಇದೇರೀತಿಯಾದ ಒಂದು ಬಜೆಟ್‌ಗಳು ತಯಾರಾಗುತ್ತಿವೆಯೇ ಹೊರತು ಪ್ರಾಮಾಣಿಕವಾಗಿ ಏನು ಆಗಬೇಕೆಂದು ಯೋಚನೆ ಮಾಡುವುದಿಲ್ಲ. ನಾವು ಕಳೆದು ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಟ್ಟೆವು. ಇವತ್ತು ಮೀನುಗಾರಿಕೆಯಿಂದ ಕೋಟ್ಯಾಂತರ ರೂಪಾಯಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಿಂದಲೇ ಸುಮಾರು 500-600 ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯ ಬರುತ್ತದೆ ಎಂದು ಹೇಳಿದ್ದೇವೆ. ಅದಕ್ಕೆ ಈ ವರ್ಷ ೧೫೦ ಕೋಟಿ ರೂಪಾಯಿಗಳಷ್ಟು ಆದರೂ ಬಜೆಟ್ ಪ್ರಾವಿಷನ್ ಮಾಡಿ ಹೇಳಿದ್ದೇವೆ. ಅದನ್ನು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಸನ್ಮಾನ್ಯ ಸಿದ್ದರಾಮಯ್ಯನವರು ಇವತ್ತು ಅದರ ತಯಾರಿಯಲ್ಲಿ ಇರಬಹುದು. ಅವರು 150 ಕೋಟಿ ರೂಪಾಯಿ ಕೊಡುತ್ತಾರೋ ಅಥವಾ ಕಳೆದ ವರ್ಷ ಇದ್ದದ್ದಕ್ಕೆ ಒಂದು ಕೋಟಿ ಜಾಸ್ತಿ ಮಾಡಿ ಒಟ್ಟು ಹದಿಮೂರೂವರೆ ಕೋಟಿ ರೂಪಾಯಿ ಮಾಡುತ್ತಾರೋ ಏನೋ ನನಗೆ ಗೊತ್ತಿಲ್ಲ. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಅಂದರೆ ಪ್ರಾಮಾಣಿಕವಾಗಿ ಬಜೆಟ್‌ನಲ್ಲಿ ಹೊಸ ಹೊಸ ಯೋಜನೆಗಳನ್ನು ಮಾಡುವಾಗ ಅದಕ್ಕೆ ಸಂಪನ್ಮೂಲಗಳನ್ನು ಕ್ರೋಢಿಕರಿಸಿಕೊಳ್ಳುವ ದಿಸೆಯಲ್ಲಿ ಕ್ರಮ ಕೈಗೊಳ್ಳಬೇಕು.ಇವತ್ತು ಸರ್ಕಾರಿ ಅಧಿಕಾರಿಗಳ ಬಗ್ಗೆ ಇರುವಂತಹ ಸರ್ವೀಸ್‌ರೂಲ್ಸ್ ಇರಬಹುದು ಮತ್ತೊಂದು ಇರಬಹುದು ಇನ್ನೊಂದು ಇರಬಹುದು ಇದು ಎಷ್ಟೋ ಕಾಲದಿಂದ ನಡೆದುಕೊಂಡು ಬಂದಿದೆ. ಅದು ಏನು ಇದೆ ಅದು ಅವರಿಗೆ ಲಾಭ ಮಾಡಿಕೊಡುವಂತಹ ವ್ಯವಸ್ಥೆ ಇದೆಯೇ ಹೊರತು ಅದರಲ್ಲಿ ಶ್ರೀಸಾಮಾನ್ಯನಿಗೆ ಲಾಭವನ್ನು ಮುಟ್ಟಿಸುವಂತಹ ವ್ಯವಸ್ಥೆ ಪ್ರಾಮಾಣಿಕ ಚಿಂತನೆ ಈ ಶಾಸನ ಸಭೆಯಲ್ಲಿ ನಡೆಯಬೇಕು. ಇದರ ಬಗ್ಗೆ ನಮ್ಮ ಸರ್ಕಾರದ ಧೋರಣೆ ಏನು ಎನ್ನುವುದರ ಬಗ್ಗೆ ನಾವು ಪ್ರಯತ್ನ ಮಾಡಬೇಕು, ಎಕ್ಸಪರ್ಟ್ ಕಮಿಟಿಗಳನ್ನು ಮಾಡಬೇಕು ಇದರ ಬಗ್ಗೆ ಯಾವ ರೀತಿಯಾದಂತಹ ಚಿಂತನೆ ಮಾಡಬೇಕು, ಯಾವುದೇ ತೊಂದರೆ ಇಲ್ಲದೆ ಬೆಂಗಳೂರಿನಿಂದ ಹೋದಂತಹ ಒಂದು ಸೌಲಭ್ಯ ಗ್ರಾಮಾಂತರ ಪ್ರದೇಶಕ್ಕೆ ಹೋಗಿ ಯಾವ ರೀತಿಯಲ್ಲಿ ಮುಟ್ಟುತ್ತದೆ ಎನ್ನುವುದನ್ನು ಮಾಡಬೇಕಾಗುತ್ತದೆ. ಆ ದಿಸೆಯಲ್ಲಿ ನಾವು ಪ್ರಯತ್ನ ಮಾಡಬೇಕು. ಅದೇ ರೀತಿ ಸರ್ವೀಸ್ ರೂಲ್ಸ್‌ನಲ್ಲಿ ಏನಿದೆ ಸಾಕಷ್ಟು ಬದಲಾವಣೆಗಳನ್ನು ಮಾಡಿ ಪರಿಣಾಮಕಾರಿಯಾಗಿ ಅನುಷ್ಠಾನ ಹೇಗೆ ಮಾಡುವುದು ಎನ್ನುವುದನ್ನು ನಾವು ಚಿಂತನೆ ಮಾಡಬೇಕಾಗಿದೆ. ಕಳೆದಸಾರಿಯೂ ಕೂಡ ನಾನು ಈ ಬಗ್ಗೆ ಹೇಳಿದ್ದೆನೋ ಏನೋ ನನಗೆ ನೆನಪು ಆಗುತ್ತಿಲ್ಲ. ನಮ್ಮ ಜಿಲ್ಲಾ ಮಂತ್ರಿಗಳು ಜಿಲ್ಲಾ ಕೆಡಿಪಿ ಮೀಟಿಂಗ್ ಮಾಡುವಂತಹ

ಸಂದರ್ಭದಲ್ಲಿ ಒಬ್ಬ ಡಿಸ್ಟ್ರಿಕ್ಟ್ ಸರ್ಜನ್ ಕಂಠಪೂರ್ತಿ ಕುಡಿದುಕೊಂಡು ಬಂದು ಡಿಸ್ಟ್ರಿಕ್ಟ್ ಮಂತ್ರಿಗಳ ಹತ್ತಿರ ಮಾತನಾಡುತ್ತಿದ್ದಾರೆ. ಅವರು ನಿಮ್ಮ ಜಿಲ್ಲೆಯಲ್ಲಿ ಆರೋಗ್ಯ ಕಾರ್ಯಕ್ರಮ ಏನು ನಡೆದಿದೆ ಎಂದು ಕೇಳಿದರೆ ಅವನು ಅದನ್ನು ಹೇಳುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಅವನು ಪರಮಾತ್ಮನ ಹತ್ತಿರ ಹೋಗಿದ್ದಾನೆ. ಆದರೆ ನಾನು ಈ ಮಾತನ್ನು ಬಹಳ ದುಃಖದಿಂದ ಹೇಳಬೇಕಾಗುತ್ತದೆ. ಇದರ ಬಗ್ಗೆ ಇದುವರೆಗೂ ಯಾವುದೇ ಒಂದು ಕ್ರಮ ತೆಗೆದುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣ ಆಗಲಿಲ್ಲ. ಅದೇ ರೀತಿ ಇವತ್ತು ನಮ್ಮ ಪೋಲೀಸ್ ವ್ಯವಸ್ಥೆ. ಭಟ್ಕಳ್ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡಿದರೆ ಅದು ಉಚಿತ ಆಗಲಿಕ್ಕೆ ಇಲ್ಲ. ಅಲ್ಲಿ ರಕ್ಷಣೆಗೆ ಹಾಕಿದಂತಹ ಪೋಲೀಸನವರು ಅವರು ಸ್ವತಃ ಪಾನಮತ್ತರಾಗಿ ಬಂದು ಧಾಳಿ ಮಾಡುವಾಗ ಪುನಃ ಯಾರೂ ಪೋಲೀಸನವರು ಕುಡಿದಿಲ್ಲ ಎಂದು ಹುಡುಕಿಕೊಂಡು ಹೋಗಿ ಆ ಪೋಲೀಸ್‌ನವರಿಗೆ ಕಂಪ್ಲೇಟ್ ಕೊಡುವಂತಹ ಕೆಲಸ ನಾವು ಮಾಡಬೇಕಾಗಿಯು. ಅದೇ ರೀತಿ ಇವತ್ತು ವಿದ್ಯುತ್ ಕಛೇರಿಗೆ ಹೋದರೆ ಅಲ್ಲಿ ಲೈನಮನಗಳು ಇರುವುದು ಒಂದು ತಾಲ್ಲೂಕಿಗೆ 7-8 ಜನ ಮಾತ್ರ. ಅವರಲ್ಲಿ 50 ಪರ್ಸೆಂಟ್ ಜನ ಎಲ್ಲಿ ಹೋಗಿದ್ದಾರೆ ಎಂದು ಅವರನ್ನು ಹುಡುಕಲಿಕ್ಕೆ ಯಾರನ್ನಾದರೂ ಕಳುಹಿಸಬೇಕು. ಅಂತಹ ಒಂದು ಪರಿಸ್ಥಿತಿ ನಿರ್ಮಾಣವಆಗಿದೆ. ಸರ್ಕಾರದಲ್ಲಿ ಕಾನೂನು ಇಲ್ಲವೇ? ಕಾಯ್ದೆ ಇಲ್ಲವೇ? ಕಾನೂನು ಇಲ್ಲದಿದ್ದರೆ ಸರಿಯಾದಂತಹ ಕಾನೂನನ್ನು ನಿರ್ಮಾಣ ಮಾಡುವುದಕ್ಕೆ ಆಗುವುದಿಲ್ಲವೇ? ನಾನು ಈಗಾಗಲೇ ಮಾನ್ಯ ಸಾರಿಗೆ ಮಂತ್ರಿಗಳ ಹತ್ತಿರ ಮಾತನಾಡಿದೆ. ಸಾರಿಗೆ ಇಲಾಖೆಯಲ್ಲಿ ಇರುವಂತಹ ನೌಕರರ ಸಂಖ್ಯೆ 60 ಸಾವಿರ ಇರಬಹುದು. ಇಷ್ಟು ಮಾತ್ರ ನನಗೆ ಗೊತ್ತಿರುವುದು. ಸುಮಾರು 60 ಸಾವಿರ ಸಂಖ್ಯೆ ಇರುವಂತಹ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಸುಮಾರು 70 ಸಾವಿರ ಕೇಸಗಳು ಇವೆ. ಈ ಎಲ್ಲಾ ಕೇಸಗಳು ಸಾಮಾನ್ಯವಾಗಿ ಕಂಡಕ್ಟರ್ಸ್ ಮತ್ತು ಡ್ರೈವರ್ಸ್ ಮೇಲೆ ಇರಬಹುದು. ಒಂದು ಕೇಸ್ ಒಂದು ಸಲ ಬಂದಾಗ ಅದನ್ನು ಮುಂದೆ ಹಾಕಲಿಕ್ಕೆ ಇಷ್ಟು ಎಂದು ಇದೆ. ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನನಗೆ ಕೊಟ್ಟಂತಹ ಅಲ್ಪ ಸಮಯದಲ್ಲಿ ನಾನು ಆರೋಗ್ಯ ಮತ್ತು ಶಿಕ್ಷಣ ಖಾತೆಯ ಬಗ್ಗೆ ಕೆಲವೊಂದು ವಿಚಾರಗಳನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಒಬ್ಬ ಸಾಮಾನ್ಯ ಬಡವನಿಗೆ ಒಂದು ಹೃದಯದ ಶಸ್ತ್ರಚಿಕಿತ್ಸೆ ಒಂದು ಕ್ಯಾನ್ಸರ್ ಖಾಯಿಲೆ ಕಿಡ್ನಿಯ ಖಾಯಿಲೆ ಬಂದಂತಹ ಸಂದರ್ಭದಲ್ಲಿ ಅವನು ಆ ಖಾಯಿಲೆಯನ್ನು ಗುಣಪಡಿಸಿಕೊಳ್ಳಲು ಖರ್ಚುಮಾಡಲು ಅವನ ಬಳಿ ಸಾಕಷ್ಟು ಹಣ ಇಲ್ಲ. ನನಗೆ ಸಂತೋಷವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಯೋಜನೆಯನ್ನು ಮಾಡುತ್ತೇವೆಂದು ಹೇಳಿದರು. ನೂರು ಕೋಟಿ ರೂಪಾಯಿಗಳಲ್ಲಿ ಒಂದು ಆರೋಗ್ಯ ನಿಧಿಯನ್ನು ಮಾಡುತ್ತೇವೆ ಇದರಿಂದ ಆ ಬಡವರಿಗೆ ಸಹಾಯ ಮಾಡುವ ಹಾಗೆ ಮಾಡುತ್ತೇನೆ ಎಂದು. ಅದು ಎಲ್ಲಿದೆ ಅಸ್ಥಿತ್ವದಲ್ಲಿ ? ಸರ್ಕಾರದ ಕಾಂಟ್ರಿಬ್ಯೂಷನ್ 10 ಕೋಟಿ ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಇವತ್ತು ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಹಾರಾಷ್ಟ್ರದಲ್ಲಿ ಒಬ್ಬ ಹಾರ್ಟ್ ಪೇಷೆಂಟ್ ಇದ್ದರೆ ಅವನಿಗೆ ಹಾರ್ಟವಾಲ್ವ್ ಸರ್ಜರಿ ಆಗಬೇಕಾದರೆ ಒಂದು ಎರಡು ಮೂರು ಆಸ್ಪತ್ರೆಗಳಲ್ಲಿ

ಉಚಿತವಾಗಿ ಮಾಡುವಂತಹ ವ್ಯವಸ್ಥೆ ಇದೆ. ವೆಸ್ಟಬೆಂಗಾಲ್‌ನಲ್ಲಿ ಆ ವ್ಯವಸ್ಥೆ ಇದೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಹಾರ್ಟವಾಲ್ವ ರೀಪ್ಲೇಸಮೆಂಟ್ ಏನು ಇದೆ ಇದನ್ನು ಉಚಿತವಾಗಿ ಮಾಡುವಂತಹ ಯಾವುದೇ ವ್ಯವಸ್ಥೆ ಇಲ್ಲ. ಸರ್ಕಾರದ ಆಸ್ಪತ್ರೆಗೆ ಹೋದರೂ ಕೂಡ ಸಾವಿರಾರು ರೂಪಾಯಿ ಮೂವತ್ತು ಸಾವಿರ ನಲವತ್ತು ಸಾವಿರ ಎರಡು ವಾಲ್ವ ರೀಪ್ಲೇಸಮೆಂಟ್ ಆದರೆ ಒಂದು ಲಕ್ಷದ ಇಪ್ಪತ್ತುಸಾವಿರ ರೂಪಾಯಿ ಇದನ್ನು ಕೊಟ್ಟು ಆ ರೋಗಿ ಆಪರೇಷನ್ ಮಾಡಿಸಬೇಕಾಗುತ್ತದೆ. ನಾನು ಹೇಳುತ್ತೇನೆ ಅದೇ ರೀತಿ ಒಬ್ಬ ಬಡವ "ಡಿ" ದರ್ಜೆಯ ಸರ್ಕಾರಿ ನೌಕರ ಅವರಿಗೆ ಒಂದು ಸಾರಿ ಅಷ್ಟು ಹಣವನ್ನು ಹೇಗೆ ತರಲು ಸಾಧ್ಯ ಇದೆ ಎಂದು ಕೇಳಿದರೆ ನೀವು ಉತ್ತರ ಹೇಳಬಹುದು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕೊಡುತ್ತೇವೆ ಎಂದು. ಪ್ರಧಾನಮಂತ್ರಿಗಳ ಪರಿಹಾರ ನಿಧಿಯಿಂದ ಕೊಡುತ್ತೇವೆಂದು. ಸ್ವಾಮಿ 10 ಜನ ಅಪ್ಲೈ ಮಾಡಿದರೆ ಒಬ್ಬರಿಗೋ ಇಬ್ಬರಿಗೋ ಸಿಗುತ್ತದೆ, ಅದೂ ಸಿಗುವುದು ಎಷ್ಟು? 5 ಸಾವಿರ ಅಥವಾ 10 ಸಾವಿರ ರೂಪಾಯಿ ಯಾರಿಗಾದರೂ ಸ್ವಲ್ಪ ಪ್ರಭಾವ ಇದ್ದರೆ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ 15 ಸಾವಿರ ರೂಪಾಯಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 5 ಸಾವಿರ ರೂಪಾಯಿ ಒಟ್ಟು 20 ಸಾವಿರ ರೂಪಾಯಿ ಉಳಿದ ಹಣಕ್ಕೆ ಅವನು ಎಲ್ಲಿಗೆ ಹೋಗಬೇಕು? ನಾನು ಅನೇಕ ಸಲ ಹೇಳಿದ್ದೇನೆ. ನಮ್ಮ ರಾಜ್ಯದಲ್ಲಿ ಬೆಂಗಳೂರಿನಲ್ಲಿ ಆದರೂ ಅಥವಾ ರಾಜ್ಯದ 2-3 ಕಡೆ ಆದರೂ ಮಂಗಳೂರಿನಲ್ಲಿ ಮಾಡಲಿಕ್ಕೆ ಸಾಧ್ಯಇದೆ. ಬೆಂಗಳೂರಿನಲ್ಲಿ ಮಾಡುವುದಕ್ಕೆ ಸಾಧ್ಯ ಇದೆ ಪ್ರಯತ್ನ ಪಟ್ಟರೆ ಹುಬ್ಬಳ್ಳಿಯಲ್ಲಿಯೂ ಸಹ ಅದನ್ನು ಮಾಡುವುದಕ್ಕೆ ಸಾಧ್ಯ ಇದೆ. ಪುಕ್ಕಟೆಯಾಗಿ ಹೃದಯ ರೋಗದ ಶಸ್ತ್ರಚಿಕಿತ್ಸೆಯಾಗುವಂತಹ ವ್ಯವಸ್ಥೆ ಆಗಬೇಕು.

ಅದರಲ್ಲಿ ಬೇಕಾದರೆ ಬ್ಯಾಕಲಾಗ್ ಮಾಡಿ. ಬೇಕಾದರೆ ಅವನು ಕಾಯಲಿ. ಇವತ್ತು ನಮ್ಮ ಪಕ್ಷದ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಸತ್ಯಸಾಯಿಬಾಬಾ ಆಸ್ಪತ್ರೆಯಲ್ಲಿ ಉಚಿತವಾಗಿ ಒಂದು ದಿವಸಕ್ಕೆ ನಾಲ್ಕರಿಂದ 7 ಅಪರೇಷನ್ಸ ಮಾಡುತ್ತಿದ್ದಾರೆ. ನಮ್ಮ ರಾಜ್ಯದ ಜನರು ಹೋದರೂ ಅಲ್ಲಿ ಮಾಡುತ್ತಾರೆ. ಆದರೆ 3 ವರ್ಷ ನಾಲ್ಕು ವರ್ಷ ಕಾಯಬೇಕಾಗುತ್ತದೆ. ಒಬ್ಬ ತನ್ನ ಹೃದಯದ ವಾಲ್ವ ಸರಿ ಇಲ್ಲವೇ ಇದ್ದವ ಇದರಲ್ಲಿ ಹೋಗಿ ನನ್ನ ಹಾರ್ಟ್‌ನ್ನು ಅಪರೇಷನ್ ಮಾಡಿ ಒಂದು ಹೇಳಿ ಸುಳ್ಳು ಸರ್ಟಿಫಿಕೇಟನ್ನು ಹಾಜಲು ಮಾಡುವುದಿಲ್ಲ. ನಿಜವಾಗಿಯೂ ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಬಾಯಲ್ಲಿ ಬಾವಿ ಅಂತ ಒಂದು ಸುದ್ದಿ ಬರುತ್ತದೆ. ಕೆಲವು ಕಡೆಗಳಲ್ಲಿ ಬಾವಿ ತೋಡದೇ ಹಣ ತೆಗೆದುಕೊಳ್ಳುತ್ತಾರೆ. ಆದರೆ ಹೃದಯ ಶಸ್ತ್ರಚಿಕಿತ್ಸೆ ಮಾಡದೇ ಹಣ ತೆಗೆದುಕೊಳ್ಳುವಂತಹ ಕೆಲಸ ಮಾಡಲಿಕ್ಕೆ ಇಲ್ಲ. ಇದಕ್ಕೆ ಸಾಕಷ್ಟು ಕಾನೂನುಗಳನ್ನು ಮಾಡಿಕೊಂಡು ಕನಿಷ್ಟ ಒಂದು ಕೇಂದ್ರದಲ್ಲಿ ಆದರೂ ಬಡವನಿಗೆ ಹೃದಯ ಶಸ್ತ್ರಚಿಕಿತ್ಸೆ ಮಾಡುವಂತಹ ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡಬೇಕು ಎನ್ನುವಂತಹ ಮಾತನ್ನು ನಾನು ಹೇಳಲು ಇಚ್ಛೆಪಡುತ್ತೇನೆ. ಸಂಜಯಗಾಂಧಿ ಆಸ್ಪತ್ರೆಯ ಬಗ್ಗೆ ಇಲ್ಲಿ ಉಲ್ಲೇಖ ಆಯಿತು. ನಮ್ಮ ಬೆಂಗಳೂರಿನಲ್ಲಿ ಇರುವಂತಹ ಒಂದು ಆಸ್ಪತ್ರೆಯಲ್ಲಿ ಇಂತಹ ಒಂದು ಅವ್ಯವಸ್ಥೆಯಲ್ಲಿ ನಡೆಯುತ್ತಾ ಇದೆ. ಇಲ್ಲಿ 70 ರೋಗಿಗಳನ್ನು ನೋಡಲಿಕ್ಕೆ 30 ಜನ ಡಾಕ್ಟರ್ಸ್ ಇದ್ದಾರೆ. ನಮ್ಮ ಹಳ್ಳಿಗಳಲ್ಲಿ ಸುಮಾರು 20 ಕಡೆಗಳಲ್ಲಿ ಡಾಕ್ಟರ್ಸ್

ಇಲ್ಲ. ಎಲ್ಲಾ ಡಾಕ್ಟರ್ಸ್‌ಗೆ ಬೆಂಗಳೂರಿಗೆ ಟ್ರಾನ್ಸಫರ್ ಆಗಿಬಿಡುತ್ತದೆ. ಈ ಟ್ರಾನ್ಸಫರಗಳಿಗೆ ನಾವು ರಾಜಕೀಯ ವ್ಯಕ್ತಿಗಳು ಹೋಗಿ ಇನಫ್ಲೂಯನ್ಸ್ ಮಾಡುತ್ತೇವೆ. ಸ್ವಾಮೀ, ನಾವು ಇದನ್ನು ನಿಲ್ಲಿಸಬೇಕಾಗುತ್ತದೆ. ಇದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಿ ಹಳ್ಳಿಗಳಿಗೆ ಡಾಕ್ಟರ್ಸ್ ಹೋಗುವಂತಹ ವ್ಯವಸ್ಥೆ ಮಾಡಬೇಕಾಗುತ್ತದೆ. ಬಳ್ಳಾರಿ ಸರ್ಕಾರಿ ಆಸ್ಪತ್ರೆಯಲ್ಲಿ ನಾವು ಎಂ ಡಿ ಡಿಗ್ರಿಯನ್ನು ಕೊಡುತ್ತೇವೆ. ಅವನು ನಾಳೆ ಹಾರ್ಟ್ ಸ್ಪೆಷಲಿಸ್ಟ್ ಎಂದು ಬೋರ್ಡ್ ಹಾಕಿಕೊಳ್ಳುತ್ತಾನೆ. ನಾನು ಬಹಳ ದುಃಖದಿಂದ ಹೇಳಬೇಕಾಗುತ್ತದೆ. ಒಂದೇ ಒಂದು ಕೆಲಸವನ್ನು ಮಾಡುವಂತಹ ಇ.ಸಿ.ಜಿ. ಯಂತ್ರ ಬೆಲೆ 10 ಸಾವಿರ ರೂಪಾಯಿ, ಇಂಟೆನ್ಸೀವ್ ಕೇರ್ ಯುನಿಟ್‌ನಲ್ಲಿ ಇಟ್ಟು ಮತ್ತೊಂದು ಕಡೆ ಇಡುವಂತಹ ಆಧುನಿಕ ಯಂತ್ರಗಳ ಕಥೆ ಬಿಡಿ. ಸ್ವಾಮಿ ನಾನು ಒಬ್ಬ ಜನರಲ್ ಪ್ರಾಕ್ಟೀಷನರ್, ನನ್ನ ಹತ್ತಿರ ಎಕ್ಸರೇ ಯಂತ್ರ ಮತ್ತು ಒಂದು ಇ.ಸಿ.ಜಿ. ಯಂತ್ರ ಇದೆ. ಆದರೆ ಬಳ್ಳಾರಿ ಮೆಡಿಕಲ್ ಕಾಲೇಜನಲ್ಲಿ ಯಾರು ಎಂ ಡಿ ಡಿಗ್ರಿ ಕೊಡುತ್ತಾರೆ ಅಲ್ಲಿ ಒಂದು ಸಾಮಾನ್ಯ ಇ ಸಿ ಜಿ ಯಂತ್ರ ಇಲ್ಲ. ಅದೇ ಇವತ್ತು ತಾವು ಬೇರೆ ಖಾಸಗಿ ಆಸ್ಪತ್ರೆಗೆ ಹೋಗಿ ನೋಡಿ, ಅಲ್ಲಿ ಇರುವಂತಹ ಇಂಟೆನ್ಸೀವ್ ಕೇರ್ ಯೂನಿಟನಲ್ಲಿ ಅತ್ಯಂತ ಆಧುನಿಕವಾದಂತಹ ಶಸ್ತ್ರ ಚಿಕಿತ್ಸೆ ಯಂತ್ರಗಳು ಹೃದಯಕ್ಕೆ ಬೇಕಾಗುವಂತಹ ಕೆಲಸ ಮಾಡುವಂತಹ ಯಂತ್ರಗಳನ್ನು ನೋಡಬಹುದು. ನಮಗೆ ಖಾಯಿಲೆ ಬಂದರೆ ಮಂತ್ರಿಗಳಿಗೆ ಖಾಯಿಲೇ ಬಂದರೆ ಅತ್ಯಂತ ಆಧುನಿಕ ಸೌಲಭ್ಯಗಳು ಇರುವಂತಹ ಆಸ್ಪತ್ರೆಗಳಿಗೆ ಹೋಗುತ್ತೇವೆ. ಬಡವರು ಎಲ್ಲಿಗೆ ಹೋಗುತ್ತಾರೆ? ಹುಬ್ಬಳ್ಳಿಯ ಆಸ್ಪತ್ರೆಯನ್ನು ಸ್ವಾಯತ್ತತೆ ಆಸ್ಪತ್ರೆ ಎಂದು ಮಾಡಿದ್ದಾರೆ. ಸ್ವಾಮಿ ಅಲ್ಲಿ ಒಂದು ಹೆಣ್ಣು ಮಗು ಹೆರಿಗೆಗೆ ಬಂದರೆ ನಾನು ಒಂದೊಂದು ಉದಾಹರಣೆ ಮಾತ್ರ ಕೊಡುತ್ತೇನೆ. ನೂರಾರು ಕೊಡುವುದಿಲ್ಲ. ಇವತ್ತು ಡೆಲಿವರಿ ಆದ ನಂತರದಲ್ಲಿ ರಕ್ತಸ್ರಾವವನ್ನು ನಿಲ್ಲಿಸಲಿಕ್ಕೆ ಬೇಕಾಗುವಂತಹ ಮೆತರ್ಜಿನ್ ಇಂಜಕ್ಷನ್ ಸಾಮಾನ್ಯವಾಗಿ ಅದರ ಬೆಲೆ ಒಂದೂವರೆ ಎರಡೂವರೆ ರೂಪಾಯಿಗಳು ಆ ಇಂಜಕ್ಷನ್ ಇಲ್ಲ. ಹೆರಿಗೆ ಆದ ಮೇಲೆ ಡಾಕ್ಟರ್ ಚೀಟಿ ಬರೆದು ಕೊಡುತ್ತಾರೆ. ಅವನು ಪೇಟೆಗೆ ಹೋಗಿ ಆ ಇಂಜಕ್ಷನ್ ತೆಗೆದುಕೊಂಡು ಬರುವುದೊಳಗೆ ಆ ಹೆಣ್ಣು ಮಗಳು ಸ್ವರ್ಗಕ್ಕೆ ಹೋಗಿ ಆಗಿರುತ್ತದೆ. ಅದೇ ರೀತಿಯಲ್ಲಿ ಡೆಲಿವರಿ ಆಗುವಂತಹ ಸಂದರ್ಭದಲ್ಲಿ ಅಲ್ಲಿ ಗರ್ಭಕೋಶಕ್ಕೆ ಹಾನಿ ಆಗುತ್ತದೆಯೇ ಇಲ್ಲವೇ ಎಂದು ನಾವು ಏನು ಭವಿಷ್ಯ ಕೇಳುವುದೇ? ಆದ ನಂತರದಲ್ಲಿ ಮಾಡಬೇಕಗುತ್ತದೆ ನಮ್ಮ ಹತ್ತಿರ ಮೆತರ್ಜನ ಇಂಜಕ್ಷನ್ ಇರಲೇಬೇಕು. ಇದು ಯಾವ ಆರ್ಡಿನರಿ ಜನರಲ್ ಪ್ರಾಕ್ಟೀಷನರ್ ಹತ್ತಿರ ಸಹ ಇರುತ್ತದೆ. ಆದರೆ ಹುಬ್ಬಳ್ಳಿಯಂತಹ ಆಸ್ಪತ್ರೆಯಲ್ಲಿ ಇಲ್ಲ ಅಂದ ಮೇಲೆ ನನಗೆ ಬಹಳ ದುಃಖ ಆಯಿತು. ನಾನು ಆ ಆಸ್ಪತ್ರೆಯ ಡೆಲಿವರಿ ವಿಭಾಗಕ್ಕೆ ಹೋಗಿ ನೋಡಿದರೆ ಗ್ಲಾಸ ಇಲ್ಲ. ಸಾರ್, ಮೆತರ್ಜಿನ್ ಇಂಜಕ್ಷನ್ ಇಲ್ಲ. ಇಂತಹ ಒಂದು ದುಸ್ಥಿತಿಯಲ್ಲಿ ಒಂದು ಸ್ವಾಯತ್ತ ಸಂಸ್ಥೆ ಇಲ್ಲಿ ಓ.ಬಿ.ಜಿನಲ್ಲಿ ಎಂ ಎಸ್ ಪದವಿಯನ್ನು ಕೊಡುವಂತಹ ವ್ಯವಸ್ಥೆ ಇದೆ. ಇಂತಹ ಸೌಲಭ್ಯಗಳನ್ನು ಇಲ್ಲಿ ಒದಗಿಸುವುದಕ್ಕೆ ಆಗುವುದಿಲ್ಲ ಇದರ ಬಗ್ಗೆ ಯಾರೂ ಕಾಳಜಿ ಮಾಡುವುದಕ್ಕೆ ಆಗುವುದಿಲ್ಲ. ಇಂತಾದ್ದೆಲ್ಲಾ ಆಗುತ್ತಿದೆ. ನಾನು ಆರೋಗ್ಯ ಇಲಾಖೆ ಬಗ್ಗೆ ಇನ್ನು ಒಂದೆರಡು ವಿಷಯಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕೆಲವೊಂದು ಬಾಬುಗಳಲ್ಲಿ ನಾವು ಇವತ್ತು ಬದಲಾವಣೆ

ಮಾಡಬೇಕಾಗಿರುವುದನ್ನು ಕಲಿಯಬೇಕಾಗಿದೆ. ಒಂದು ಅಂಬುಲೆನ್ಸ್ ಹಾಳಾದರೆ ಅದು ರಿಪೇರಿ ಆಗುವುದೇ ಇಲ್ಲ. 5 ಸಾವಿರ ರೂಪಾಯಿಗಳ ಪರ್ಮಿಷನ್ ತೆಗೆದುಕೊಳ್ಳಬೇಕಾದರೆ ಅವನು ಡಿ.ಎಚ್.ಓ.ಗೆ ಬರೆಯಬೇಕು. ಡಿ.ಎಚ್.ಓ.ನಿಂದ ಪರ್ಮಿಷನ್ ಬರುವಷ್ಟರೊಳಗೆ ಎರಡು ತಿಂಗಳು ಮೂರು ತಿಂಗಳು ಆಗಿ ಹೋಗಿರುತ್ತದೆ. ಅಲ್ಲಿ ಮತ್ತೊಂದು ಫಾಲ್ಟ್ ಆಗಿರುತ್ತದೆ. ಮತ್ತೆ ಅವನು ಒಂದು ಪ್ರಪೋಸಲ್ ಕಳುಹಿಸುತ್ತಾನೆ. ಅಷ್ಟರಲ್ಲಿ 10 ಸಾವಿರ ರೂಪಾಯಿಗಳು ಆಗುತ್ತದೆ. 15 ಸಾವಿರ ರೂಪಾಯಿಗಳಿಗಿಂತ ಹೆಚ್ಚಾದಾಗ ಅದನ್ನು ಸೆಂಟ್ರಲ್‌ಸ್ಟೋರ್‌ಗೆ ಕಳುಹಿಸಬೇಕಾಗುತ್ತದೆ. ರಿಪೇರಿಗೋಸ್ಕರ ಅಷ್ಟು ಆಗುವಾಗ 4-5 ತಿಂಗಳು ಆಗಿ ಹೋಗಿರುತ್ತದೆ. ಸೆಂಟ್ರಲ್ ಸ್ಟೋರ್‌ಗೆ ಬಂದ ತಕ್ಷಣ ಬಹಳ ಗೌರವದಿಂದ ನಾನು ಅಧಿಕರಿಗಳಿಗೆ ನಮಸ್ಕಾರ ಮಾಡಿ ಹೇಳಬೇಕಾಗುತ್ತದೆ. ಆ ಸೆಂಟ್ರಲ್ ಸ್ಟೋರ್‌ಗೆ ಹೋದ ಕೂಡಲೇ ಅದರ ಅರ್ಮೇಚರ್ ಅದರ ಬ್ಯಾಟರಿ ಅದರಲ್ಲಿದ್ದ ಇಂಪೋರ್ಟೆಂಟ್ ಪಾರ್ಟ ಅದೆಲ್ಲಾ ಮಂಗಮಾಯವಾಗಿ ಹೋಗಿಬಿಡುತ್ತದೆ. ಮರುದಿವಸ ಅಧಿಕಾರಿಗಳು ಬರುತ್ತಾರೆ ಅದರ ಬಗ್ಗೆ ರಿಪೋರ್ಟ್ ಕೊಡಲಿಕ್ಕೆ. ಅವರು ಏನು ಹೇಳುತ್ತಾರೆ ಅಂದರೆ ಇದು 15 ಸಾವಿರದಲ್ಲಿ ಆಗುವುದಿಲ್ಲ. ಈ ವಾಹನದ ಅರ್ಧದಷ್ಟು ಹಣ ರಿಪೇರಿಗೆ ಬೇಕು ಎಂದು ಹೇಳುತ್ತಾರೆ. ಆಗ ಮುಗಿದು ಹೋಯಿತು. ಅಂಬುಲೆನ್ಸ್ ಕಥೆಗೋವಿಂದ. ಸ್ವರ್ಗಕ್ಕೆ ಹೋಗಿ ಆಯಿತು ಅದು. ಮತ್ತೆ ಆ ಆಸ್ಪತ್ರೆಗೆ ಅಂಬುಲೆನ್ಸ್ ಬರಬೇಕಾದರೆ ಎರಡು ವರ್ಷ ಮೂರು ವರ್ಷಆಗುತ್ತದೆ. ಬಹುಶಃ ನಮ್ಮ ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ಶೇಕಡ 50 ರಷ್ಟು ಅಂಬುಲೆನ್ಸ್‌ಗಳು ಎಲ್ಲಾ ಅಲ್ಲೇ ನಿಂತಿವೆ. ಸ್ವಲ್ಪ ನಾವು ಮೈಂಡ್ ಅಪ್ಲೈ ಮಾಡಿ ಇದರ ಬಗ್ಗೆ ಪ್ರಾಮಾಣಿಕವಾಗಿ ಇರುವ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಹಾಕಿ ಏನು ಮಾಡಬೇಕು ಎಂದು ಆಲೋಚನೆ ಮಾಡಬೇಕಾಗುತ್ತದೆ.

ಇದನ್ನು ಕೂಡಲೇ ರಿಪೇರಿ ಮಾಡುವ ಬಗ್ಗೆ ಏನು ಮಾಡಬಹುದು. ಒಂದು ಸ್ಪೆಷಲ್ ಟೀಮ್ ಮಾಡಬಹುದೇ, ಎನ್ನುವಂತಹ ಆಲೋಚನೆಯನ್ನು ಮಾಡಿ. ಈವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಬೋರವಲಗಳು ಏನು ಇವೆ ಅವುಗಳನ್ನು ವೆಲ್ ರಿಪೇರಿ ಮಾಡುವುದಕ್ಕೆ ಒಂದು ಸರ್ಕಾರಿ ಘಟಕ ಇದೆ. ಅದು ತಕ್ಕ ಮಟ್ಟಿಗೆ ಕೆಲಸ ಮಾಡುತ್ತಿದೆ. ಸರಿಯಾಗಿ ಮಾಡದೇ ಇದ್ದರೂ ಕೂಡ. ಆ ರೀತಿ ಇಂಥಾದ್ದರ ಬಗ್ಗೆ ಏನು ಮಾಡಬಹುದು ಎಂಬುದನ್ನು ಯೋಚನೆ ಮಾಡಿ, ಸ್ವಾಮಿ ನಾನು ಮೊನ್ನೇ ಒಂದು ಆಸ್ಪತ್ರೆಗೆ ಹೋದೆ ನಾನು ಅದನ್ನು ಇಲ್ಲಿ ಉಲ್ಲೇಖ ಮಾಡಿದೆ. ಮಾನ್ಯ ಅಧ್ಯಕ್ಷರ ಗಮನಕ್ಕೂ ಬಂದಿದೆ. ಲಕ್ಷಾಂತರ ರೂಪಾಯಿಗಳ ಬೆಲೆ ಬಾಳುವಂತಹ ಸಾಮಾನುಗಳು ಹಾಳಾಗಿ ಅಲ್ಲೇ ಬಿದ್ದಿದ್ದಾವೆ. ಅದನ್ನು ಹಾಕಲಿಕ್ಕೆ ಕೂಡ ಜಾಗ ಇಲ್ಲ. ನಾವು ಬಳ್ಳಾರಿ ಆಸ್ಪತ್ರೆಗೆ ಹೋದಾಗ ಅಲ್ಲಿರುವ ಇಂಟೆನ್ಸೀವ್ ಕೇರ್ ಯೂನಿಟ್‌ಗೆ ಭೇಟಿ ನೀಡಿದ್ದೆ. ಸ್ವಾಮಿ ನಾವು ಏನು ಗೋಡೌನ್‌ಗೆ ಹೋಗುತ್ತಿದ್ದೇವೆಯೇ ಎನ್ನುವಂತಹ ಅನುಭವ ಆಯಿತು. ಏಕೆಂದರೆ ಹಾಳಾದಂತಹ ಕಾಟ್‌ಗಳು ಹಾಳಾದಂತಹ ಕುರ್ಚಿಗಳು ಹಾಳಾದಂತಹ ಮಂಚಗಳು 1964ನೇ ಇಸವಿಯಿಂದ ಕಂಡೆಂಮ್ ಆಗದೇ ಅಲ್ಲಿ ಹಾಳಾಗಿ ರಾಶಿ ರಾಶಿ ಬಿದ್ದಿದೆ. ಅದಕ್ಕೂ ಪ್ರೋಸೀಜರ್ ಮಾಡಲಿಕ್ಕೆ ಬಹಳ ಇದೆ. ಅದು 1964ರಲ್ಲಿ ಪರ್ಚೇಸ್ ಮಾಡಿದಾಗ ಅದರ ವ್ಯಾಲ್ಯೂ ಎಷ್ಟು? ಅದರ ಇನವಾಯ್ಸ ಕಾಪಿ ಎಲ್ಲಿ? ನೀವು ಆ ಇನ್‌ವಾಯ್ಸ್ ಕಾಪಿಯನ್ನು ಕೊಡಿ, ಈಗ 1996 ರಲ್ಲಿ ಬಂದಂತಹ ಡಾಕ್ಟರ್‌ಗೆ

ಅದೆಲ್ಲಾ ಎಲ್ಲಿ ತಲೆಗೆ ಹೋಗುತ್ತದೆ. ಅದನ್ನೆಲ್ಲಾ ಹುಡುಕುವುದಕ್ಕೆ ಏನು ಮಾಡಬೇಕು. ಇದರ ಬಗ್ಗೆ ನಾವು ವಿಚಾರ ಮಾಡಬೇಕು. ಅದೇ ರೀತಿ ಎಕ್ಸರೇ ಯಂತ್ರಗಳು ಎಲ್ಲಾ ಆಸ್ಪತ್ರೆಗಳಲ್ಲಿ ನಮ್ಮ ಸುಂದರರಾಯರು ಕ್ಷಯರೋಗದ ಆಸ್ಪತ್ರೆ ಬಗ್ಗೆ ಹೇಳಿದರು. ಸ್ವಾಮಿ ಒಬ್ಬರಿಗೆ ಕ್ಷಯರೋಗ ಇದೆಯೇ ಇಲ್ಲವೇ ಎಂದು ನೋಡಬೇಕಾದರೆ ಅವಶ್ಯಕವಾಗಿ ಎಕ್ಸರೇ ಬೇಕು. ಎಕ್ಸರೇ ಇದೆ ಎಂದು ಹೇಳಿ ಎಯತ್ ವಂಡರ್ ಅಂತ ಹೇಳಿ ಗಿನ್ನೀಸ್ ಬುಕ್‌ನಲ್ಲಿ ಬಹುಶಃ ಹಾಕಬಹುದೋ ಏನೋ ಎನ್ನುವಂತಾದ್ದು. ಕಳೆದ ಒಂದ ಒಂದೂವರೆ ವರ್ಷದಿಂದ ಅಧಿಕಾರಿಗಳಿಂದ ಬೇಜವಾಬ್ದಾರಿ ಆದ ಉತ್ತರ. ಇದನ್ನು ಸರಿ ಮಾಡುವುದಕ್ಕೆ ಆಗುವುದಿಲ್ಲವೇ? ಇದಕ್ಕೆ ಏನಾದರೂ ಹಣ ಬೇಕೇ? ವಿಶೇಷವಾದಂತಹ ಕೋಟಿ ಗಟ್ಟಲೆ ಹಣ ಬೇಕೆ? ಅಥವಾ ವಿದ್ಯುತ್ ಮಾಡಲಿಕ್ಕೆ ಬೇಕಾಗುವಂತಹ ನೀರು ಬೇಕೆ? ಇಂತಹ ಸಂದರ್ಭದಲ್ಲಿ ಇದನ್ನು ಸರಿ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ನಮ್ಮ ಸರ್ಕಾರದಿಂದ ಆಗಬೇಕಾಗಿದೆ. ಈ ರೀತಿಯಲ್ಲಿ ಶ್ರೀಸಾಮಾನ್ಯರಿಗೆ ಒಂದು ಮಿನಿಮಮ್ ಆರೋಗ್ಯದ ಸೌಲಭ್ಯಗಳು ಸಿಗುವುದಕ್ಕೆ ಇವತ್ತು ನಮ್ಮಲ್ಲಿ ಇದ್ದಂತಹ ಹಣವೇ ಸಾಕು. ಆದರೆ ವ್ಯವಸ್ಥೆ ಸರಿಯಾಗಿಲ್ಲ. ಅವನಿಗೆ ಹಣ ಮುಟ್ಟಿಸುವುದಕ್ಕೆ ಸರಿಯಾದಂತಹ ವ್ಯವಸ್ಥೆ ನಮ್ಮಲ್ಲಿ ಇಲ್ಲ.

ಇದನ್ನು ಸರಿ ಮಾಡುವುದಕ್ಕೆ ನಾವು ಪ್ರಯತ್ನ ಮಾಡಬೇಕು ಎನ್ನುವಂತಹ ಮಾತನ್ನು ಹೇಳುತ್ತೇನೆ. ಇನ್ನು ಶಿಕ್ಷಣ ಇಲಾಖೆಯ ಬಗ್ಗೆ ಮಾತನಾಡುತ್ತಾ ಎಲ್ಲಾ ಸದಸ್ಯರು ಶಿಕ್ಷಣ ಮಂತ್ರಿಗಳನ್ನು ಪ್ರಶಂಸೆ ಮಾಡಿದರು. ಆದರೆ ಕೊಠಡಿಗಳ ನಿರ್ಮಾಣ ಮಾಡುವ ಬಗ್ಗೆ ಉಲ್ಲೇಖ ಇದೆ. ಅನೇಕ ಕೊಠಡಿಗಳನ್ನು ನಿರ್ಮಾಣ ಮಾಡುವಂತಾದ್ದು, ಹಾಗೂ ಶಿಕ್ಷಕರನ್ನು ನೇಮಕ ಮಾಡುವಂತಾದ್ದು, ರಾಜ್ಯಪಾಲರ ಭಾಷಣದಲ್ಲ 18 ಸಾವಿರಕ್ಕೂ ಹೆಚ್ಚು ಶಿಕ್ಷಕರನ್ನು ನೇಮಕ ಮಾಡುತ್ತೇವೆಂದು ಹೇಳಿದಾಗ ಅದರಲ್ಲಿ 8-9 ಸಾವಿರ ಶಿಕ್ಷಕರ ನೇಮಕ ಆದರೂ ಆಯಿತು ಎಂದು ಹೇಳುವಂತಹ ಸಮಾಧಾನ. ಆದರೆ ಆ ಕೊಠಡಿಗಳ ನಿರ್ಮಾಣ ಮೊನ್ನೆ ನಮ್ಮ ಕಾರವಾರದ ಕೆ.ಡಿ.ಪಿ. ಮೀಟಿಂಗ್‌ನಲ್ಲಿ ರಿವ್ಯೂ ಮಾಡುವಂತಹ ಸಂದರ್ಭದಲ್ಲಿ ನಾನು ಕೇಳಿದೆ, ಸ್ವಾಮಿ 94-95ನೇ ಸಾಲಿನ ಗುರಿ ಎಷ್ಟು, ಕೊಠಡಿಗಳು? 500 ಗುರಿ ದುಡ್ಡು ಎಷ್ಟು ಬಂತು ಸೊನ್ನೆ. ತಮ್ಮ ಸರ್ಕಾರ ಸ್ವಲ್ಪ ಸಮಯ ಆಯಿತು ಬಂದು ಅಷ್ಟೇ. ಹಿಂದಿನ ಸರ್ಕಾರ ಇತ್ತು. ದುಡ್ಡು ಎಷ್ಟು ಬಂತು ಸೊನ್ನೆ. 95-96ನೇ ಇಸವಿಯಲ್ಲಿ ಎಷ್ಟು ಕೊಠಡಿಗಳ ನಿರ್ಮಾಣ ಆಯಿತು ಸೊನ್ನೆ 94-95, 95-96 ಇಡೀ ಜಿಲ್ಲೆಯಲ್ಲಿ ಹೊಸದಾಗಿ ಕೊಠಡಿಗಳ ನಿರ್ಮಾಣ ಆದದ್ದು ಆಗ ಅಲ್ಲಿಸ್ವಲ್ಪ ಬುದ್ಧಿವಂತ ಅಧಿಕಾರಿಗಳು ಇದ್ದರು ಅವರು ಹೇಳಿದರು ಹಿಂದಿನದು ಮಾಡಿದ್ದೇವೆ ನಾವು. 93ನೇ ಇಸವಿಯಾದು ಮಾಡಿದ್ದೇವೆ 92 ನೇ ಇಸವಿಯದ್ದು ಮಾಡಿದ್ದೇವೆ ಎಂದು. ಆಗಲಿ ಅಷ್ಟಾದರೂ ಸಂತೋಷ. ಆದರೆ ಪುನಃ ಎಕ್ಸಿಕ್ಯೂಟೀವ್ ಇಂಜಿನೀಯರ್ ಅನ್ನು ಕೇಳಿದಾಗ 82 ಪ್ಲಾನ್ ಅಂಡ್ ಎಸ್ಟಿಮೇಟ್ ಆಗಿದೆ ಎಂದು ಹೇಳಿದರು. ಅಂತೂ ಸ್ವಲ್ಪ ಆಶಾದಾಯಕವಾಗಿದೆ. ಅಂತು ಕೊಠಡಿ ನಿರ್ಮಾಣ ಕೆಲಸ ಪ್ರಾರಂಭ ಆಗುತ್ತದೆ ಎಂದು ಆಯಿತು. ಆದರೆ ಎರಡು ವರ್ಷಗಳಲ್ಲಿ ಹೊಸದಾಗಿ ಯಾವುದೇ ಕೊಠಡಿಗಳು ನಿರ್ಮಾಣ ಮಾಡುವಂತಹ ಕೆಲಸ ಆಗಿಲ್ಲ. ಲ್ಯಾಂಡ್ ಆರ್ಮಿಯವರು ಪ್ರಾರಂಭ ಮಾಡಿದಂತಹ ಕೊಠಡಿಗಳು ಬಹುಶಃ ಚಿತ್ರಗಳನ್ನು ತೆಗೆದು ಇವತ್ತು ಯಾವೂದಾದರೂ ಒಂದು

ಮ್ಯೂಜಿಯಂನಲ್ಲಿ ಇಡಬಹುದು ಅಂತಹ ಸ್ಥಿತಿ ಇದೆ. ಅದರ ಪರಿಸ್ಥಿತಿ ಏನು? ಅದಕ್ಕೆ ಎನಕ್ವೈರಿ ಮಾಡಬೇಕು. ರಿಪೋರ್ಟ ತೆಗೆದುಕೊಳ್ಳಬೇಕು ಅವರಿದಂ ರಿಪೋರ್ಟಬರಬೇಕು ಎಂದು ಹೇಳಿ 3-4 ವರ್ಷ ಹೋಯಿತು ಮುಗಿದೇ ಹೋಯಿತು, ಮತ್ತೆ ಅದು ಅಸ್ಥಿತ್ವದಲ್ಲಿಯೇ ಇಲ್ಲ ಎನ್ನುವಂತಹ ಪರಿಸ್ಥಿತಿ. ಇದನ್ನು ನಿಮಗೆ ಸರಿ ಮಾಡುವುದಕ್ಕೆ ಆಗುವುದಿಲ್ಲವೇ? ಈ ಕೊಠಡಿಗಳನ್ನು ನಿರ್ಮಾಣ ಮಾಡುವುದಕ್ಕೆ ರೋಜಗಾರ ಯೋಜನೆಯಿಂದ ಸ್ವಲ್ಪ ಹಣ ಕೊಡಿ. ಪಂಚಾಯತಿಯಿಂದ ಸ್ವಲ್ಪ ಹಣ ಕೊಡಿ. ನಮ್ಮ ಇಲಾಖೆಯಿಂದ ಸ್ವಲ್ಪ ಕೊಡಿ. ಅದಕ್ಕೊಂದು ಎಜನ್ಸಿ ಇದಕ್ಕೊಂದು ಏಜೆನ್ಸಿ. ಈ ಮೂರು ಜನ ಒಟ್ಟಿಗೆ ಸೇರುವುದೇ ಇಲ್ಲ. ಹಾಗಾಗಿ ನಿರ್ಮಾಣದ ಕೆಲಸ ತಡವಾಗುತ್ತದೆ. ಯಾವುದೇ ಹಣ ಆಗಲಿ ಅದು ಸರ್ಕಾರದ ಹಣ ತಾನೇ ನೀವೇ ಕೊಟ್ಟು ಬಿಡಿ 65-70 ಸಾವಿರ ರೂಪಾಯಿ. ಅವರು 30 ಸಾವಿರ ಕೊಡುವುದು ಇನ್ನೊಬ್ಬ 25 ಸಾವಿರ ಕೊಡುವುದು ಅದರಲ್ಲಿ ಕಡಿಮೆ ಬರುವುದು ಅವನು ಹಾಳಾದಂತಹ ಮರವನ್ನು ಹಾಕುವಂತಾದ್ದು, ನಾಲ್ಕನೇ ದರ್ಜೆಯ ಹೆಂಚು ಹಾಕುವಂತಾದ್ದು ಬರುವ ವರ್ಷಹೋಗುವಷ್ಟರಲ್ಲಿ ಆ ಶಾಲೆಯೇ ಅಲ್ಲಿ ಇಲ್ಲದೇ ಇರುವಂತಾದ್ದು, ಇದು ಏಕೆ? ಇದನ್ನು ನಾವು ಸ್ವಲ್ಪ ಅಭ್ಯಾಸ ಮಾಡಿ ಏನು ಮಾಡಿದರೆ ಒಳ್ಳೆಯದು ಆಗುತ್ತದೆ. ಶಾಲಾಕೊಠಡಿ ತೀರಾ ಅವಶ್ಯಕತೆ ಇರುವಂತಾದ್ದು. ಇದಕ್ಕೆ 75 ಸಾವಿರ ರೂಪಾಯಿ ಬೇಕು, ಅದನ್ನು ಕೊಟ್ಟು ಒಂದೇ ಎಜನ್ಸಿ ಮೂಲಕ ಮಾಡಿಸಿ.

ಗ್ರಾಮಾಂತರ ಮಕ್ಕಳಿಗೆ ಬೆಂಗಳೂರು ನಗರದಲ್ಲಿರುವಂಥ ಶಾಲೆಗಳಂತೆ 2-3 ಸಾವಿರ ರೂ.ಗಳಷ್ಟು ಫೀಸ್‌ನ್ನು ಕೊಟ್ಟು ಕಲಿಯಲು ಸಾಧ್ಯವಿಲ್ಲ. ಅದ್ದರಿಂದ ಮಕ್ಕಳು ಓದಲು ಒಂದು ಕೊಠಡಿಯನ್ನಾದರೂ ನಿರ್ಮಾಣ ಮಾಡುವಂಥ ಪ್ರಾಮಾಣಿಕವಾದಂಥ ಕೆಲಸ ಆಗಬೇಕಾಗಿದೆ. ಕೊಠಢಿ ನಿರ್ಮಾಣದ ವಿಚಾರದಂತೆ ಇನ್ನೊಂದು ವಿಚಾರ ನಮ್ಮ ಗಮನಕ್ಕೆ ಬಂದಿದೆ. 15-20 ಸಾವಿರ ರೂಪಾಯಿಗಳು ಬೇಕಾಗುತ್ತದೆ. ಅದನ್ನು ಮಾಡುವಂಥ ಸಂದರ್ಭದಲ್ಲಿ ಅದರ ವ್ಯಾಲ್ಯೂ 10 ರಿಂದ 15 ಸಾವಿರ ರೂಪಾಯಿಗಳು. ಈಗ ಅದರ ರಿಪೇರಿ ಮಾಡಲಿಕ್ಕೂ ಅಬ್‌ಜಕ್ಷನ್ ಹಾಕುತ್ತಾರೆ. ನಮ್ಮ ಜಿಲ್ಲಾ ಮಂತ್ರಿಗಳು ಒಂದು ಬಹಳ ಒಳ್ಳೆಯ ತಾಖೀತು ಮಾಡಿದರು. ಎಸ್ಟಿಮೇಟ್ ಸಾಂಕ್ಷನ್ ಆಗದಿದ್ದರೆ ನೀನು ಬ್ಯಾಕರೆಫರೆನ್ಸ ಹಾಕಬಾರದು. It is your own responsibility. You have to go to the taluk and find it out and set it right. ಎನ್ನುವಂಥ ಒಂದು ಮೌಖಿಕ ಆದೇಶವನ್ನು ಕೊಟ್ಟರು. ಈ ರೀತಿಯ ಮೌಖಿಕ ಆದೇಶದ ಬೆಲೆ ಎಷ್ಟು ಎಂಬುದು ನಮ್ಮ ಅಧಿಕಾರಿಗಳಿಗೆ ಗೊತ್ತು. ಒಂದು ಉದಾಹರಣೆಯನ್ನು ತಮಗೆ ತಿಳಿಸಬಯಸುತ್ತೇನೆ. ನಮ್ಮ ಕೃಷಿ ಇಲಾಖೆಯಿಂದ ಏನೋ ಅಪ್ಪಿತಪ್ಪಿ 18 ಲಕ್ಷ ರೂ.ಗಳು ಬಂದಿವೆ. ಅದು ದಶಲಕ್ಷ ಭಾವಿ ಯೋಜನೆ, ವಿಶೇಷ ಘಟಕ ಯೋಜನೆ, ಪಶ್ಚಿಮಘಟ್ಟ ಯೋಜನೆ ನೆಮ್ಮದಿ ಯೋಜನೆ, ಕೃಷಿಗೆ ಬೇಕಾದಂಥ ನೀರಿನ ವ್ಯವಸ್ಥೆ ಮುಂತಾದುವುಗಳಿಗೆಲ್ಲಾ ಸೇರಿ 18 ಲಕ್ಷ ರೂ.ಗಳು ಬಂದಿವೆ. ಆ ತಾಲ್ಲೂಕಿನ ಅಧಿಕಾರಿ ನಮ್ಮ ಸಹಾಯಕ ಕೃಷಿ ಅಧಿಕಾರಿಯು ಜಿಲ್ಲಾ ಮಟ್ಟದ ಮೇಲಿನ ಅಧಿಕಾರಿಗೆ ಕಳುಹಿಸಿದರೆ, ಪ್ರತಿಸಲವೂ, ಅಲ್ಲಿ ಅಲ್ಪವಿರಾಮ ಇಲ್ಲ, ಇಲ್ಲಿ ಫುಲ್‌ಸ್ಟಾಪ್ ಇಲ್ಲ ಎನ್ನುವ ಹಾಗೆ ಕಳುಹಿಸಿ ಕಾಗದಪತ್ರಗಳನ್ನು ಭಟ್ಕಳದಿಂದ ಶಿರ್ಶಿಗೆ ಶಿರ್ಶಿ ಇಂದ ಭಟ್ಕಳಕ್ಕೆ

ಮಾಡುತ್ತಾ ಕೊನೆಗೂ ನಿಮ್ಮಲ್ಲಿ ಲ್ಯಾಟ್ರೈಟ್ ಕಲ್ಲು ಅವೈಲೆಬಲ್ ಇದೆಯೋ? ಹೇಗೆ? ಸಿಮೆಂಟ್ ಸಿಗುತ್ತದೋ ಹೇಗೆ? ಎಂಬಿತ್ಯಾದಿ ಕ್ವಾಯರಿಗಳು. ಅದನ್ನು ಹಿಡಿದುಕೊಂಡು ನಮ್ಮ ಸಿಬ್ಬಂದಿ ಅಲೆದಾಡುವುದು. ಏಕೆ ಇದು ಹೀಗಾಗುತ್ತದೆ? ನಾನು ಕೇಳಿದೆ ಇದರಲ್ಲಿ ಪರ್ಸೆಂಟೇಜ್ ಏನಾದರೂ ಇದೆಯೇ ಎಂದು. ಅದಕ್ಕೆ ಹಾಗೇನೂ ಇಲ್ಲ ಅದಕ್ಕೆ ನಾವೊಂದು ವ್ಯವಸ್ಥೆ ಮಾಡಿದ್ದೇವೆ, ಆತನನ್ನು ಟ್ರಾನ್ಸಫರ್ ಮಾಡಿದ್ದೇವೆ ಎಂದರು. ಹೀಗೆ ಆ ಪೀಡೆ ಶಿರ್ಶಿ ಇಂದ ಇನ್ನಾವುದೋ ಊರಿಗೆ ಹೋಯಿತು. ಇದು ನನ್ನ ಸರಕಾರದಲ್ಲಿ ಇರುವಂಥ ವ್ಯವಸ್ಥೆ. ಈ ರೀತಿಯಲ್ಲಿ ದೇವರು ಕೊಟ್ಟರೂ ಪೂಜಾರಿ ಬಿಡ ಎಂಬ ಹಾಗೆ ಆಯಿತು. ಇವೊತ್ತು ನಮಗೆ ಬಂದ 18 ಲಕ್ಷ ರೂಪಾಯಿಗಳನ್ನು ಯೋಜನೆಗಳಿಗೆ ಕಾರ್ಯಗತ ಮಾಡಲು ಆಗುತ್ತಾ ಇಲ್ಲ. ಇವುಗಳು ಸಾಮಾನ್ಯ ವಿಚಾರಗಳು. ಇದರ ಬಗ್ಗೆ ನಿಮಗೆ ಲಕ್ಷ್ಯ ಕೊಡುವುದಕ್ಕೆ ಆಗುತ್ತಾ ಇಲ್ಲ.

ಇನ್ನು ಶಾಲಾ ಕೊಠಡಿಗಳ ರಿಪೇರಿ ಬಗ್ಗೆ ಜಿಲ್ಲಾ ಪಂಚಾಯತ್ ಸಭೆಯಲ್ಲಿ ಮಾನ್ಯ ಮಂತ್ರಿಗಳ ಹತ್ತಿರ ಹೇಳಿದ್ದೆ. ಶಾಲಾಕೊಠಡಿಗಳನ್ನು ರಿಪೇರಿ ಮಾಡಿಸಲು ನೀವು ಬೇರೊಂದು ಅಕೌಂಟನ್ನು ಇಡಿ. ಇವೊತ್ತು ಆ ವ್ಯವಸ್ಥೆಯು ಇಲ್ಲ. ಎಲ್ಲಿಯೋ ತಪ್ಪಿ 5-10 ಸಾವಿರ ರೂ.ಗಳು ಇಟ್ಟಿರಬಹುದು. ಒಂದೊಂದು ತಾಲ್ಲೂಕಿಗೆ 15-20 ಸಾವಿರ ಇಟ್ಟರೆ ಸಾಕಾಗುತ್ತದೆಯೇ? ಅದೇನು ಅಷ್ಟಿಷ್ಟು ಹಂಚಲು ದೇವಸ್ಥಾನದ ಪಂಚಕಜ್ಜಾಯವೇ? ಅದು ಒಂದು ಶಾಲೆಗೂ ಆಗುವುದಿಲ್ಲ. ಇವರು ಎಸ್ಟಿಮೇಟ್ ಮಾಡಿ ಕಳುಹಿಸುವಾಗ 5-10 ಸಾವಿರ ರೂ.ಗಳು ಇದ್ದದ್ದು ಅಲ್ಲಿಗೆ ಹೋಗಿ ಮಂಜೂರು ಆಗುವಾಗ ಎಸಕಲೇಷನ್ ಆಗುತ್ತದೆ. ಒಟ್ಟಿನಲ್ಲಿ ಮಕ್ಕಳು ಹರಕು-ಮುರುಕು ಶಾಲೆಗಳಲ್ಲಿ ಕುಳಿತಿರುವುದೇ ಮುಂದುವರಿಯುತ್ತದೆ. ಬಹುಶಃ ಮಾನ್ಯ ಶಿಕ್ಷಣ ಸಚಿವರು ಇದನ್ನು ಗಮನಿಸಿ ಶಾಲಾ ರಿಪೇರಿಗೆ ಈ ವರ್ಷದ ಬಜೆಟ್‌ನಲ್ಲಿ ಪ್ರತಿಯೊಂದು ತಾಲ್ಲೂಕಿಗೆ ಶಾಲಾ ಕೊಠಡಿಗಳ ರಿಪೇರಿ ಮಾಡಲು ಸಾಕಷ್ಟು ಹಣವನ್ನು ಕಾಯ್ದಿರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ವಸತಿ ಶಾಲೆಗಳ ಬಗ್ಗೆ ಉರ್ದು ವಸತಿ ಶಾಲೆಗಳ ಬಗ್ಗೆ ನಮ್ಮ ಮಾನ್ಯ ಸ್ನೇಹಿತರು ಹೇಳಿದ್ದಾರೆ. ಕಳೆದ ವಿಧಾನ ಸಭೆಯಲ್ಲಿ ನಾನೊಂದು ಪ್ರಶ್ನೆಯನ್ನು ಕಳುಹಿಸಿಕೊಟ್ಟಿದ್ದೆ. ಇವರು ಅಲ್ಪಸಂಖ್ಯಾತ ಮುಸ್ಲಿಮರಿಗೆ ವಸತಿ ಶಾಲೆಯನ್ನು ಮಾಡಿದ್ದಾರೆ. ಉ.ಕ. ಜಿಲ್ಲೆಯಲ್ಲಿ ಸಾಕಷ್ಟು ಅಲ್ಪಸಂಖ್ಯಾತ ಜನಾಂಗದವರಿದ್ದಾರೆ. ಅವರಿಗೆ ಏಕೆ ಪ್ರತ್ಯೇಕ ವಸತಿ ಶಾಲೆಗಳನ್ನು ನಿರ್ಮಾಣ ಮಾಡಿಕೊಡುತ್ತಾ ಇಲ್ಲ? ನಮ್ಮ ಜಿಲ್ಲೆಯಲ್ಲಿ ಅಲ್ಪಸಂಖ್ಯಾತ ಕ್ರಿಶ್ಚಿಯನರು ಇದ್ದಾರೆ. ಅವರಿಗೆ ವಸತಿ ಶಾಲೆಯನ್ನು ಏಕೆ ನಿರ್ಮಾಣ ಮಾಡಿಕೊಟ್ಟಿಲ್ಲ? ನಮ್ಮಲ್ಲಿ ಭಾಷಾ ಅಲ್ಪಸಂಖ್ಯಾತರು ಇದ್ದಾರೆ. ಅವರಿಗೆ ವಸತಿ ಶಾಲೆಯನ್ನು ಏಕೆ ನಿರ್ಮಾಣ ಮಾಡಿಕೊಟ್ಟಿಲ್ಲ.? ಈ ನನ್ನ ಪ್ರಶ್ನೆಗೆ ಸರಕಾರದಿಂದ ಉತ್ತರವೇ ಬಂದಿಲ್ಲ. ತಮಗೆ ಆ ಪ್ರಶ್ನೆಯ ಕ್ರಮಾಂಕವನ್ನು ಕೊಡುತ್ತೇನೆ. ವಿಶೇಷವಾಗಿ ಉರ್ದು ಶಾಲೆಗಳನ್ನು ಮಾತ್ರ ನಿರ್ಮಾಣ ಮಾಡುವುದರ ಉದ್ದೇಶ ಏನು? ಇದು ಸರಕಾರದ ನೀತಿಯೇ? ಇದರಲ್ಲಿ ಏನಿದೆ? ನಾವು ಕೆಲವು ಮೌಲ್ಯಗಳ ಆಧಾರದ ಮೇಲೆ ಸರಕಾರವನ್ನು ನಡೆಸಬೇಕಾಗುತ್ತದೆ. ನಮಗೆ ಓಟು ಸಿಗುತ್ತದೆ ಎಂದು ಈ ದೇಶದಲ್ಲಿ ನಾವು ಸಾವಿರಾರು ವರ್ಷಗಳಿಂದಲೂ ನಂಬಿಕೊಂಡು ಬಂದಂಥ ಮೌಲ್ಯಗಳನ್ನು ನಾವು ಧಿಕ್ಕರಿಸಲು ಆಗುವುದಿಲ್ಲ. ಮಹಾತ್ಮಗಾಂಧಿಯವರು ನಮಗೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟರು. ಸಾರಾಯಿಯಿಂದ

ದುಡ್ಡು ಬರಬಹುದು, ಆದರೆ ಎಲ್ಲಿದೆ ಮೌಲ್ಯ ಈ ರಾಷ್ಟ್ರದಲ್ಲಿ , ಆದರೆ ಅವರು ಹೇಳಿದಂಥ ಮಾತುಗಳು ನಮಗೆ ಬೇಡವೇ? ಇವೊತ್ತು ನಾವು ಏನಾದರೂ ಕೆಟ್ಟ ಕೆಲಸವನ್ನು ಮಾಡಿದರೆ ನಮಗೆ ಕೋಟ್ಯಾಂತರ ರೂ.ಗಳು ಬರಬಹುದು. ಆದರೆ ಮೌಲ್ಯ ಇದ್ದರೆ ಮಾತ್ರ ಬೆಲೆ ಬರುತ್ತದೆ. ಇವೊತ್ತು ಮೌಲ್ಯಗಳ ಆಧಾರದ ತತ್ವವನ್ನು ಎತ್ತಿ ಹಿಡಿಯುವ ನಮ್ಮಲ್ಲಿನ ಅನೇಕರು ಇದ್ದಾರೆ. ನಾವೆಲ್ಲರೂ ಅಂಥಹ ಮೌಲ್ಯಗಳ ಬೆಲೆ ಕೊಡುವಂಥ ಕೆಲಸವನ್ನು ಮಾಡಬೇಕು. ದೇಶವನ್ನು ಉಳಿಸತಕ್ಕಂಥಾದ್ದು ಹಣವಲ್ಲ, ಮೌಲ್ಯ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಧಾರ್ಮಿಕ ಮತ್ತು ಧರ್ಮಾದಾಯ ಸಂಸ್ಥೆಗಳ ಬಗ್ಗೆ ಮಾನ್ಯ ರಾಜ್ಯಪಾಲರು ಉಲ್ಲೇಖಮಾಡಿದ್ದಾರೆ. " ಧಾರ್ಮಿಕ ಧತ್ತಿ ವಿಚಾರದಲ್ಲಿ ರಾಜ್ಯದಲ್ಲಿರುವ ಎಲ್ಲಾ ಧಾರ್ಮಿಕ ಮತ್ತು ಧರ್ಮಾದಾಯಿ ಸಂಸ್ಥೆಗಳಿಗೆ ಅನ್ವಯವಾಗುವ ಏಕೈಕ ಸಮಗ್ರ ಧಾರ್ಮಿಕ ಧತ್ತಿ ಅಧಿನಿಯಮವನ್ನು ಶೀಘ್ರದಲ್ಲಿಯೇ ವಿಧಾನಮಂಡಲದಲ್ಲಿ ಮಂಡಿಸಲಾಗುವುದು" ಎಂದು ಹೇಳಿದ್ದಾರೆ. ಇದೂ ಕೂಡ ಒಂದು ಆಶ್ವಾಸನೆಯಾಗಿದೆ. ನಾನೂ ಕೂಡ ಎರಡು ದೇವಸ್ಥಾನಗಳಿಗೆ ಧರ್ಮದರ್ಶಿ ಇದ್ದೇನೆ. ಹೈದ್ರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ, ಓಲ್ಡ್‌ಮೈಸೂರು, ದಕ್ಷಿಣ ಕನ್ನಡದಲ್ಲಿ ಹೀಗೆ ಒಂದೊಂದು ಕಡೆಯಲ್ಲಿ ಒಂದೊಂದು ಕಾಯಿದೆ ಈ ಕುರಿತಾಗಿ ಇದೆ. ಇದನ್ನು ಸರಿ ಮಾಡಲಿಕ್ಕೆ ಬಹಳ ಕಷ್ಟವಿದೆ ಎಂದೆನಿಸುತ್ತದೆ. ನಮ್ಮ ಕಾನೂನು ಮತ್ತು ಸಂಸದೀಯ ಸಚಿವರು ಸಾಕಷ್ಟು ಪರಿಣಿತರು ಇದ್ದಾರೆ. ಅವರು ಇದಕ್ಕೆ ಒಂದು ಪರಿಹಾರವನ್ನು ಕಂಡು ಹಿಡಿಯಬಹುದೋ ಏನೋ ಎಂದೆನಿಸುತ್ತದೆ. ಬಹುಶಃ ಈ ಸಂಸ್ಥೆಗಳಿಂದ ಬರುವ ಅಡೆ-ತಡೆಗಳಿಂದ ಈಜಾಡಿ ಮೇಲೆ ಹೋಗುವಂಥಾದ್ದು ಈ ತನಕದ ಯಾವ ಸರಕಾರಕ್ಕೂ ಮಾಡಲಿಕ್ಕೆ ಆಗಲಿಲ್ಲ. ಮಾಡಿದವರಿಗೆ ಅಭಿನಂದನೆಗಳನ್ನು ಸಲ್ಲಿಸಲು ನಾನು ಇಚ್ಛೆಪಡುತ್ತೇನೆ.

ಶ್ರೀ ಎಂ. ಸಿ.ನಾಣಯ್ಯ : ಮಾನ್ಯ ಅಧ್ಯಕ್ಷರೇ, ಬಹುಶಃ ಮಾನ್ಯ ಸದಸ್ಯರಿಗೆ ತಿಳಿದಿರಲಿಕ್ಕಿಲ್ಲ. ಅಂಥಹ ಸಮಗ್ರ ಕಾಯಿದೆಯು ಈಗಾಗಲೇ ತಯಾರಾಗಿದೆ. ಬಹುಶಃ ಈ ಸದನಲ್ಲಿಯೇ ಅದನ್ನು ಮಂಡಿಸತಕ್ಕಂಥಾದ್ದರ ಬಗ್ಗೆ ತೀರ್ಮಾನ ಮಾಡತಕ್ಕಂಥಾದ್ದು ಇದೆ. ಇದು ಪರಿಶೀಲನಾ ಸಮಿತಿಯ ಮುಂದೆ ಇದೆ. ಸಮಗ್ರವಾಗಿರತಕ್ಕಂಥ ಎಲ್ಲಾ ಕಾಯಿದೆಗಳನ್ನು ತಂದು, ರೆವಿನ್ಯೂ ಮಂತ್ರಿಗಳ ಜೊತೆಗೆ ಚರ್ಚೆ ಮಾಡಿ, ಕಾನೂನು ಇಲಾಖೆಯವರ ಜೊತೆಗೆ ಚರ್ಚೆ ಮಾಡಿ ಈ ಸದನಲ್ಲಿ ಈಗ ಮಂಡಿಸಲು ಆಗದಿದ್ದಲ್ಲಿ ಮುಂದಿನ ಬಜೆಟ್ ಅಧಿವೇಶನದಲ್ಲಿ ನಾವು ಅದನ್ನು ಮಂಡಿಸುತ್ತೇವೆ.

ಡಾ|| ಯು. ಚಿತ್ತರಂಜನ್ : ಮಾನ್ಯ ಅಧ್ಯಕ್ಷರೇ, ಬಹಳ ಸಂತೋಷ. ಆದರೆ ಎಷ್ಟರಮಟ್ಟಿಗೆ ಯಶಸ್ಸನ್ನು ಪಡೆಯುತ್ತಾರೆಂಬುದನ್ನು ಕಾದು ನೋಡಬೇಕಾಗಿದೆ. ಏಕೆಂದರೆ ಇದನ್ನು ನಾವು ಬಹಳ ವರ್ಷಗಳಿಂದ ನೋಡಿಕೊಂಡು ಬಂದಿದ್ದೇವೆ. ಮುಜರಾಯಿ ಇಲಾಖೆ ಇಂದ ಬರುವ ಹಣವನ್ನು ದೇವಸ್ಥಾನಗಳಿಗೆ ಅವುಗಳ ಅಭಿವೃದ್ಧಿಗೆ ಉಪಯೋಗಿಸಬೇಕು ಎನ್ನುವಂಥ ಒಂದು ಕಮಿಟ್‌ಮೆಂಟ್ ಸರಕಾರಕ್ಕೆ ಇರಬೇಕು. ಅದನ್ನು ಬೇರೆ ಕೆಲಸಗಳಿಗೆ ಉಪಯೋಗಿಸಬಾರದು ಎಂಬ ಬೇಡಿಕೆಯನ್ನು ತಮ್ಮ ಮೂಲಕ ಸರಕಾರಕ್ಕೆ ಸಲ್ಲಿಸುತ್ತೇನೆ. ಇನ್ನು ಆಶ್ರಯ ಮನೆಗಳ ಬಗ್ಗೆ ಒಂದು ವಾಕ್ಯವನ್ನು ಹೇಳುತ್ತೇನೆ. ಅದರಲ್ಲಿ ತುಂಬಾ ಪ್ರೊಸೀಜರಲ್ ಎರರ್‌ಗಳು ಇವೆ. ಇವರಿಂದಾಗಿ ಫಲಾನುಭವಿಗಳಿಗೆ ಸರಿಯಾಗಿ ಈ ಪ್ರಯೋಜನ ಮುಟ್ಟುತ್ತಾ ಇಲ್ಲ ಎನ್ನತಕ್ಕಂಥಾದ್ದನ್ನು ದಯಮಾಡಿ ಗಮನಿಸಬೇಕು.

ನೀವು ಅದಕ್ಕೆ ಸಂಬಂಧಿಸಿದ ಫೈಲ್‌ನ್ನು ಅರ್ಧಗಂಟೆಯವರೆಗೆ ಸ್ಟಡಿ ಮಾಡಿದರೆ ಸಾಕು. ಅದರಲ್ಲಿ ಏನೇನು ಲೋಪದೋಷಗಳು ಇವೆ ಎಂಬುದು ತಿಳಿಯುತ್ತದೆ. ಗ್ರಾಮ ಮತ್ತು ತಾಲ್ಲೂಕು ಪಂಚಾಯತ್ ಸಭೆಯ ಮೀಟಿಂಗ್‌ನಲ್ಲಿ ಕುಳಿತುಕೊಂಡರೆ ನಮಗೆ ಗೊತ್ತಾಗುತ್ತದೆ. ಅದರಲ್ಲಿ ಹೇಳಿರುವ ಲಾಟರಿ ಇತ್ಯಾದಿ ಸಿಸ್ಟಂಗಳ ಮುಖಾಂತರ ಗುರುತಿಸುವುದನ್ನು ನಿಲ್ಲಿಸಿ ಎಲ್ಲವನ್ನು ಸೂಪರಸೀಡ್ ಮಾಡಿ ಒಂದು ನಿರ್ಧಿಷ್ಟವಾದ ಆಜ್ಞೆಯನ್ನು ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸದನದಲ್ಲಿ ಮಾಡುವ ಮಹತ್ಕಾರ್ಯ ಅಂದರೆ ಅತ್ಯಂತ ಘನವೆತ್ತ, ಗೌರವಾನ್ವಿತ ರಾಜ್ಯಪಾಲರು ಮಾಡುವ ಭಾಷಣಕ್ಕೆ ಬೆಲೆ ಇರಲಿ, ವ್ಯಾಲ್ಯೂ ಇರಲಿ, ಅದನ್ನು ಕಾಪಾಡುವಂಥ ಜವಾಬ್ದಾರಿಯು ಕೇವಲ ಆಡಿದಂಥ ಸರಕಾರದ ಜನರ ಮೇಲೆ ಮಾತ್ರ ಅಲ್ಲ ನಮ್ಮ ಮೇಲೆಯೂ ಇದೆ ಎನ್ನುವಂಥ ಮಾತನ್ನು ತಮಗೆ ನೆನಪು ಮಾಡಿ ಕೈಜೋಡಿಸಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೊಟ್ಟಂಥ ಆಶ್ವಾಸನೆಗಳನ್ನು ಸರಕಾರದವರು ಈಡೇರಿಸುವ ಹಾಗೆ ಮಾನ್ಯ ಅಧ್ಯಕ್ಷರು ಅವರಿಗೆ ಸಲಹೆಯನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

+ ಶ್ರೀ ಎನ್. ರಾಜಣ್ಣ (ಭಾರತೀನಗರ) : ಸನ್ಮಾನ್ಯ ಅಧ್ಯಕ್ಷರೇ, my conscience is asking me to request you as to whether you can postpone my speech to Monday.

ಅಧ್ಯಕ್ಷರು : ಇಲ್ಲ ಇಲ್ಲ. I am eager to hear you. No, No. I cannot wait till Monday. ನಾನು ನಿಮ್ಮ ಮಾತುಗಳನ್ನು ಕೇಳಲು ಅತ್ಯಂತ ಉತ್ಸುಕನಾಗಿದ್ದೇನೆ. ದಯಮಾಡಿ ನೀವು ಅದಕ್ಕೆ ನಿರಾಶೆ ಮಾಡಬೇಡಿ.

ಶ್ರೀ ಎನ್. ರಾಜಣ್ಣ : ಬಹಳಷ್ಟು ಜನರು ಕ್ರಿಕೆಟ್ ಮೂಡ್‌ನಲ್ಲಿದ್ದಾರೆ. ಕೆಲವರು ಊರಿಗೆ ಹೋಗಿದ್ದಾರೆ.

ಅಧ್ಯಕ್ಷರು : ಇಲ್ಲ...... ಎಲ್ಲರೂ ನಿಮ್ಮ ಭಾಷಣವನ್ನು ಕೇಳಲು ಕಾದಿದ್ದಾರೆಯಾದ ಕಾರಣ ನೀವು ನಿಮ್ಮ ಮಾತನ್ನು ಪ್ರಾರಂಭಿಸಬೇಕು.

ಶ್ರೀ ಎನ್. ರಾಜಣ್ಣ : ಅಧಿಕಾರಿಗಳೂ ಕೂಡ ಕೆಲವರು ಬಂದಿಲ್ಲ. ನನ್ನ ಸ್ಪೀಚ್ ಪವರ್ ಮಿನಿಸ್ಟರ್, ಹೌಸಿಂಗ್ ಮಿನಿಸ್ಟರ್, ಬೆಂಗಳೂರು ನಗರಾಭಿವೃದ್ಧಿ ಮಿನಿಸ್ಟರ್, ಟೌನಪ್ಲಾನಿಂಗ್ ಆಫೀಸರ್, ಹೆಲ್ತ ಡಿಪಾರ್ಟಮೆಂಟ್, ಸಂಬಂಧಪಟ್ಟಿದೆ. ಸಂಬಂಧಪಟ್ಟ ಅಧಿಕಾರಿಗಳು ಕಡಿಮೆ ಇದ್ದಾರೆ. ಅವರುಗಳು ರಜೆಯ ಮೂಡನಲ್ಲಿದ್ದಾರೆ. ತಾವು ಈಗಲೇ ಭಾಷಣ ಮಾಡಿ ಎಂದು ಹೇಳಿ ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಅದಕ್ಕೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೊದಲನೇ ಪ್ಯಾರಾದಲ್ಲಿ ಜನತಾದರ್ಶನ ಕಾರ್ಯಕ್ರಮ ವಿಚಾರ ಹೇಳಿದ್ದಾರೆ. ಅದರ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಆದರೆ ಚರಿತ್ರೆಯಲ್ಲಿಯೇ ಹಿಂದೆ ಯಾವ ಮುಖ್ಯಮಂತ್ರಿಯವರೂ ಕೂಡ ಜನರ ಬಾಗಿಲಿಗೆ ಹೋಗಿ ಕೆಲಸವನ್ನು

ಮಾಡಿಕೊಟ್ಟಿಲ್ಲ. ಆಗಿರುವುದು, ಬಿಡುವುದು ಎರಡನೇ ಮಾತು. ಸ್ವಲ್ಪ ಆಗಿರಬಹುದು, ಸ್ವಲ್ಪ ಆಗುತ್ತಿರಬಹುದು, ಸ್ವಲ್ಪ ಇನ್ನೂ ಮುಂದಕ್ಕೆ ಆಗಬಹುದು. ಜನರು 1994ರ ಡಿಸೆಂಬರ್ 1ನೇ ತಾರೀಖು ರಾಜ್ಯದಲ್ಲಿ ನಮ್ಮ ಸರಕಾರ ಬರಬೇಕೆಂದು ಇಚ್ಛೆಪಟ್ಟು ಕರ್ನಾಟಕದಲ್ಲಿನ ಲೀಡರ್‌ಗಳನ್ನು ನೋಡಿ ಮತವನ್ನು ಕೊಟ್ಟರೇ ಹೊರತು ಡೆಲ್ಲಿಯನ್ನು ನೋಡಿ ಮತವನ್ನು ಕೊಡಲಿಲ್ಲ. ಅದಕ್ಕೋಸ್ಕರ ನಮ್ಮ ಮತ್ತು ನಮ್ಮ ನಾಯಕರ ಕರ್ತವ್ಯ, ನಮ್ಮ ಮುಖ್ಯಮಂತ್ರಿಯವರ ಕರ್ತವ್ಯ ಅಂದರೆ ಜನರ ಹತ್ತಿರ ಹೋಗಿ ಅವರ ಜಿಲ್ಲೆಗೆ ಹೋಗಿ ಅವರುಗಳ ಕಷ್ಟವನ್ನು ಅರಿತುಕೊಂಡು ಪರಿಹಾರ ಕಂಡುಹಿಡಿಯಲು ಮ್ಯಾಕ್ಸಿಮಮ್ ಎಫರ್ಟ್‌ನ್ನು ಹಾಕಿ ಎಲ್ಲಾ ಜಿಲ್ಲೆಗಳಿಗೂ ಹೋಗಿದ್ದಾರೆ. We are by the people, for the people. We are not to buy the people, and not for to the people. We are for the people by the people. ಅದಕ್ಕೋಸ್ಕರವಾಗಿ ಜನರ ಹತ್ತಿರ ಹೋಗಿ ಅವರ ಕಷ್ಟಗಳನ್ನು ತಿಳಿದುಕೊಂಡು ಬಂದಿರುತ್ತಾರೆ. ಜನಸಂಖ್ಯೆ ಜಾಸ್ತಿಯಾಗಿ ಕರ್ನಾಟಕದಲ್ಲಿ ದೇಶದಲ್ಲೇ ಸಮಸ್ಯೆಗಳು ಜಾಸ್ತಿಯಾಗಿವೆ. ಒಬ್ಬ ಬಡವ ಜಿಲ್ಲೆಯಿಂದ ಬೆಂಗಳೂರಿಗೆ ಬರಬೇಕಾದರೆ ಅವನು ಸಂಪಾದಿಸಿದ ಕೂಲಿಯನ್ನು ಬಸ್‌ಗೆ ಕೊಟ್ಟು ಬರಲು ಎಷ್ಟು ಕಷ್ಟವಿದೆ. ನಮ್ಮ ಮುಖ್ಯಮಂತ್ರಿಗಳು ಬಡವರ ಕಷ್ಟ ಅರಿತು ಜಿಲ್ಲೆಗಳಿಗೆ ಅವರ ಬಾಗಿಲಿಗೇ ಹೋಗಿ ಸಮಸ್ಯೆ ಬಗೆಹರಿಸುವುದು ಒಳ್ಳೆಯದು ಎಂಬುದನ್ನು ಚಿಂತನೆ ಮಾಡಿ ನೋಡಬೇಕು. ಅಧ್ಯಕ್ಷರೇ, ರಾಜ್ಯಪಾಲರ ಭಾಷಣದಲ್ಲಿ ಎಲ್ಲಾ ವಿಷಯಗಳನ್ನು ಗೆಳೆಯರು ಟಚ್ ಮಾಡಿಬಿಟ್ಟಿದ್ದಾರೆ. I am going to touch power i.e. KPC & KEB.

MR. SPEAKER : You touch whatever you want. Don't worry. I am there to put down.

SRI N. RAJANNA : Now I would like to draw your attention to para 12 of the Governor's Address. ಇವತ್ತು ಬೆಂಗಳೂರಿನಲ್ಲೇನಾದರೂ ಬೆಳಕಿದೆ ಎಂದರೆ we must be greatful to Sri M. Visveswaraiah and ಧೀಮಂತ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯ, ಧೀಮಂತ ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪ, we must be grateful to them. ಶಿವಪ್ಪನವರೇ, ನೀವೆಲ್ಲಾ ಪಶ್ಚಿಮಘಟ್ಟಗಳ ಬಾರ್ಡರ್‌ನಲ್ಲಿದ್ದೀರಿ. ಶರಾವತಿ, ಪ್ರಕೃತಿಯ ಶಕ್ತಿ ಕರ್ನಾಟಕದಿಂದ ವಿದ್ಯುಚ್ಛಕ್ತಿ. We must be grateful to these leaders including some of the officers because really they have done good work and devoted their time & energy. ಶರಾವತಿಯ ಮಹಾತ್ಮಗಾಂಧಿ ವಿದ್ಯುತ್ ಉತ್ಪಾದನಾ ಕೇಂದ್ರ ಮತ್ತ ವರಾಹಿ ಕೇಂದ್ರವಿಲ್ಲದಿದ್ದರೆ ಇವತ್ತು ಬರುವ 3140 ಮೆಗಾವಾಟನಲ್ಲಿ 1500 Mw is produced in Sharavathi i.e., at Mahatma Gandhi generating centres, ಒಂದು ಸಮಯ 1949 ರಿಂದ 65ರವರೆಗೆ ಈ ಪ್ರಾಜೆಕ್ಟ್‌ಗಳು ಬರದೇ ಇದ್ದಿದ್ದರೆ What would have been the fate of Bangalore City and Karnataka ಎನ್ನುವುದನ್ನು ನಾವು

ತಿಳಿಯಬೇಕಾಗುತ್ತದೆ. ಭಾರತ ದೇಶದಲ್ಲೇ first the power was generated in Karnataka i.e., at Shimsha. ಶಿಂಷಾದಲ್ಲಿ 1902 ರಲ್ಲಿ ಕಾವೇರಿ ನದಿ ದಡದಲ್ಲಿ ಶಿವನ ಸಮುದ್ರದ ಬಳಿ ಏಷ್ಯಾದಲ್ಲೇ ಬೃಹತ್ ಪ್ರಥಮ ಸ್ಥಾವರದ ಸ್ಥಾಪನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ರೆಕಾರ್ಡ್‌ಗೆ ತಪ್ಪು ಹೋಗಬಾರದು, ಶೇಷಾದ್ರಿ ಅಯ್ಯರ್‌ರವರ ಹೆಸರೂ ಸೇರಬೇಕು.

MR. SPEAKER : Alright, K. Seshadri Iyer ರವರನ್ನೂ ಸೇರಿಸಿ.

SRI N. RAJANNA : I want to clarify one thing ಯುವಕರಲ್ಲಿ ಓದುವಾಗ ನಾನು ಹಸು ಮೇಯಿಸಿಕೊಂಡಿದ್ದೆ. ನೀವೆಲ್ಲಾ ಮನೆಯಲ್ಲಿ ಅರ್ಲಿಮಾರ್ನಿಂಗ್ ನಿದ್ದೆ ಮಾಡುವಾಗ ನಾನು ದನದ ಕೊಟ್ಟಿಗೆಯಲ್ಲಿದ್ದೆ. ಶಾಲೆಗೇ ಹೋಗಲಿಲ್ಲ. ಕೃಷ್ಣಪ್ಪನವರಂಥ ಯಾರೋ ಪುಣ್ಯಾತ್ಮ ನಮ್ಮ ತಂದೆಗೆ ಹೇಳಿ, ಏನಯ್ಯ ಇವನು ಹಸು ಮೇಯಿಸಿಕೊಂಡಿದ್ದಾನೆಂದು at the age of 13 years, ಕನ್ನಡ ನನಗೆ ಅದಕ್ಕೆ ಶುದ್ಧವಾಗಿ ಬರುತ್ತಿಲ್ಲ ವಾಟಾಳ್‌ನಾಗರಾಜ್‌ರವರೇ, I want to clarify some of the things here. 13ನೇ ವಯಸ್ಸಿನಲ್ಲಿ ನನ್ನ ಶಾಲೆಗೆ ಕರೆದುಕೊಂಡು ಹೋದರು. ಇವನಿಗೆ 13 ವರ್ಷ ಆಗಿಬಿಟ್ಟಿದೆ, ಶಾಲೆಗೆ ಹೇಗೆ ಸೇರಿಸಿಕೊಳ್ಳುವುದು ಎಂದು ಎಲ್ಲಾ ರಿಜೆಕ್ಟ್ ಮಾಡುತ್ತಾರೆ. ಉನ್ನತ ಶಿಕ್ಷಣ ಸಚಿವ ಪುಣ್ಯಾತ್ಮ ಮಂಜುನಾಥರು, 1953-54 ರಲ್ಲಿ ಜೋಗುಪಾಳ್ಯದ ಪ್ರೈಮರಿ ಶಾಲೆಗೆ ಹೆಡಮಾಸ್ಟರಾಗಿದ್ದರು. ಯಾರೋ ನಿಮ್ಮಂಥೋರು ಕರೆದುಕೊಂಡುಹೋಗಿ, ಅಪ್ಪ ಈ ಹುಡುಗ ದನ ಮೇಯಿಸಿ ಕೊಂಡಿದ್ದಾನೆ ಸೇರಿಸಿಕೊಳ್ಳಿ ಎಂದು ಕರುಣೆ ತೋರಿಸಿದರು. I must be very grateful to Mr. Manjunath. Why I am telling all these things is, I am not a qualified man. But, have seen the problems of the state. After understnding the problems of the State and the country..... ಮನುಷ್ಯನ ಕಷ್ಟ ಅರ್ಥಮಾಡಿಕೊಂಡೇ ಗ್ರಂಥ ಬರೆಯುವುದು, ಗ್ರಂಥದಿಂದಲೇ ಪುಸ್ತಕ ಬರುವುದು. I hope our Hon'ble speaker will not mistake me.

MR. SPEAKER : Not at all. Please carry on.

ಶ್ರೀ ಎನ್. ರಾಜಣ್ಣ : ನನ್ನನ್ನು ಹೈಸ್ಕೂಲಿಗೆ ಕರೆದುಕೊಂಡು ಹೋದರು. ಅಲ್ಲಿ ಕನ್ನಡವೇ ಬರುವುದಿಲ್ಲ ಇಂಗ್ಲೀಷ್ ಎಲ್ಲಿಂದ ಬರುತ್ತದೆ? What is your mother tongue / ಬೆಬ್ಬೆಬ್ಬಾ ಅಂದೆ, I am not in a position to express it. But, with the help of great teachers in those years I was able to learn ತ್ಯಾಗಿಗಳಿದ್ದರು ಸಾರ್ ಶಾಲೆಗಳಲ್ಲಿ ಸಿನಿಮಾದಲ್ಲಿ ಇವತ್ತು ನೋಡಿ ಕಲಿಯುವುದಿಲ್ಲ ಸ್ವಾಮಿ, ಡ್ರಾಯಿಂಗ್ ಹಾಕಿಬಿಟ್ಟರೆ ಮಕ್ಕಳಿಗೆ ತಲೇಲಿ ಕುಳಿತುಕೊಳ್ಳುತ್ತಿತ್ತು ವಿದ್ಯೆ. ವಿದ್ಯೆ ಬರದಿದ್ದ ನನಗೆ ಹೈಸ್ಕೂಲ್ ಫಸ್ಟ್‌ಕ್ಲಾಸ್ ಮಾಡಿಸಿದರು. *I must* be grateful to my teachers. ಹೈಸ್ಕೂಲಿನಲ್ಲಿ ನಾನು ಸ್ವಲ್ಪ ಕನ್ನಡ ಇಂಗ್ಲೀಷ್ ಕಲಿತದ್ದು. Mrs.

ಮಾದಯ್ಯ ಎಂಬುವವರಿಗೆ I am still paying Rs. 1000 every year for the past 30 years. ಮಾತೃ ದೇವೋಭವ, ಪಿತೃದೇವೋಭವ ಆಚಾರ್ಯ ದೇವೋಭವ, ನನಗಿದ್ದದು ಆಚಾರ್ಯ ಒಬ್ಬರೇ. That is why sometimes while speaking there may be some slips. But, Madam Pramila is a well qualified and seniormost advocate of Bangalore and If I commit any mistakes she may correct me, others also may correct me, I will rectify myself, ಭಾಷೆ ಬಗ್ಗೆ, ಇನ್ನೊಂದು ಹೇಳುತ್ತೇನೆ. ಗಾಂಧಿ ಹೇಳಿರುವುದು ಹೃದಯಕ್ಕೆ ಭಾಷೆ ಇಲ್ಲ ಎಂದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ರಾಜಣ್ಣನವರೇ, ನೀವು ನನ್ನ ಕ್ಷೇತ್ರವಾದ ಇಂದಿರಾನಗರವನ್ನು ಪ್ರತಿನಿಧಿಸುತ್ತಿದ್ದೀರಿ, ನನಗೆ ಬಹಳ ಸಂತೋಷ.

ಶ್ರೀ ಎನ್. ರಾಜಣ್ಣ : ಥ್ಯಾಂಕ್ಯೂ ಮೇಡಂ. ಹೃದಯಕ್ಕೆ ಭಾಷೆಯಿಲ್ಲ. ಅದು ಬೇರೊಂದು ಹೃದಯದೊಡನೆ ಭಾಷೆ ಇಲ್ಲದೆಯೇ ಮಾತನಾಡುತ್ತದೆ, ಸ್ವಾಮಿ ಚಿಕ್ಕ ವಯಸ್ಸಿನಲ್ಲಿ ನನ್ನ ಪಕ್ಕದಲ್ಲಿದ್ದವರು ಬ್ರಿಟಿಷರು ತಮಿಳರು ತೆಲುಗರು, ಕನ್ನಡದವರು ಸ್ವಲ್ಪ ಉರ್ದು ಮಾತನಾಡುವವರು. ಈಗ ಕರ್ನಾಟಕದಲ್ಲಿ ಎಲ್ಲೂ ಕನ್ನಡ ಮಾತಾಡುತ್ತೇವೆ. ಅದು ಒಬ್ಬರಿಗೊಬ್ಬರಿಗೆ ಅರ್ಥವಾಗುತ್ತದೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬಗೆಯ ಕನ್ನಡವಿದೆ, ವಿಜಾಪುರದಲ್ಲಿ ಒಂದು ಬಗೆ ಕನ್ನಡ, ಹುಬ್ಬಳ್ಳಿ ಧಾರವಾಡಕ್ಕೆ ಹೋದರೆ ಅಲ್ಲೊಂದು ಕನ್ನಡ ಉತ್ತರ ಕರ್ನಾಟಕದಲ್ಲೊಂದು ಕನ್ನಡ, ದಕ್ಷಿಣ ಕರ್ನಾಟಕ್ಕೆ ಬಂದರೆ ಅಲ್ಲೊಂದು ಕನ್ನಡ ಬೆಂಗಳೂರಿಗೆ ಬಂದರೆ ಕನ್ನಡ-ತಮಿಳು, ಕನ್ನಡ-ಇಂಗ್ಲೀಷ್, ಕನ್ನಡ-ತೆಲುಗು ಬರುತ್ತದೆ. ಅದಕೋಸ್ಕರ ಸ್ವಲ್ಪ ವ್ಯತ್ಯಾಸ ಬರುತ್ತದೆ. ಇಲ್ಲದಿದ್ದರೆ ಹಳ್ಳಿಯಲ್ಲಿ ಒಬ್ಬ ಬ್ರಾಹ್ಮಣರ ಮನೆ ಪಕ್ಕದಲ್ಲಿ ಹುಟ್ಟಿದ್ದರೆ ನಾನೂ ನಿಮ್ಮಂತೆ ಕವಿಯಾಗುತ್ತಿದ್ದೆ, I would have become a poet. ಆ ಅದೃಷ್ಟ ಇಲ್ಲ.

ಅಧ್ಯಕ್ಷರು : ನೀವು ವಾಟಾಳ್ ನಾಗರಾಜ್‌ರವರನ್ನು ಬ್ರಾಹ್ಮಣರು ಎಂದು ತಿಳಿದುಕೊಂಡಿದ್ದೀರೋ?

ಶ್ರೀ ಎನ್. ರಾಜಣ್ಣ : ಯಾರೋ ವಿದ್ಯಾವಂತರು ಅವರ ಮನೆ ಪಕ್ಕದಲ್ಲಿದ್ದವರು ಅವರಿಗೆಲ್ಲಾ ಕಲಿಸಿದ್ದಾರೆ. ಇಲ್ಲದಿದ್ದರೆ ಅಷ್ಟು ಪರಿಣಿತರ ಆಗಲು ಆಗುವುದಿಲ್ಲ.

ಅಧ್ಯಕ್ಷರು : ಅಂದರೆ ಸ್ವತಃ ಇವರಿಗೆ ವಿದ್ಯೆ ಇಲ್ಲ, ಅಯ್ಯೋ ರಾಮ ನಾವ್ಯಾರೂ ಇಷ್ಟು ಕೆಟ್ಟದಾಗಿ ಮಾತನಾಡಿರಲಿಲ್ಲ ನಿಮ್ಮ ವಿಚಾರದಲ್ಲಿ ನೋಡಿ.

(ನಗು)

ಶ್ರೀ ವಾಟಾಳ್ ನಾಗರಾಜ್ : ಒಂದೊಂದ್ಸಾರಿ ನಮ್ಮ ಹಣೆಬರಹ ಸರಿಯಾಗಿಲ್ಲದೇ ಇದ್ದಾಗ ಈ ತರಹ ಕುಳಿತು ಕೇಳುತ್ತಿದ್ದೇವಲ್ಲಾ, ಇನ್ನೇನೂ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ನನಗೆ ಸಂತೋಷ. ಈವತ್ತು ನಿಮಗೂ ಒಬ್ಬರು ಸದನದಲ್ಲಿ ಹೇಳುವವರು ಇದ್ದಾರಲ್ಲ ಎಂದು.

ಶ್ರೀ ಎನ್. ರಾಜಣ್ಣ : 1902 ರಲ್ಲಿ ವಿದ್ಯುತ್ ಉತ್ಪತ್ತಿ ಮಾಡಿದ್ದು ಕರ್ನಾಟಕದಲ್ಲಿ ಅಂದರೆ ಇವತ್ತಿಗೆ 94 ವರ್ಷವಾಯಿತು. ಈ ಪವರ್ ಬರಬೇಕಾದರೆ ಬ್ರಿಟಿಷರು ಏನು ಮಾಡಿದರು, ಕೆಜಿಎಫ್‌ನಲ್ಲಿ ಇರುವ ಕೈಗಾರಿಕೆಗೆ ವಿದ್ಯುತ್ ಕೊಡುವ ಕಾರಣಕ್ಕೆ 147 ಕಿಮೀ ತನಕ ವಿದ್ಯುತ್ ಲೈನ್ ತೆಗೆದುಕೊಂಡುಹೋದರು. In order to take power ಶಿವನಸಮುದ್ರದಿಂದ 147 ಕಿಲೋಮೀಟರವರೆಗೆ ಕೆಜಿಎಫ್‌ಗೆ ಪವರನ್ನು ತೆಗೆದುಕೊಂಡು ಹೋದರು. ಅಲ್ಲಿ ಗೋಲ್ಡ್ ತೆಗೆದರು. ಅವರು ಊರಿಗೂ ಎತ್ತಿಕೊಂಡು ಹೋದರು.ಹೊತ್ತುಕೊಂಡು ಹೋದರು. ಆದರೆ ಅವರೇ ಫಸ್ಟ್ ಇಲ್ಲಿ ಶುರುಮಾಡಿದ್ದು 1902 ರಲ್ಲಿ. ಇಲ್ಲಿ ಸಂಬಂಧಪಟ್ಟ ಮಂತ್ರಿಗಳು ಇಲ್ಲ. We must tap the natural source. ಎಲ್ಲಿ ಪ್ರಕೃತಿಯಿಂದ ನೀರು ಹರಿಯುತ್ತಾ ಇದೆ. ಅಲ್ಲೇ ಪವರ್ ಜನರೇಟ್ ಮಾಡಬೇಕು. ನಾವು ಹೈಡ್ರೋ ಎಲೆಕ್ಟ್ರಿಕ್ ಪವರ್ ಜನರೇಟ್ ಮಾಡಿದರೆ ಮಾತ್ರ ಚೀಪೆಸ್ಟ್ ಆಗಿ ವರ್ಕ್‌ಔಟ್ ಆಗುತ್ತದೆ. ಕರ್ನಾಟಕದಲ್ಲಿ ಶರಾವತಿ, ಲಿಂಗನಮಕ್ಕಿ, ವರಾಹಿ ಇಲ್ಲಿ 18 ಪೈಸೆಗೆ ಪವರ್ ಜನರೇಟ್ ಆಗುತ್ತಿದೆ. Through out the world, cheapest power is being produced in Karnataka i.e., from Sharavathy. The great leaders ಅವರಿಗೆ ಈ ಕ್ರೆಡಿಟ್ ಹೋಗುವುದು. ಇವತ್ತು ನಾವು ಮನೆಯಲ್ಲಿ ದೀಪ ಹಚ್ಚುತ್ತೇವೆ ಎಂದರೆ ಇವತ್ತು ನಾಲ್ಕೂವರೆ ಕೋಟಿ ಜನಸಂಖ್ಯೆ ಮನೆಯಲ್ಲಿ ದೀಪ ಉರಿಯುತ್ತಿದೆ ಎಂದೆರ ನಾವು ಇದನ್ನು ಯೋಚನೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ what will be the fate of the Bangalore city ಎನ್ನುವುದು ನನಗೆ ಚಿಂತಿಯಾಗುತ್ತಿತ್ತು. ಅದಕ್ಕೋಸ್ಕರ ಶರಾವತಿ ವಿದ್ಯುತ್ ಉತ್ಪಾದನಾ ಕೇಂದ್ರ ಮತ್ತು ಮಹಾತ್ಮಗಾಂಧಿ ಜಲವಿದ್ಯುತ್ ಕೇಂದ್ರದಿಂದ ಹೊರಬರುವ ಟೇಲರೇಸ್ ನೀರನ್ನು ಗೇರುಸೊಪ್ಪೆ ಗ್ರಾಮದ ಹತ್ತಿರ ಈಗ ನಿರ್ಮಾಣ ಹಂತದಲ್ಲಿರುವ ಶರಾವತಿ ಟೇಲರೇಸ್ ಯೋಜನೆಯಿಂದ ಈ ವಿದ್ಯುತ್ ಉತ್ಪಾದನೆಗಾಗಿ ಮತ್ತೆ ಬಳಸಿಕೊಳ್ಳಲಾಗುವುದು. ವರ್ಷಕ್ಕೆ 600 ದಶಲಕ್ಷ ಯೂನಿಟಗಳು ಉತ್ಪಾದನೆಯಾಗುವುದು. ಅದು ನಡೆಯುತ್ತಿದೆ. ಆದಷ್ಟು ಬೇಗ ಈ ಕಾರ್ಯಕ್ರಮ ಮುಗಿಯಬೇಕು. ವರಾಹಿಯಲ್ಲ ನಾಲ್ಕು ಜನರೇಟರ್‌ಗಳು ಆ ಕೆಲಸ ಕೂಡ ಅಷ್ಟು ಫಾಸ್ಟ್ ಆಗಿ ನಡೆಯುತ್ತಿಲ್ಲ. It is a very good project and the engineers are doing their best. ಭೂಮಿಯೊಳಗಡೆ ಕೊರೆದು, ಬೆಟ್ಟದೊಳಗಡೆ ಕೊರೆದು ಬಿಲ್ಡಿಂಗ್ಸ್ ಇಲ್ಲದೇ ಒಳಗಡೆ ಬಹಳ ಚೆನ್ನಾಗಿ ಮಾಡಿದ್ದಾರೆ. ಎಂ.ಎಲ್‌ಎಗಳು ಕೆಲವರು ನೋಡಿರಬಹುದು. ಕೆಲವರು ನೋಡದೆಯೇ ಇರಬಹುದು. ಇದನ್ನು ತಾವು ನೋಡಬೇಕು. ವರಾಹಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟನ್ನು ತಾವು ನೋಡಬೇಕೆಂದು ನಾನು ರಿಕ್ವೆಸ್ಟ್ ಮಾಡುತ್ತಿದ್ದೇನೆ. ಇದೇ ರೀತಿ ಶಿಂಷಾ ನೀರಿನಿಂದ ಪವರ್‌ಜನರೇಷನ್ ಜಾಸ್ತಿ ಮಾಡಬೇಕು. ಎರಡನೆಯದು ಮೇಕೆದಾಟುವಿನಲ್ಲಿ ಅಲ್ಲಿ ಕೂಡ ಪವರ್ ಜಾಸ್ತಿ ಮಾಡಬೇಕು. ಈ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ನಾವು ಮಾಡುವುದರಿಂದ ಪವರ್ ಚೀಪ್ ಆಗಿ ವರ್ಕ್‌ಔಟ್ ಆಗುತ್ತದೆ. ಜನರಿಗೆ ಮತ್ತು ರೈತರಿಗೂ ಅನುಕೂಲವಾಗುತ್ತದೆ

ಎಂದು ನಾನು ಸಲಹೆ ರೂಪದಲ್ಲಿ ಹೇಳುತ್ತೇನೆ. ತಲಕಾವೇರಿಯಲ್ಲಿ ಮೂರು ವಿಂಡ್ ಫ್ಯಾನ್ಸ್ ಇದೆ. ಇವು ಕೆಟ್ಟು ಹೋಗಿ ಮೂರು ವರ್ಷಗಳಾಗಿದೆ. ಯಾವಾಗ ರಿಪೇರಿ ಮಾಡುತ್ತಾರೆ ಎನ್ನುವುದು ಗೊತ್ತಿಲ್ಲ. ಇವನ್ನು ಆದಷ್ಟುಬೇಗ ರಿಪೇರಿ ಮಾಡಿಸಬೇಕೆಂದು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಥರ್ಮಲ್ ಪ್ಲಾಂಟ್ ಆಟ್ ರಾಯಚೂರು, ಇದು ಪವರನ್ನು ನಾವು ಜನರೇಟ್ ಮಾಡುತ್ತಿದ್ದೇವೆ. 840 ಮೆಗಾವ್ಯಾಟ್ ಈಗ ಜನರೇಟ್ ಮಾಡುತ್ತಿದ್ದೇವೆ. ಅದು ಕಡಿಮೆಯಾಗುತ್ತಿದೆ. This is very dangerous. In this plant ಹತ್ತು ಸಾವಿರ ಟನ್ ಕಲ್ಲಿದ್ದಲನ್ನು ನಾವು ಅಲ್ಲಿ ಉಪಯೋಗಿಸುವುದರಿಂದ ಆ ವೇಸ್ಟ್ ದಿನಕ್ಕೆ ಆರುಸಾವಿರದಿಂದ ಏಳು ಸಾವಿರ ಟನ್ಸ್ ವೇಸ್ಟ್ ಬರುತ್ತಾ ಇದೆ. ಆ ವೇಸ್ಟನ್ನು ಆರು ಸಾವಿರದಿಂದ ಏಳು ಸಾವಿರ ಟನ್ಸ್ ವೇಸ್ಟನ್ನು ಹಾಕುವುದಕ್ಕೆ ಜಾಗವಿಲ್ಲ ಆಪ್ ಎಲ್ಲಿ ತೆಗೆದುಕೊಂಡು ಹೋಗಿ ಹಾಕುವುದಕ್ಕೆ ಜಾಗವಿಲ್ಲದೆ they are finding it very difficult ಅದಕ್ಕೋಸ್ಕರ ನಾವು ಆದಷ್ಟು ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗೆ ಜಾಸ್ತಿ ಪ್ರೋತ್ಸಾಹ ಕೊಟ್ಟು whenever possible, ವಾಟರ್ ಸೋರ್ಸ್ ಎಲ್ಲಿದೆ, ಅಲ್ಲಿ ಟ್ಯಾಪ್ ಮಾಡಿ ಪವರನ್ನು ಜನರೇಟ್ ಮಾಡಬೇಕು ಎಂದು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಆಮೇಲೆ ಪವರ್ ಪ್ರಾಜೆಕ್ಟ್‌ನಲ್ಲಿ ಕರ್ನಾಟಕದಲ್ಲಿ ಯಾವ ಯಾವ ಸಾಲಿನಲ್ಲಿ ಈ ವಿದ್ಯುತ್ ಉತ್ಪಾದನೆಗೆ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಬಂಡವಾಳ ಹೂಡಿದ್ದಾರೆ, ಅದು ಲೆಕ್ಕ ಇಲ್ಲ. ಯಾವ ಯಾವ ಸಾಲಿನಲ್ಲಿ whether in the last ten years, or fifteeen years or twenty yearsಗಳಲ್ಲಿ ನಮ್ಮ ರಾಜ್ಯದಲ್ಲಿ ಎಷ್ಟು ಬಂಡವಾಳ ಕೇಂದ್ರ ಸರ್ಕಾರ ಹೂಡಿದೆ ಎಂಬುದನ್ನು ನನಗೆ ತಿಳಿಸಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಈ ಪವರ್ ಜನರೇಷನ್ ಮಾಡಬೇಕಾದರೆ, Karnataka State is one of the highest income tax and Excise Duty payers to the Central Government in the country. ನನಗೆ ತಿಳಿದಿರುವ ಹಾಗೆ ಭಾರತೀನಗರ ಕ್ಷೇತ್ರ ಒಂದರಲ್ಲೇ more labourers and poor people there, ಎಲ್ಲಾ ಬಡವರು, ಮಧ್ಯಂತರ ಜನರು ಇರುವ ಭಾರತೀನಗರ ಕ್ಷೇತ್ರದಲ್ಲಿ we are paying Rs. 1500 crores by way of income tax and central excise duty. When we are paying highest tax, why we are not demanding financial assistance from the Centre for development of power projects in Karnataka State? ಈ 47 ವರ್ಷಗಳಲ್ಲಿ ಬೇರೆ ರಾಜ್ಯಕ್ಕೆ ಕೊಟ್ಟಿದ್ದಾರೆ ಎಂದು ಗೊತ್ತಾಗಿದೆ. ಅದರಲ್ಲಿ ಮಹಾರಾಷ್ಟ್ರಕ್ಕೆ, ತಮಿಳುನಾಡಿಗೆ, ಆಂಧ್ರಪ್ರದೇಶಕ್ಕೆ ಕೊಟ್ಟಿದ್ದಾರೆ ಎಂಬುದು ಗೊತ್ತಾಗಿದೆ. ನಮ್ಮ ರಾಜ್ಯಕ್ಕೆ ಏಕೆ ಕೊಟ್ಟಿಲ್ಲ? why the State Government has not taken the responsibility of collecting funds from the Central Government? ಇರುವುದರಲ್ಲೇ ಪವರ್ ಕಾರ್ಪೋರೇಷನ್ ಒಳ್ಳೆಯ ಕೆಲಸ ಮಾಡುತ್ತಿದೆ. I request the Government not be transfer the Managing Directors now and then. The MD should be appointed for a definite period. That is very important. The Board to be nominated should be for a definite period. No hydro-electric

project should be given to private enterprises. ಪ್ಯಾರಾದಲ್ಲಿ 12 ರಲ್ಲಿ ಹೇಳುತ್ತಾರೆ. Regarding Transmission & Distribution Losses. Transmission and distriibution losses should be reduced. ಪವರ್ ಕಾರ್ಪೋರೇಷನ್ ನಿಂದ ನಾಲ್ಕು ಪರಸೆಂಟ್ ಎಂದು ಹೇಳುತ್ತಾರೆ. ಇಲ್ಲಿ ನಾಲ್ಕೋ ಐದು ಪರಸೆಂಟ್ ಟೋಟಲ್ 20 ಪರಸೆಂಟ್‌ವರೆಗೂ ಇಲ್ಲಿ ಹೆಚ್ಚಾಗಿ ಪವರ್ ಮಿಸ್‌ಯೂಸ್ ಆಗುತ್ತಿದೆ. ಇದನ್ನೇನಾದರೂ ಮಾಡಿಕರ್ಬ್ ಮಾಡಿ ಕಡಿಮೆ ಮಾಡಿದರೆ, I think, we can invest more funds on Hydro-electric projects. ಬೆಂಗಳೂರಿನಲ್ಲಿ ಎರಡು-ಮೂರು ವರ್ಷಗಳ ಹಿಂದೆ 12 ಟ್ರಾನ್ಸ್‌ಫಾರ್ಮರ್ಸ್‌ಗಳನ್ನು ಕೊಂಡುಕೊಂಡಿದ್ದಾರೆ. These Transformers are not upto the mark. ಇದು ಆಗಿಂದಾಗ್ಗೆ ರಿಪೇರಿಗೆ ಬಂದು ಬೆಂಗಳೂರು ನಗರದಲ್ಲಿ ಈ ವಿದ್ಯುಚ್ಛಕ್ತಿಯ ಅಭಾವ ಜಾಸ್ತಿಯಾಗುತ್ತಿದೆ. ಅದಕ್ಕೋಸ್ಕರ Transformers should be maintained properly. ಉದಾಹರಣೆ ಹೇಳಬೇಕಾದರೆ 1980 ರಲ್ಲಿ ಬೆಂಗಳೂರು ನಗರದಲ್ಲಿರುವ ಒಂದು ಬದಲಾವಣೆಗೆ ಎರಡು-ಮೂರು -ನಾಲ್ಕು ಟ್ರಾನ್ಸಫಾರ್ಮರ್ಸ ಸಿಗುತ್ತಿತ್ತು. ಈಗ ಈ ಮಲ್ಟಿಸ್ಟೋರೀಡ್ ಬಿಲ್ಡಿಂಗ್ಸ ಬಂದು ಅವರು ಒಂದೊಂದು ಕಂಪೌಂಡ್‌ನಲ್ಲೇ ಒಂದು-ಎರಡು ಟ್ರಾನ್ಸ್‌ಫಾರ್ಮರ್ಸ್ ಇಟ್ಟುಕೊಂಡಿದ್ದಾರೆ. ಬಿಲ್ಡರ್ಸ ಇವರ ಹಾವಳಿಯಿಂದ ಟ್ರಾನ್ಸ್‌ಫಾರ್ಮರ್ಸ್ ಅವರ ಕಾಂಪೌಂಡ್‌ನಲ್ಲಿ ಇಟ್ಟುಕೊಂಡು ಸುತ್ತಮುತ್ತ ಇರುವ ಬಡ ಜನರಿಗೆ ಮಿಡ್ಲಕ್ಲಾಸ್ ಪೀಪಲಗೆ ಅವರಿಗೆ ಸರಿಯಾಗಿ ಸಿಗುತ್ತಿಲ್ಲ. ಮಕ್ಕಳು ರಾತ್ರಿ 11 ಗಂಟೆಗೆ ನಮ್ಮ ಮನೆಗೆ ಬರುತ್ತಾರೆ. ಸ್ವಾಮಿ, ನಮಗೆ ಪರೀಕ್ಷೆ ಇದೆ, ನಮಗೆ ಪವರ್ ಕೊಡಿ ಎಂದು. ನಾವು ಯಾವಾಗ ಓದುವುದು ಎಂದು ಕೇಳುತ್ತಾರೆ. ಇಲ್ಲಿ ಪವರಕಟ್ 4 ಗಂಟೆ ಎಂದು ಹೇಳುತ್ತಾರೆ, ಆದರೆ ಎಂಟು-ಹತ್ತು ಗಂಟೆಗಳ ಕಾಲ ಪವರ್ ಇಲ್ಲದಂತಾಗುತ್ತಿದೆ. ಅದನ್ನು ಕೇಳಿದರೆ ಅಧಿಕಾರಿಗಳ ಕಿವಿಗೆ ಬೀಳುತ್ತಿಲ್ಲ. I don't say, all of them are bad. There are also few good officers. Others do not bother. ಹೋಗಿ ಎಂ.ಎಲ್.ಎ.ಗೆ ಹೇಳಿ ಮಿನಿಸ್ಟರ್‌ಗೆ ಹೇಳಿ ಹೋಗಿ ಎಂದು ಹೇಳುತ್ತಾರೆ. If this is the way, ಇದನ್ನು ನಾವು ಯಾರಿಗೆ ಹೇಳಬೇಕು ಹೇಳಿ ಸ್ವಾಮಿ. They do not take the responsibility and they do not bother about the real problem of the City. ತಾವು ಮತ ತೆಗೆದುಕೊಂಡು ಬಂದಿರುವ ಜನರು, ಅವರ ಹತ್ತಿರ ಬೈಯ್ದಾಗ ಬೈಯಿಸಿಕೊಳ್ಳಬೇಕು. ಅವರು ರಾತ್ರಿ 12 ಗಂಟೆಗ ಬಂದರೆ ಬಾಗಿಲು ತೆಗೆಯಬೇಕು. ಅವರಿಗೆ ಉತ್ತರ ಹೇಳಬೇಕು. ನಾವು ಫೋನ್ ಮೂಲಕ ಕಂಟ್ಯಾಕ್ಟ ಮಾಡಿದರೆ ಸಹನೆಯಿಂದ ಉತ್ತರ ಹೇಳುವುದಕ್ಕೆ ಬರುವುದಿಲ್ಲವಲ್ಲಾ ಸ್ವಾಮಿ. They don't bother ಅದಕ್ಕೋಸ್ಕರ ಈ ಬಹು ಅಂತಸ್ತಿನ ಕಟ್ಟಡಗಳವರು ಆದಷ್ಟು ಅವರೇ ಸ್ವಂತ ಜನರೇಟ್ ಇಟ್ಟುಕೊಂಡು ಪವರ್ ಜನರೇಟ್ ಮಾಡಿಕೊಳ್ಳಲಿ, until the power position improves in Bangalore City and Karnataka. ಇವರ ಹಾವಳಿಯಿಂದ ತಪ್ಪಿಸಬೇಕು. ಈ ಬಿಲ್ಡರ್ಸಗಳ ಹಾವಳಿ ತಪ್ಪಲಿಲ್ಲ ಎಂದರೆ ಪವರ ಇಲ್ಲ. ನೀರೂ ಇಲ್ಲ. ಈ ಅಂಡರಗ್ರಾಂಡ್ ಡ್ರೈನೇಡ್ ಸಿಸ್ಟಂ ಎಲ್ಲ ಹಾಳಾಗಿ ಹೋಗಿದೆ ಇವರೇನೂ ಮೇಲೆಯೇ

ಹೋಗುತ್ತಿರುತ್ತಾರೆ ಬಿಲ್ಡಿಂಗ್ ಕಟ್ಟಿಕೊಂಡು. ಕೆಳಗಡೆ ಅಂಡರ್‌ಗ್ರೌಂಡ್ ಡ್ರೈನೇಜ್ ಸಿಸ್ಟಂನಲ್ಲಿ ಒಳಚರಂಡಿಯ ದುರ್ವ್ಯವಸ್ಥೆ ಬಗ್ಗೆ ಹೇಳುವುದಕ್ಕಾಗುವುದಿಲ್ಲ. ಆ ಮಟ್ಟಕ್ಕೆ ಬಂದಿದೆ. ಆ ಒಳಚರಂಡಿ ವೇಸ್ಟ್ ಯಾರದೋ ಪಾಯಿಖಾನೆ ಯಾರದೋ ಮನೆಗೆ ಬರುತ್ತಿದೆ. ದೇವರ ಮನೆಗೆ ಬಂದು ಅಲ್ಲಿಂದ ಫ್ರಂಟ್ ಗೇಟನಲ್ಲಿ ಹೋಗುವ ಮಟ್ಟಕ್ಕೆ ಬಂದಿದೆ. ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆ They have failed. They are not in a position to improve the sanitary system within the old city of Bangalore. ಇದನ್ನು ಸರಿಮಾಡಲು ಅವರಿಗೆ ಆಗತ್ತಾ ಇಲ್ಲ. ನ್ಯಾರೊ ರೋಡ್ಸ್ ಇರುವುದರಿಂದ ಅಗೆಯುವುದಕ್ಕೆ ಜಾಗ ಇಲ್ಲ. ಇನ್ನು ಕೆಇಬಿಯಲ್ಲಿ ಲೆಡ್ಜರ್ ಬರೆಯುವ ಕ್ಲಾರ್ಕಗಳು ಬಹಳ ತೊಂದರೆ ಕೊಡುತ್ತಾರೆ. ತೊಂದರೆ ಏನೆಂದರೆ they are not maintaining legers properly. ಕೆಲವು ತಿಂಗಳುಗಳು ಕಳೆದಮೇಲೆ ಬ್ಯಾಕ್ ಬಿಲ್ಲನ್ನು ಕಳುಹಿಸುತ್ತಾರೆ. ಜನರು ಕಛೇರಿಗೆ ಲೀವ್ ಹಾಕಿ ಅಲ್ಲಿಗೆ ಹೋಗಬೇಕು. One has to go to KEB office a number of times to rectify this error and get corrected bills from the KEB. ಅವನೇನಾದರೂ ಪೇಮೆಂಟ್ ಮಾಡಿ ಬಿಲ್ ಏನಾದರೂ ಕಳೆದುಬಿಟ್ಟಿದ್ದರೆ ಆ ಹಣವನ್ನು ಮತ್ತೆ ಕಟ್ಟಬೇಕಾಗುತ್ತದೆ. This back billing is a major problem in the Bangalore City. ಕ್ಯಾಷ್ ಕೌಂಟರ್ಸ್‌ಗಳನ್ನು ಇನ್ನೂ ಹೆಚ್ಚಾಗಿ ಬೆಂಗಳೂರು ಸಿಟಿಯಲ್ಲಿ ತೆರಯಬೇಕಾಗುತ್ತದೆ. ಈಗ ಬೆಂಗಳೂರು ಸಿಟಿಯಲ್ಲಿ ಇರುವ ಕ್ಯಾಷ್ ಕೌಂಟರ್ಸ್ are the sufficient. and as such I request the Hon'ble Minister for power to increase the number of cash counters in Bangalore City. ನೂರು ರೂಪಾಯಿ ಮೇಲ್ಪಟ್ಟು ಇರುತ್ತದೆ, ಚೆಕ್ ಮೂಲಕ ಅದನ್ನು ತೆಗೆದುಕೊಳ್ಳುವುದಕ್ಕೆ ಆರ್ಡರ್ ಮಾಡಬೇಕು ಎಂದು ಹೇಳುತ್ತೇನೆ. ಚೆಕ ರೂಪದಲ್ಲಿ ತೆಗೆದುಕೊಳ್ಳಬೇಕು. ಚೆಕ್ಕಿನ ಹಿಂದುಗಡೆ ಮೀಟರ್ ನಂಬರ್ ಹಾಕಿ ಅದನ್ನು ಹಾಕಲು ಒಂದು ಬಾಕ್ಸ್ ಇಟ್ಟರೆ ಅದರಲ್ಲಿ ಹಾಕುಬಹುದು. ಚೆಕ್‌ನ ಹಿಂದುಗಡೆ ಅವರ ನಂಬರ್, ಹೆಸರು, ಮೀಟರ್ ನಂಬರ್ ಬರೆದು ಅದರಲ್ಲಿ ಹಾಕಲಿ. ಚೆಕ್ಕನ್ನು ಏನೂ ಮಾಡುವುದಕ್ಕಾಗುವುದಿಲ್ಲ. They have to deposit it into the account. ಚೆಕ್ ಮಿಸ್ ಯೂಸ್ ಆಗುವುದಿಲ್ಲ. ಚೆಕ್ ಮೂಲಕ ಕಲೆಕ್ಟ ಮಾಡುವುದು ಬಹಳ ಒಳ್ಳೆಯ ಸಲಹೆ ಎಂದು ನಾನು ಹೇಳುತ್ತಿದ್ದೇನೆ. ಪವರ್ ಬಗ್ಗೆ ಹೇಳುವುದಾದರೆ it is a very difficult task which the Government has to solve. Anyhow, our Government is putting all their efforts to generate more power within the short of all the Hon'ble Member, the Government is going to generate more power to the people of Karnataka and particularly of Bangalore.

(ಶ್ರೀ ಎಂ.ಎಸ್. ಪಾಟೀಲ್ (ಉಪಾಧ್ಯಕ್ಷರು) ಪೀಠವನ್ನಲಂಕರಿಸಿದರು)

ಉಪಾಧ್ಯಕ್ಷರು : ಈಗ 6.05 ಗಂಟೆ ಆಯಿತು. ಇನ್ನು ಶಾಸನ ರಚನೆ ಇದೆ.

ಶ್ರೀ ಎನ್. ರಾಜಣ್ಣ : ನಾನು ಮಾತನಾಡುವುದು ಕೆಇಬಿ ಮತ್ತು ಪವರ್ ಕಾರ್ಪೋರೇಷನ್.

Now I have to touch Karnataka Housing Board ಅದಕ್ಕೆ ಅರ್ಧ ಗಂಟೆಯಾಗುತ್ತದೆ. If you are going to allow me Monday afternoon, I will be happy.

ಉಪಾಧ್ಯಕ್ಷರು : ಇನ್ನೊಂದು ವಿಷಯ ಮಾತನಾಡಿ ಮುಗಿಸಿಬಿಡಿ.

ಶ್ರೀ ಎನ್. ರಾಜಣ್ಣ : ಕಟ್‌ಡೌನ್ ಮಾಡಿವರೆ ನಾನು ತಪ್ಪುಗಳನ್ನು ಮಾಡಿಬಿಡುತ್ತೇನೆ. ನಾನು ಮಾತನಾಡಬೇಕಾಗಿರುವ ವಿಷಯಗಳನ್ನು ಬಗ್ಗೆ ಎಲ್ಲಾ ಬರೆದಿಟ್ಟಿದ್ದೇನೆ.

ಉಪಾಧ್ಯಕ್ಷರು : ಈ ಬಜೆಟ್ ಮೇಲೆಯೂ ಒಂದು ಅವಕಾಶ ಮಾಡಿ ಕೊಡುತ್ತೇನೆ. ಆಗ ತಾವು ಮಾತನಾಡಬಹುದು.

ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(1) ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ವಿಧೇಯಕ, 1996

SRI M.C. NANAIAH (Minister for Law and Parliamentary Affairs and Information and publicity) : Sir, I beg to move:

``That the Karnataka Court Fees and Suits Valuation (Amendment) Bill, 1996 be taken into consideration".

The question was proposed.

ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಉಪಾಧ್ಯಕ್ಷರೇ, ಇವರು ಇಲ್ಲಿ ಬರೀ ಎರಡು ಸೆಕ್ಷನಗೆ ಅಮೆಂಡಮೆಂಟ್ ತಂದಿದ್ದರೂ ಕೂಡ ವಿಷಯ ಬಹಳ ಗಹನವಾಗಿದೆ. ಏಕೆಂದರೆ ಇದು ಬಡಜನರನ್ನು, ರೈತಾಪಿ ಜನರನ್ನು ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುವ ಜನಗಳು ಕೊಡುವ ಫೀಜು. ಅವರ ದಿನನಿತ್ಯದ ದಾಖಲೆಗಳಲ್ಲಿ ತೆಗೆದುಕೊಳ್ಳುವುದಕ್ಕೆ , ಸಂಬಂಧಪಟ್ಟಂಥ ಮಸೂದೆ. ಇದರಲ್ಲಿ ಇದುವರೆಗೂ ಸರ್ಟಿಫೈಡ್ ಕಾಪಿ ತೆಗೆದುಕೊಳ್ಳುವುದಕ್ಕೆ ಕೂಡ 15 ರೂಪಾಯಿ ಇತ್ತು. ಇವರೇನು ಮಾಡಿದ್ದಾರೆ ಎಂದರೆ ಮೂರು ಪಟ್ಟು ಜಾಸ್ತಿಮಾಡಿಬಿಟ್ಟಿದ್ದಾರೆ. 15 ರಿಂದ 50 ರೂಪಾಯಿ. ಈಗ ಈ ಹಣವನ್ನು ಯಾರು ಕೊಡುವುದು? ಬಡವರು. ನೂರು ಪರಸೆಂಟ್ ಬಡವರು ಯಾರು ನೊಂದಿದ್ದಾರೋ ಅವವು ಕೊಡುವುದು. ನಾನು ತಿಳಿದುಕೊಂಡಿರುವ ಹಾಗೆ ತಾವೇನೂ ಲೀಗಲ್ ಏಡ್ ಅಧ್ಯಕ್ಷರು ಎಂದು ಕಾಣಿಸುತ್ತದೆ. ಈಗಿನ ಕಾಲ ಏನು ಎಂದರೆ ಬಡವರಿಗೆ ನ್ಯಾಯ ಪುಕ್ಕಟೆ ಸಿಗಬೇಕು. ಸಿಗುವ ಹಾಗೆ ಮಾಡಬೇಕು ಎಂದು ಸರ್ಕಾರ ಇವತ್ತು ಲೀಗಲ್ ಹೆಡ್ ಸೆಲ್‌ಗಳನ್ನು ಪ್ರಾರಂಭ ಮಾಡಿದೆ. ಲೀಗಲ್ ಎಡ ಸ್ಟಾರ್ಟ್ ಮಾಡಿ ಅದರ ಅಧ್ಯಕ್ಷರು ನೀವೇ ಆಗಿ ಲಾಯರುಗಳಿಗ ದುಡ್ಡು ಕೊಟ್ಟು ಕೇಸುಗಳನ್ನು ಪುಕ್ಕಟೆ ನಡೆಸುವ ಕಾಲದೊಳಗೆ ನೀವು